ಕನ್ನಡ

# ಬಾಲಭಾರತಿ

ಮೂರನೆಯ ಇಯತ್ತೆ



Tele MANAS
National Tele Mental Health Programme
14416

# ಟೆಲಿ ಮಾನಸ ಸಹಾಯವಾಣಿ.

**Tele-MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24×7 ಉಚಿತ, ಏಕಾತ್ಮಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

## ಮನೋದರ್ಪಣ

ಮನೋದರ್ಪಣ (8448440632) ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಈ ಪಠ್ಯಪುಸ್ತಕವನ್ನು ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ಪ್ರಶಿಕ್ಷಣ ಪರಿಷದ, ಮಹಾರಾಷ್ಟ್ರ, ಪುಣೆ ಇವರು ತಯಾರಿಸಿದ ಅಭ್ಯಾಸಕ್ರಮ ಮತ್ತು ಪಠ್ಯಕ್ರಮಗಳಿಗನುಸಾರ ಸಿದ್ಧಪಡಿಸಲಾಗಿದ್ದು, ಅವರ ಮೂಲಕ ಈ ಪಠ್ಯಪುಸ್ತಕದ ಪರಿಶೀಲನೆ ಮಾಡಲಾಗಿದೆ.
ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.04.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 13.04.2026 ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2026-2027 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಕನ್ನಡ

# ಬಾಲಭಾರತಿ

## ಮೂರನೆಯ ಇಯತ್ತೆ



महाराष्ट्र राज्य पाठ्यपुस्तक निर्मिती व अभ्यासक्रम संशोधन मंडळ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.

ಇಲ್ಲಿರುವ ಚೌಕಟ್ಟಿನಲ್ಲಿಯ Q.R. Code ಸ್ಮಾರ್ಟ್‌ಫೋನ ಮೂಲಕ ಸ್ಕ್ಯಾನ ಮಾಡಿದರೆ ನಿಮಗೆ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯಪುಸ್ತಕದಲ್ಲಿಯ ಘಟಕಗಳಿಗೆ ಸಂಬಂಧಿಸಿದ ದೃಕ್, ಶ್ರಾವ್ಯ ಮತ್ತು ದೃಕ್‌ಶ್ರಾವ್ಯ ಸ್ವರೂಪದಲ್ಲಿ ಅಧ್ಯಯನ-ಅಧ್ಯಾಪನ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2026

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-411004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ-ಸದಸ್ಯ**

ಶ್ರೀಮತಿ ಶೈಲಜಾ ದೇಶಪಾಂಡೆ (ಅಧ್ಯಕ್ಷ)
ಶ್ರೀಮತಿ ಮೀನಾಕ್ಷಿ ಹನಗಂಡಿ (ಸದಸ್ಯ)
ಶ್ರೀಮತಿ ಸುವರ್ಣಾ ವ್ಹಿ. ದೀಕ್ಷಿತ (ಸದಸ್ಯ)
ಶ್ರೀ. ಮಹಾದೇವ ಎಸ್. ಜಾವೀರ (ಸದಸ್ಯ)
ಶ್ರೀ. ಭೀಮಾಶಂಕರ ಎಚ್. ಸಲಗರ (ಸದಸ್ಯ)
ಶ್ರೀ. ಪ್ರವೀಣ ಜಿ. ಗಿರಣಿ (ಸದಸ್ಯ)
ಶ್ರೀ. ದಯಾನಂದ ಟಿ. ಹಂಜಗಿ (ಸದಸ್ಯ)
ಶ್ರೀ. ಆನಂದ ಎನ್. ಭಾವಿಕಟ್ಟಿ (ಸದಸ್ಯ)
ಶ್ರೀ. ಶಿವರಾಜ ಕೆ. ಕೂಟನೂರ (ನಿಮಂತ್ರಿತ-ಸದಸ್ಯ)
ಶ್ರೀಮತಿ ರತ್ನಾ ಎಸ್. ಪಟ್ಟಣ (ನಿಮಂತ್ರಿತ-ಸದಸ್ಯ)
ಶ್ರೀಮತಿ ಕೇತಕಿ ಜಾನಿ (ಪ್ರಭಾರಿ ವಿಶೇಷಾಧಿಕಾರಿ, ಕನ್ನಡ)

**ಕನ್ನಡ ಸಂಯೋಜನ ಪ್ರಮುಖರು**

ಶ್ರೀಮತಿ ಕೇತಕಿ ಜಾನಿ
ಪ್ರಭಾರಿ ವಿಶೇಷಾಧಿಕಾರಿ, ಕನ್ನಡ
ಮತ್ತು
ವಿದ್ಯಾಸಚಿವೆ (ಭಾಷಾ)
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪುಣೆ-4.

**ಗುಣವತ್ತಾ ಸಮೀಕ್ಷಕ**

ಡಾ|| ಕೃ.ಶಿ. ಹೆಗಡೆ (ಗುಣವತ್ತಾ ಪರೀಕ್ಷಕ)
ಶ್ರೀ. ಚಂದ್ರಕಾಂತ ದೇಶಪಾಂಡೆ (ಕಾಯದೆ ತಜ್ಞ)
ಶ್ರೀ. ಬಿ. ಎನ್. ಶೋಭಾ (CWSN ತಜ್ಞ)

**ಮುಖಪುಟ :** ಶ್ರೀ. ಭಟು ರಾಮದಾಸ ಬಾಗಲೆ

**ಚಿತ್ರಕಾರ :** ಶ್ರೀ. ಲಕ್ಷ್ಮಿಕಾಂತ್ ಕಾಳೆ

**ಅಕ್ಷರ ಜೋಡಣೆ :** ವಿಜಯ ಆರ್ಟ ಪ್ರಿಂಟರ್ಸ್, ಪುಣೆ

**ಕಾಗದ** : 70 ಜಿ. ಎಸ್.ಎಮ್. ಕ್ರಿಮವೋವ್ಹ

**ಮುದ್ರಣಾದೇಶ :**

**ಮುದ್ರಕ :**

ನಿರ್ಮಿತಿ:

**ಶ್ರೀಮತಿ ಮಿತಾಲಿ ಶಿತಪ**
ಪ್ರಭಾರಿ ಮುಖ್ಯ ಉತ್ಪಾದನಾ ಅಧಿಕಾರಿ

**ಶ್ರೀ. ರಾಜೇಂದ್ರ ಪಂಡಲೋಸ್ಕರ್**
ನಿರ್ಮಾಣ ಅಧಿಕಾರಿ

**ಪ್ರಕಾಶಕ :**

**ಶ್ರೀ. ಹೇಮಂತ ಬಾಬರ**
ಪ್ರಭಾರಿ ಮುಖ್ಯ ನಿರ್ಮಿತಿ ಅಧಿಕಾರಿ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ
ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ

ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು-ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡುವ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

## ಪ್ರಸ್ತಾವನೆ

ಪ್ರಿಯ ವಿದ್ಯಾರ್ಥಿಗಳೇ,

ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗಿದೆ. ಮೂರನೆಯ ತರಗತಿಯ ಕನ್ನಡ ಬಾಲಭಾರತಿ ಪಠ್ಯಪುಸ್ತಕವನ್ನು ನಿಮ್ಮ ಕೈಗೆ ನೀಡಲು ನನಗೆ ತುಂಬಾ ಸಂತೋಷವಾಗುತ್ತಿದೆ.

ವಿದ್ಯಾರ್ಥಿಗಳೇ, ನೀವು ಒಂದು ಮತ್ತು ಎರಡನೆಯ ತರಗತಿಯಲ್ಲಿ ಓದಲು ಮತ್ತು ಬರೆಯಲು ಕಲಿತಿದ್ದೀರಿ. ಈಗ ನೀವು ಮೂರನೆಯ ತರಗತಿಗೆ ಬಂದಿದ್ದೀರಿ. ನೀವು ಈ ಕನ್ನಡ ಭಾಷೆಯ ಪಠ್ಯಪುಸ್ತಕವನ್ನು ಓದಲು ಉತ್ಸುಕರಾಗಿರಬೇಕು. ಅದೇ ಉತ್ಸಾಹದಿಂದ ಈ ಪಠ್ಯಪುಸ್ತಕವನ್ನು ತೆರೆದು ಓದಿರಿ. ನಿಮಗೆ ಖಂಡಿತವಾಗಿಯೂ ಈ ಪಠ್ಯಪುಸ್ತಕ ಇಷ್ಟವಾಗುತ್ತದೆ.

ಈ ಪಠ್ಯಪುಸ್ತಕದಲ್ಲಿ ತುಂಬಾ ಸುಂದರವಾದ ಪಾಠಗಳು, ಚಿತ್ರಕಥೆಗಳು ಮತ್ತು ಚಿತ್ರವರ್ಣನೆ ಕೊಡಲಾಗಿದೆ. ಈ ಪಾಠಗಳನ್ನು ಓದುವ ಮೂಲಕ, ನೀವು ಅದರ ಬಗ್ಗೆ ಯೋಚಿಸುತ್ತೀರಿ, ಚರ್ಚಿಸುತ್ತೀರಿ, ಪ್ರಶ್ನೆಗಳನ್ನು ಕೇಳುತ್ತೀರಿ ಮತ್ತು ಈ ಅಂಶಗಳ ಕುರಿತು ನೀವು ನಿಮ್ಮ ಅನುಭವಗಳನ್ನು ವ್ಯಕ್ತಪಡಿಸುತ್ತೀರಿ. ಈ ಎಲ್ಲಾ ಅಂಶಗಳಿಂದ ನೀವು ಹೊಸ ವಿಷಯಗಳನ್ನು ಕಲಿಯುವಿರಿ. ಈ ಪಠ್ಯಪುಸ್ತಕದಲ್ಲಿನ ಗೇಯತೆಯಿಂದ ಕೂಡಿದ ಕವಿತೆಗಳನ್ನು ನೀವು ಲಯಬದ್ಧವಾಗಿ ಹಾಡಲು ಮತ್ತು ನೃತ್ಯರೂಪದಲ್ಲಿ ಪ್ರಸ್ತುತಪಡಿಸಲು ಸಾಧ್ಯವಾಗುತ್ತದೆ. ಈ ಎಲ್ಲಾ ಕವಿತೆಗಳನ್ನು ನೀವು ನಿಮ್ಮ ಸ್ನೇಹಿತರೊಂದಿಗೆ ಓದಿ, ಪಠಿಸಿ ಮತ್ತು ಹಾಡಿ ಆನಂದಿಸುವಿರಿ.

ಈ ಪಠ್ಯಪುಸ್ತಕದಲ್ಲಿನ ಪಾಠ, ಕವಿತೆ, ಚಿತ್ರಕಥೆ, ಚಿತ್ರವರ್ಣನೆ ಹಾಗೂ ವಿವಿಧ ಕೃತಿಗಳಿಗಾಗಿ ಕೊಟ್ಟಿರುವ ಸುಂದರವಾದ, ವರ್ಣರಂಜಿತ ಮತ್ತು ಅಭಿವ್ಯಕ್ತಿಶೀಲ ಚಿತ್ರಗಳು ನಿಮಗೆ ಖಂಡಿತವಾಗಿಯು ಇಷ್ಟವಾಗುತ್ತವೆ. ಸಂದರ್ಭಕ್ಕೆ ಅನುಗುಣವಾಗಿ ಇರುವ ಚಿತ್ರಗಳು ನೀವು ಓದಿದ ಪಠ್ಯವನ್ನು ದೀರ್ಘಕಾಲದವರೆಗೆ ನೆನಪಿಟ್ಟುಕೊಳ್ಳಲು ಸಹಾಯ ಮಾಡುತ್ತದೆ. ಈ ಪಠ್ಯಪುಸ್ತಕದಲ್ಲಿ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ನೀಡಲಾದ ಎಲ್ಲಾ ಚಟುವಟಿಕೆಗಳನ್ನು ಪರಿಹರಿಸುವ ಮೂಲಕ ನಿಮ್ಮ ಭಾಷಾಕೌಶಲ್ಯಗಳು ಮತ್ತಷ್ಟು ಅಭಿವೃದ್ಧಿ ಹೊಂದುತ್ತವೆ. ಹಾಗೆಯೇ ನಿಮ್ಮ ಭಾಷೆಯ ಶಬ್ದಸಂಪತ್ತು ಕೂಡ ಹೆಚ್ಚಾಗುತ್ತದೆ.

ಈ ಪಠ್ಯಪುಸ್ತಕದೊಂದಿಗೆ, ನೀವು ಚೆನ್ನಾಗಿ ಓದಲು ಕಲಿಯುವಿರಿ. ಶುದ್ಧವಾಗಿ, ಅಚ್ಚುಕಟ್ಟಾಗಿ ಬರೆಯಲು ಮತ್ತು ಸ್ಪಷ್ಟವಾಗಿ ಮಾತನಾಡಲು ಕಲಿಯುವಿರಿ. ನೀವು ಪರಸ್ಪರ ಮಾತನಾಡುವಾಗ ಆತ್ಮವಿಶ್ವಾಸದಿಂದ ಸಂವಾದ ನಡೆಸುತ್ತೀರಿ. ಮನೆಯಲ್ಲಿ, ಶಾಲೆಯಲ್ಲಿ, ನೆರೆಹೊರೆಯರೊಂದಿಗೆ ಬೆರೆಯುವಾಗ ಮತ್ತು ಮಾತನಾಡುವಾಗ ನೀವು ಕನ್ನಡ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಸಲು ಕಲಿಯುವಿರಿ. ಪ್ರಿಯ ವಿದ್ಯಾರ್ಥಿಗಳೇ, ಕನ್ನಡ ಭಾಷೆಯನ್ನು ಓದಿ, ಅರ್ಥಮಾಡಿಕೊಳ್ಳಿ, ಮಾತನಾಡಿ, ಬರೆಯಿರಿ ಮತ್ತು ಆನಂದದಿಂದ ಕಲಿಯಿರಿ.

ನಿಮ್ಮ ಶೈಕ್ಷಣಿಕ ಪ್ರವಾಸಕ್ಕೆ ಹೃತ್ಪೂರ್ವಕ ಶುಭಾಶಯಗಳು!

(ಅನುರಾಧಾ ಓಕ್)
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-4

ಪುಣೆ
ದಿನಾಂಕ: 19 ಮಾರ್ಚ್ 2026
ಭಾರತೀಯ ಸೌರ : ಚೈತ್ರ ಶು. 1 ಶಕೆ 1948 ಅಕ್ಷಯ ತೃತೀಯಾ

# ಅಧ್ಯಯನ ಕ್ಷಮತೆ ಮತ್ತು ಅಧ್ಯಯನ ನಿಷ್ಪತ್ತಿ

| ಅ.ಕ್ರ ಕ್ಷಮತೆ | ಅಧ್ಯಯನ ನಿಷ್ಪತ್ತಿ | ಪುಟ ಸಂಖ್ಯೆ |
|---|---|---|
| **C1.1** 1.1.1 | ವಿವಿಧ ಸಂದರ್ಭಗಳಿಂದ ಸ್ವಭಾಷೆಯಲ್ಲಿ ಸುಸಂಗತವಾಗಿ ಐದರಿಂದ ಆರು ವಾಕ್ಯಗಳಲ್ಲಿ ಹೇಳುತ್ತಾನೆ. | 2,10,18,32, 36, 84 |
| 1.1.2 | ಅನುಭವಿಸಿದ ಘಟನೆ/ಪ್ರಸಂಗ ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ತಿಳಿದುಕೊಳ್ಳುವುದಕ್ಕಾಗಿ ಇತರರೊಂದಿಗೆ ಸಂವಾದವನ್ನು ಮಾಡುತ್ತಾನೆ. | 18, 32, 39, 46 |
| 1.1.3 | ನಡೆದ ಪ್ರಸಂಗ/ಘಟನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಅರಿಯಲು ತನ್ನ ಸಹಪಾಠಿಗಳ ಜೊತೆಗೆ ಸಂವಾದ ಸಾಧಿಸುತ್ತಾನೆ. | 32, 63, 66 |
| **C1.2** 1.2.1 | ವರ್ಗದಲ್ಲಿ ವಿವಿಧ ಪ್ರಕಾರದ ಪಠ್ಯಾಂಶದ ವಿಷಯವನ್ನು ಓದಿ ಅವುಗಳಲ್ಲಿಯ ಮೂಲ ಕಲ್ಪನೆಯನ್ನು ಹೇಳುತ್ತಾನೆ. | 3, 10, 14, 18, 39, 44, 48, 50, 53, 66 |
| 1.2.2 | ಪಠ್ಯಾಂಶದಲ್ಲಿಯ ಮೂಲಕಲ್ಪನೆಯನ್ನು ಸ್ವಂತ ಭಾಷೆಯಲ್ಲಿ ಆರರಿಂದ ಎಂಟು ವಾಕ್ಯದಲ್ಲಿ ಹೇಳುತ್ತಾನೆ. | 14, 16, 32, 50, 53, 54, 63 |
| 1.2.3 | ಓದಿದ ಸಾಹಿತ್ಯದಲ್ಲಿಯ ಪಠ್ಯಾಂಶದಲ್ಲಿಯ ಸಾರಾಂಶ ಹೇಳುತ್ತಾನೆ. | 10, 14, 36, 46, 54, 73 |
| **C1.3** (1.3.1) | ತೋರಿಸಿದ, ನೋಡಿದ ವಸ್ತು ಮತ್ತು ಚಿತ್ರಗಳ ಸಂದರ್ಭದಲ್ಲಿ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಮಾಹಿತಿ ಹೇಳುತ್ತಾನೆ. | 3, 42, 43, 52 |
| 1.3.2 | ವಿವಿಧ ಕಾರ್ಯಕ್ರಮದ ಪ್ರಸಂಗದಲ್ಲಿ ಸ್ವ ಭಾಷೆಯಲ್ಲಿ ಶುಭಾಶಯಗಳನ್ನು ಹೇಳುತ್ತಾನೆ. | 41 |
| 1.3.3 | ವರ್ಗ ಸ್ತರದಲ್ಲಿ ಆಯೋಜಿಸಿದ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಾನೆ. | 82, 84 |
| 1.3.4 | ವಿವಿಧ ಕಾರ್ಯಕ್ರಮಗಳ ಪ್ರಸಂಗದಲ್ಲಿ ವಿವಿಧ ವಿಷಯಗಳ ಮೇಲೆ ಭಾಷಣ ಮಾಡುತ್ತಾನೆ. | 82, 84 |
| **CG2**–2.1 2.1.1 | ಪರಿಚಿತ ಅಪರಿಚಿತ ಪಠ್ಯಾಂಶದಲ್ಲಿಯ ಸರಳ ಶಬ್ದ, ಒತ್ತಕ್ಷರಗಳು ಬಂದಿರುವ ಮೂರರಿಂದ ಐದು ವಾಕ್ಯಗಳನ್ನು ವೇಗವಾಗಿ ತಪ್ಪಿಲ್ಲದಂತೆ ಓದುತ್ತಾನೆ. | 2, 35, 51, 55, 57, 61, 67 |
| 2.1.2 | ಪಠ್ಯಾಂಶವನ್ನು ಓದುವಾಗ ಚಿತ್ರ, ಶಬ್ದ, ದೃಶ್ಯ, ಪ್ರತಿಮೆ ಇವುಗಳನ್ನು ಅಳವಡಿಸಿಕೊಂಡು ಅರ್ಥ ತಿಳಿದುಕೊಳ್ಳುತ್ತಾನೆ. | 3, 16, 21, 29, 38, 44 |
| 21.3 | ಓದಿದ ಚಿಕ್ಕ ಪಠ್ಯಾಂಶದ ಅರ್ಥವನ್ನು ಸ್ವಭಾಷೆಯಲ್ಲಿ ಒಂದೆರಡು ವಾಕ್ಯಗಳಲ್ಲಿ ಹೇಳುತ್ತಾನೆ. | 3, 59 |
| 2.1.4 | ಅಪರಿಚಿತ ಪಠ್ಯಾಂಶದಲ್ಲಿಯ ಶಬ್ದಗಳಿಗೆ ಪರಿಚಿತ ಭಾಷೆಯಲ್ಲಿಯ ಪರ್ಯಾಯ ಶಬ್ದ ಹೇಳುತ್ತಾನೆ. | 14, 18, 24, 33 |
| 2.1.5 | ಪಠ್ಯಾಂಶದ ಆಶಯದ ಸಂಬಂಧದಲ್ಲಿ ಅಂದಾಜು ತಿಳಿದುಕೊಂಡು ಸ್ವಭಾಷೆಯಲ್ಲಿ ಹೇಳುತ್ತಾನೆ. | 18, 46 |
| **C2.2** (2.2.1) | ಪುಸ್ತಕದ ಹೊರತುಪಡಿಸಿ ಇತರ ಪಠ್ಯಾಂಶದಲ್ಲಿ ಬಾಲ ಸಾಹಿತ್ಯ, ವರ್ತಮಾನ ಪತ್ರದಲ್ಲಿಯ ಸುದ್ದಿ, ಸೂಚನಾ ಫಲಕ ಇವುಗಳನ್ನು ತಿಳಿದುಕೊಂಡು ಓದಿ ಪರಿಚಿತ ಅಪರಿಚಿತ ಶಬ್ದಗಳ ಪಟ್ಟಿ ತಯಾರಿಸುತ್ತಾನೆ. | 55, 56, 57, 80 |
| 2.2.2 | ವಾಚನ ಕೃತಿಯಲ್ಲಿ ಸಹಭಾಗಿ ಆಗುತ್ತಾನೆ. | 26, 38, 44, 61, 65 |
| 2.2.3 | ಕಥೆ ಕವಿತೆ ಇಲ್ಲವೇ ಇತರ ಸಾಹಿತ್ಯ ಪ್ರಕಾರದಲ್ಲಿಯ ಆಶಯ ತಿಳಿದುಕೊಳ್ಳುತ್ತಾನೆ ಮತ್ತು ಅದರಲ್ಲಿ ಸ್ವಂತದ ಮಾಹಿತಿಯನ್ನು ಹೇಳುತ್ತಾನೆ. | 1, 9, 10, 20, 26, 38, 42, 53, 58, 60, 65 |
| **CG3** C3.1 3.1.1 | ಬರವಣಿಗೆಯ ನಿಯಮಾನಸಾರ ವಾಕ್ಯ ರಚನೆಯ ಕ್ರಮ ತಿಳಿದುಕೊಂಡು ವಾಕ್ಯಗಳನ್ನು ತಯಾರಿಸುತ್ತಾನೆ. | 14, 19, 25, 34, 50 |
| 3.1.2 | ವಿದ್ಯಾರ್ಥಿ ಓದಿದ ಪಾಠದಲ್ಲಿಯ ಘಟನೆಗಳ ಕ್ರಮವನ್ನು ಸುಸಂಗತವಾಗಿ ಬರೆಯುತ್ತಾನೆ. | 14, 36 |
| 3.1.3 | ಪಠ್ಯಾಂಶದಲ್ಲಿಯ ಶೀರ್ಷಿಕೆ ಉಪ ಶೀರ್ಷಿಕೆ ಗುರುತಿಸಿ ಬರೆಯುತ್ತಾನೆ. | 20, 34 |
| 3.1.4 | ಸ್ವಅನುಭವವನ್ನು ಕ್ರಮಬದ್ಧ ರೀತಿಯಲ್ಲಿ ರಚಿಸಿ ಬರೆಯುತ್ತಾನೆ. | 14, 19, 50, 60 |
| **C3.2** (3.2.1) | ಓದಿದ ಪಠ್ಯಾಂಶದಲ್ಲಿಯ ವಿಷಯದ ಬಗ್ಗೆ ನಾಲ್ಕರಿಂದ ಆರು ವಾಕ್ಯಗಳಲ್ಲಿ ಬರೆಯುತ್ತಾನೆ. | 14, 25, 73, 84 |
| 3.2.2 | ಕೊಟ್ಟ ವಿಷಯದ ಸಂದರ್ಭದಲ್ಲಿ ಸ್ವಭಾಷೆಯಲ್ಲಿ ಸುಸಂಗತವಾಗಿ 5 ರಿಂದ 6 ಸರಳ ವಾಕ್ಯಗಳನ್ನು ಬರೆಯುತ್ತಾನೆ. | 19, 25, 34, 50, 60, 73 |
| **C3.3** (3.3.1) | ವಿವಿಧ ಸುವಿಚಾರ, ವಚನಗಳ ಅನುಲೇಖನ ಮಾಡುತ್ತಾನೆ. | 15, 33, 66, 81 |
| 3.3.2 | ಪದ್ಯದಲ್ಲಿಯ ಪ್ರಾಸಯುಕ್ತ ಶಬ್ದಗಳನ್ನು ಬರೆಯುತ್ತಾನೆ. | 2, 39, 60, 66 |
| 3.3.3 | ಸ್ವ ಅನುಭವವನ್ನು ಸ್ವಭಾಷೆಯಲ್ಲಿ ಐದರಿಂದ ಆರು ವಾಕ್ಯದಲ್ಲಿ ಬರೆಯುತ್ತಾನೆ. | 14, 50, 60 |
| **C3.4** (3.4.1) | ಶಬ್ದಗಳಲ್ಲಿ ಯೋಗ್ಯ ಅಂತರವಿಟ್ಟು ವಿರಾಮ ಚಿಹ್ನೆಗಳ ಸಹಿತ ಅನುಲೇಖನವನ್ನು ಮಾಡುತ್ತಾನೆ. | 15, 33, 47, 57 |

| | | |
|---|---|---|
| 3.4.2 | ಯೋಗ್ಯ ವಿರಾಮ ಚಿಹ್ನೆಗಳ ಉಪಯೋಗ ಮಾಡಿ ವಾಕ್ಯ ರಚನೆಯನ್ನು ಮಾಡುತ್ತಾನೆ. | 14, 25, 50 |
| 3.4.3 | ನಾಮಪದ, ಸರ್ವನಾಮ, ಲಿಂಗ, ವಚನ ಇವುಗಳ ವಿಚಾರವನ್ನು ಮಾಡಿ ವಾಕ್ಯ ರಚನೆಯನ್ನು ಮಾಡುತ್ತಾನೆ. | 11, 15, 19, 20, 33, 34, 37, 51, 59 |
| **CG4 (C4.1)** (4.1.1) | ಒಂದು ಶಬ್ದಕ್ಕೆ ಸಮಾನ ಅರ್ಥವಿರುವ ಇನ್ನೊಂದು ಶಬ್ದ ಹೇಳುತ್ತಾನೆ. | 14, 18, 24, 39 |
| 4.1.2 | ಒಂದೇ ಶಬ್ದದಲ್ಲಿ ಇರುವ ಬೇರೆ ಬೇರೆ ಅರ್ಥಗಳನ್ನು ಹುಡುಕುತ್ತಾನೆ. | 14, 24, 80 |
| 4.1.3 | ಶಬ್ದ ವಿಸ್ತಾರ ಮಾಡುತ್ತಾನೆ. | 25, 54, 64 |
| 4.1.4 | ಸಮೂಹದರ್ಶಕ ಶಬ್ದ ಮತ್ತು ಶಬ್ದ ಸಮೂಹವನ್ನು, ಸೂಚಿಸುತ್ತ, ಒಂದು ಶಬ್ದ ಹುಡುಕಿ ಹೇಳುತ್ತಾನೆ. | 55 |
| **C4.2** (4.2.1) | ವಿವಿಧ ಪ್ರಸಂಗ ಮತ್ತು ಚಿತ್ರಗಳ ವರ್ಣನೆ ಮಾಡುವುದಕ್ಕಾಗಿ ಶಬ್ದಗಳ ರಚನೆ ಮಾಡುತ್ತಾನೆ. | 3, 25, 42, 43, 52 |
| 4.2.2 | ಭಾಷಾ ಚಿತ್ರಗಳ ಆಟಗಳನ್ನು ಆಡುವಾಗ ಹೊಸ ಶಬ್ದಗಳ ಉಪಯೋಗ ಮಾಡುತ್ತಾನೆ. ಉದಾಹರಣೆಗೆ ಶಬ್ದಗಳ ಅಂತ್ಯಾಕ್ಷರಿ, ಪದಬಂಧ, ಒಂದು ಶಬ್ದದಿಂದ ಆರಂಭವಾಗುವ ಶಬ್ದಗಳು, ಶಬ್ದ ಸರಪಳಿ ಇತ್ಯಾದಿ. | 7, 11, 51 |
| C4.3 (4.3.1) | ವಚನ, ಜೋಗುಳಪದ ಇವುಗಳಲ್ಲಿಯ ಕಾವ್ಯ ಪಂಕ್ತಿಯನ್ನು ಓದಿ ಅವುಗಳಲ್ಲಿಯ ಅಪರಿಚಿತ ಶಬ್ದಗಳ ಅರ್ಥ ಹೇಳುತ್ತಾನೆ. | 15, 33, 79, 80 |
| 4.3.2 | ವಿವಿಧ ಜನಪದ ಸಾಹಿತ್ಯದಲ್ಲಿ, ಗೀಗಿ ಪದ, ಜನಪದ ಕಥೆ, ಜನಪದ ಗೀತೆ ಇತ್ಯಾದಿಗಳಲ್ಲಿಯ ಅಪರಿಚಿತ ಶಬ್ದಗಳ ಸಂಗ್ರಹ ಮಾಡುತ್ತಾನೆ. | 79, 80 |
| **CG5 (C5.1)** (5.1.1) | ಶಾಲೆಯ ಗ್ರಂಥಾಲಯಕ್ಕೆ, ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿಕೊಟ್ಟು ಗ್ರಂಥಾಲಯದ ಪರಿಚಯ ಮಾಡಿಕೊಳ್ಳುತ್ತಾನೆ. | 67, 68, 69 |
| 5.1.2 | ಶಾಲೆಯ ಗ್ರಂಥಾಲಯದಿಂದ ಪುಸ್ತಕಗಳನ್ನು ತೆಗೆದುಕೊಂಡು ನಿಯಮಿತವಾಗಿ ಓದುತ್ತಾನೆ. | 70, 71 |
| 5.1.3 | ತನ್ನ ಇಷ್ಟದ ಪ್ರಕಾರ ವಿವಿಧ ಕಥೆ ಹಾಡು ಇವುಗಳ ಪುಸ್ತಕಗಳನ್ನು ಹುಡುಕುತ್ತಾನೆ ಮತ್ತು ಓದುತ್ತಾನೆ. | 70, 71 |
| **C5.2** (5.2.1) | ಪುಸ್ತಕಗಳ ಮುಖಪುಟ ಮತ್ತು ಬೆನ್ನುಪುಟ, ಇವುಗಳ ನಿರೀಕ್ಷಣೆ ಮಾಡಿ ಆ ವಿಷಯದ ಚರ್ಚೆಯಲ್ಲಿ ಸಹಭಾಗಿ ಆಗುತ್ತಾನೆ. | 71 |
| **C5.3** (5.3.1) | ದಿನಪತ್ರಿಕೆಯಲ್ಲಿಯ ಚಿತ್ರಗಳನ್ನು ನೋಡಿ ಸುದ್ದಿಯ ವಿಷಯ ಹೇಳುತ್ತಾನೆ. | 55 |
| 5.3.2 | ದಿನಪತ್ರಿಕೆಯಲ್ಲಿಯ ಸುದ್ದಿಗಳ ತಲೆಬರಹವನ್ನು ಓದುತ್ತಾನೆ. | 53, 54, 55 |

## ಪಠ್ಯಪುಸ್ತಕವನ್ನು ಅವಲೋಕಿಸುವಾಗ

★ ರಾಷ್ಟ್ರೀಯ ಶಿಕ್ಷಣ ಧೋರಣೆ ೨೦೨೦ರ ಮೇಲೆ ಆಧಾರಿತವಾದ ಈ ಪಠ್ಯಪುಸ್ತಕವು ಮಕ್ಕಳ ಭಾಷಾ ಕೌಶಲ್ಯ ವಿಕಾಸದಲ್ಲಿ ಮಹತ್ವಪೂರ್ಣ ಪಾತ್ರ ವಹಿಸಲಿದೆ ಈ ಪಠ್ಯ ಪುಸ್ತಕವನ್ನು ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಸುಲಭಗೊಳಿಸುವಂತೆ ವಿನ್ಯಾಸಗೊಳಿಸಲಾಗಿದೆ.ಇದರಲ್ಲಿ ಮಕ್ಕಳ ಅಧ್ಯಯನ ಮತ್ತು ಅಭ್ಯಾಸದ ಹಂತಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿಷಯಗಳನ್ನು ಸೇರಿಸಲಾಗಿದೆ.

★ ಮೂರನೆಯ ತರಗತಿಯಲ್ಲಿ, ಅನುಭವಿಸಿದ ಘಟನೆ ಪ್ರಸಂಗ ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ತಿಳಿದುಕೊಳ್ಳುವುದಕ್ಕಾಗಿ, ಇತರರೊಂದಿಗೆ ಸಂವಾದ ಮಾಡುವುದು ವಿವಿಧ ಪಠ್ಯಾಂಶದ ವಿಷಯವನ್ನು ಓದಿ ಅವುಗಳಲ್ಲಿಯ ಮೂಲ ಕಲ್ಪನೆಯನ್ನು ಹೇಳುವುದನ್ನು ಕೊಡಲಾಗಿದೆ. ಉದಾ- ಡಾಲ್ಫಿನ್, ಗ್ರಂಥಾಲಯ, ವಾಚನ ಪ್ರೇರಣಾ ದಿನಾಚರಣೆಯಂತಹ ಪಾಠಗಳನ್ನು ಅಳವಡಿಸಲಾಗಿದೆ.

★ ಪಠ್ಯಾಂಶವನ್ನು ಓದುವಾಗ ಚಿತ್ರ, ಶಬ್ದ, ದೃಶ್ಯ ಪ್ರತಿಮೆ ಇವುಗಳನ್ನು ಅಳವಡಿಸಿಕೊಂಡು ಅರ್ಥ ತಿಳಿದುಕೊಳ್ಳುವುದಕ್ಕಾಗಿ ಚಿತ್ರ ವರ್ಣನೆ ಈ ಚಟುವಟಿಕೆಯಿಂದ ಮಕ್ಕಳು ಸೂಕ್ಷ್ಮ ನಿರೀಕ್ಷಣೆ ಮಾಡಿ ವಿವರಿಸುವ ಶಕ್ತಿ ಮತ್ತು ಸಂಭಾಷಣೆಯ ಕೌಶಲ್ಯವನ್ನು ಪಡೆದುಕೊಳ್ಳುತ್ತಾರೆ, ತಮ್ಮ ಅನುಭವ ಹಂಚಿಕೊಳ್ಳುವ ಮೂಲಕ ಭಾಷಾ ಅಭಿವ್ಯಕ್ತಿಯಲ್ಲಿಯೂ ನಿಪುಣತೆಗಳಿಸುತ್ತಾರೆ ಉದಾ ಬಲೂನು, ನಾವು ಎಲ್ಲಿ ತಪ್ಪುತ್ತಿದ್ದೇವೆ ಎನ್ನುವ ಚಿತ್ರ ವರ್ಣನೆಗಳಿವೆ.

★ ಪರಿಚಿತ,ಅಪರಿಚಿತ ಪಠ್ಯಾಂಶದಲ್ಲಿಯ ಸರಳ ಶಬ್ದ ಒತ್ತಕ್ಷರ ಬಂದಿರುವ ವಾಕ್ಯಗಳನ್ನು ತಪ್ಪಿಲ್ಲದಂತೆ ವೇಗವಾಗಿ ಓದುವುದು ಇದಕ್ಕಾಗಿ ವಾಚನ ಪಾಠಗಳನ್ನು ಕೊಡಲಾಗಿದೆ. ಇವುಗಳ ಅಭ್ಯಾಸ ಮಾಡುವುದರಿಂದ ವಾಚನ ಮತ್ತು ಲೇಖನ ಕೌಶಲ್ಯಗಳ ವಿಕಾಸವಾಗಲಿದೆ. ಉದಾ- ನಾಗರ ಪಂಚಮಿ, ವನಭೋಜನ, ಆಲೂಗಡ್ಡೆಯ ಓಟದಂತಹ ಪಾಠಗಳನ್ನು ಸೇರ್ಪಡಿಸಲಾಗಿದೆ.

★ ಕವಿತೆಗಳು :ಪಾತರಗಿತ್ತಿ ಪಕ್ಕಾ, ತರಕಾರಿ ಗಾಡಿ, ತಂಗಿಯ ಬೇಡಿಕೆ, ನನ್ನ ನವಿಲು,ನೀರು, ಚೆಲುವಿನ ಮುದ್ದಿನ ಮಕ್ಕಳೇ ಈ ಕವಿತೆಗಳು ಮಕ್ಕಳ ಕಲ್ಪನಾ ಶಕ್ತಿಯನ್ನು ವೃದ್ಧಿಸುತ್ತವೆ. 'ಇರುವೆಗಳ ಯಾತ್ರೆ' ಯಂತಹ ಶಿಸ್ತಿನ ಪಾಠವನ್ನು ಧೈರ್ಯ ಹಾಗೂ ಶ್ರಮದ ಜೀವನವನ್ನು ಹೇಳುವಂತಹ ಕವಿತೆಗಳನ್ನು ಇಲ್ಲಿ ಕೊಡಲಾಗಿದೆ.

★ ವಿವಿಧ ಕೌಶಲ್ಯ ಅಭಿವೃದ್ಧಿ ಕಾರ್ಯ: ಶುಭಾಶಯಗಳ ಕಾರ್ಡಗಳನ್ನು ತಯಾರಿಸುವುದು, ಅರಳು ತಯಾರಿಸುವ ಕೃತಿ, ಅದರಿಂದ ತಯಾರಾಗುವ ಪದಾರ್ಥಗಳು ಈ ರೀತಿಯ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಇವು ಮಕ್ಕಳ ಮನೋಬಲ ಹೆಚ್ಚಿಸಲು, ಸ್ವಾವಲಂಬಿ ಜೀವನಕ್ಕೆ ಅನುಕೂಲವಾಗಿವೆ.

★ ಭಾಷಾ ಕೌಶಲ್ಯಗಳನ್ನು ಹೆಚ್ಚಿಸಲು ದಿನಪತ್ರಿಕೆಯ ಆತ್ಮಕಥೆ, ಸಾರ್ವಜನಿಕ ಗ್ರಂಥಾಲಯಗಳಂತಹ ಪಾಠಗಳನ್ನು ಸೇರಿಸಲಾಗಿದೆ. ಬುದ್ಧಿ ಚಾತುರ್ಯಕ್ಕಾಗಿ ತೆನಾಲಿ ರಾಮನಂತಹ ಗದ್ಯ ಪಾಠವು ಮೂಡಿಬಂದಿದೆ.

★ ವ್ಯಾಕರಣ ಮತ್ತು ಲಿಖಿತ ಕೌಶಲ್ಯಕ್ಕಾಗಿ ನಾಮಪದ ಸರ್ವನಾಮ, ಸ್ವರ ಚಿಹ್ನೆಗಳಿಂದ ಕೂಡಿದ ಪರಿಚ್ಛೇದಗಳನ್ನು ವಾಚನಕ್ಕಾಗಿ ಮತ್ತು ಅನುಲೇಖನಕ್ಕಾಗಿ ತೆಗೆದುಕೊಳ್ಳಲಾಗಿದೆ.

★ ಮಕ್ಕಳಿಗೆ ಜ್ಞಾನ ಮತ್ತು ತೀಕ್ಷ್ಣತೆ ನೀಡುವ ಪರಿಕರವಾಗಿರುವ ಒಗಟುಗಳ ಪರಿಚಯ ಮಾಡಿಸಲಾಗಿದೆ. ಪದಬಂಧ ಬಿಡಿಸುವುದು, ಆರೋಗ್ಯ ಮತ್ತು ನೈತಿಕ ಶಿಕ್ಷಣಕ್ಕೆ ಸಹಾಯಕವಾದ ಆಲೂಗಡ್ಡೆಯ ಓಟ, ಪರಿಸರ ಗೀತೆಯ ಮೂಲಕ ಗಿಡಮರಗಳ ಮಹತ್ವವನ್ನು ವಿವರಿಸಲಾಗಿದೆ.

★ ಈ ಪಠ್ಯವು ಓದು, ಬರಹ, ಕೌಶಲ್ಯಾಭಿವೃದ್ಧಿ, ಗೀತೆಗಳು,ಕಥೆಗಳು ಮತ್ತು ನೈತಿಕ ಮೌಲ್ಯಗಳನ್ನು ಒಳಗೊಂಡಂತೆ, ಸಮಗ್ರ ಶಿಕ್ಷಣ ನೀಡಲು ವಿನ್ಯಾಸಗೊಳಿಸಲಾಗಿದೆ. ಮಕ್ಕಳ ಕಲಿಕೆಯ ಪಯಣದಲ್ಲಿ ಆಸಕ್ತಿ ಮೂಡಿಸುವಂತೆ ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ. ಇದರಿಂದ ಮಕ್ಕಳ ಸರ್ವಾಂಗೀಣ ವಿಕಾಸ ಸಾಧ್ಯವಾಗುತ್ತದೆ.

# ಅನುಕ್ರಮಣಿಕೆ

## ಭಾಗ-೧


೧) ಪಾತರಗಿತ್ತಿ ಪಕ್ಕ (ಕವಿತೆ)........................೧
-ದ ರಾ ಬೇಂದ್ರೆ

೨) ಬಲೂನ (ಚಿತ್ರಕಥೆ) ...........................೩

೩) ಚತುರ ತೆನಾಲಿ ರಾಮಕೃಷ್ಣ.....................೪

೪) ಇರುವೆಗಳ ಯಾತ್ರೆ (ಕವಿತೆ) ..................೯
- ಪ್ರಮೋದ್ ಸಪ್ರೆ ಕಾಂತಾವರ

೫) ನಾಗರ ಪಂಚಮಿ ............................೧೨

೬) ಕೂಡಿ ಆಡಿದ ಸೋನಿ........................೧೬


## ಭಾಗ-೨


೭) ವನಭೋಜನ ...............................೨೧

೮) ತರಕಾರಿ ಗಾಡಿ (ಕವಿತೆ) ......................೨೬
- ಸವಿತಾ ಭಟ್

೯) ಕೋತಿಯ ಕಥೆ ...............................೨೯

೧೦) ಆಲೂಗಡ್ಡೆ ಆಟ ............................೩೫

೧೧) ತಂಗಿಯ ಬೇಡಿಕೆ (ಕವಿತೆ) ....................೩೮
- ಉಮಾತನಯ ರಾಜ

೧೨) ಚಿತ್ರಹರಟೆ ................................೪೨


## ಭಾಗ-೩


೧೩) ಮುಗಿಲು ಕಡಿದು ಬಿತ್ತು .....................೪೪

೧೪) ಡಾಲ್ಫಿನ್ ..................................೪೮

೧೫) ದಿನಪತ್ರಿಕೆಯ ಆತ್ಮಕಥೆ ......................೫೩

೧೬) ನನ್ನ ನವಿಲು (ಕವಿತೆ)........................೫೮
- ಅಣ್ಣಾರಾಯ ಸಾಲಿಮನಿ

೧೭) ಮಹಾಬಳೇಶ್ವರ ............................೬೧

೧೮) ಪರಿಸರಗೀತೆ (ಕವಿತೆ) .......................೬೫
- ಹೂವಾನಂದ ಸಲಗರ


## ಭಾಗ-೪


೧೯) ಸಾರ್ವಜನಿಕ ಗ್ರಂಥಾಲಯ ..................೬೭

೨೦) ನೀರು (ಕವಿತೆ) ..............................೭೨
- ಚಂದ್ರಶೇಖರ ಹಿರೇಮಠ

೨೧) ತೊಗಲುಗೊಂಬೆಯಾಟ ....................೭೫

೨೨) ಸರ್ವಜ್ಞನ ವಚನಗಳು .......................೭೯

೨೩) ವಾಚನ ಪ್ರೇರಣೆ ದಿನಾಚರಣೆ ...............೮೨

೨೪) ಚೆಲುವಿನ ಮುದ್ದಿನ ಮಕ್ಕಳೆ (ಕವಿತೆ) ...........೮೫
-ಆರ್ ಎನ್ ಜಯಗೋಪಾಲ

★ ಶಬ್ದಕೋಶ.................................೮೮





**ಶಿಕ್ಷಕರಿಗೆ ಸೂಚನೆ:** ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯನ್ನು ನಡೆಸುವಾಗ ಸಾಂಕೇತಿಕ ಭಾಷೆ (ಸೈನ್ ಲ್ಯಾಂಗ್ವೇಜ್) ಮತ್ತು ಇತರ ಪೂರಕ ಅಧ್ಯಾಪನ ಪದ್ಧತಿಗಳನ್ನು ಬಳಸಿಕೊಳ್ಳಬೇಕು. ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅವರಿಂದ ಸಾಧ್ಯವಾಗುವ ಯಾವುದೇ ಪದ್ಧತಿಯಿಂದ ವ್ಯಕ್ತಪಡಿಸಲು ಅವಕಾಶವನ್ನು ಒದಗಿಸಿಕೊಡಬೇಕು.




# ೧. ಪಾತರಗಿತ್ತಿ ಪಕ್ಕಾ



ಪಾತರಗಿತ್ತೀ ಪಕ್ಕಾ, ನೋಡಿದೇನಽಅಕ್ಕಾ! ॥ ಪ ॥

ಹಸಿರು ಹಚ್ಚಿ ಚುಚ್ಚಿ, ಮೇಲಽಕರಿಸಿಣ ಹಚ್ಚಿ
ಹೊನ್ನ ಚಿಕ್ಕಿ ಚಿಕ್ಕಿ, ಇಟ್ಟು ಬೆಳ್ಳೀ ಅಕ್ಕಿ, ॥೧॥

ಸುತ್ತೂ ಕುಂಕಮದೆಳಿ, ಎಳೆದು ಕಾಡಿಗೆ ಸುಳಿ,
ಗಾಳೀ ಕೆನೀಲೇನಽ, ಮಾಡಿದ್ದಾರ ತಾನ! ॥೨॥

ನೂರು ಆರುಪಾರು, ಯಾರು ಮಾಡಿದ್ದಾರು!
ಏನು ಬಣ್ಣ ಬಣ್ಣ, ನಡುವೆ ನವಿಲಗಣ್ಣ! ॥೩॥

ರೇಶಿಮೆ ಪಕ್ಕ ನಯ, ಮುಟ್ಟಲಾರೆ ಭಯ!
ಹೂವಿನ ಪಕಳಿಗಿಂತ, ತಿಳಿವು ತಿಳಿವು ಅಂತ? ॥೪॥

ಹೂವಿಗೆ ಹೋಗಿ ತಾವ, ಗಲ್ಲಾ ತಿವಿತಾವ
ಬನ ಬನದಾಗ ಆಡಿ, ಪಕ್ಕಾ ಹುಡಿ ಹುಡಿ; ॥೫॥

ಹುಲ್ಲುಗಾವುಲದಾಗ, ಹಳ್ಳೀ ಹುಡುಗೀ ಹಾಂಗ -
ಪಾತರಗಿತ್ತೀ ಪಕ್ಕಾ, ನೋಡಿದೇನಽ ಅಕ್ಕಾ! ॥೬॥

-ದ.ರಾ. ಬೇಂದ್ರೆ



## ಶಬ್ದಗಳ ಅರ್ಥ:

ಪಾತರಗಿತ್ತಿ-ಚಿಟ್ಟೆ; ಹೊನ್ನ- ಚಿನ್ನ; ಚಿಕ್ಕಿ-ನಕ್ಷತ್ರ; ನಯ-ಮೃದು; ಪಕಳಿ-ದಳ; ಗಲ್ಲ-ಕೆನ್ನೆ; ಬನ-ವನ.



## ಮಾತನಾಡೋಣ ಬನ್ನಿ.

೧) ಪಾತರಗಿತ್ತಿಯನ್ನು ನೀವು ಎಲ್ಲಿ ಎಲ್ಲಿ ನೋಡಿರುವಿರಿ?

೨) ಯಾವ ಯಾವ ಬಣ್ಣದ ಪಾತರಗಿತ್ತಿಗಳನ್ನು ನೋಡಿದ್ದೀರಿ?

೩) ಪಾತರಗಿತ್ತಿಯ ವರ್ಣನೆಯನ್ನು ಹೇಳಿರಿ.

೪) ಪಾತರಗಿತ್ತಿಗಳು ಹೂವಿನ ಸುತ್ತಲು ಏಕೆ ಸುತ್ತುತ್ತಿರುತ್ತವೆ?



## ಕವಿತೆಯಲ್ಲಿ ಬಂದಿರುವ ಪ್ರಾಸಯುಕ್ತ ಶಬ್ದಗಳನ್ನು ಬರೆ.

ಉದಾ: ಹಚ್ಚಿ-ಚುಚ್ಚಿ

೧) ..................................... ೨) .....................................

೩) ..................................... ೪) .....................................



## ಈ ಕವಿತೆಯಲ್ಲಿಯ ಕೆಳಗೆ ಕೊಟ್ಟ ಸಾಲುಗಳನ್ನು ಪೂರ್ಣ ಮಾಡು.

ನೂರು ಆರು .........................................

.................................................... ನವಿಲಗಣ್ಣ.



## ನಾಲಿಗೆ ನುಲಿ (ವೇಗವಾಗಿ ಹೇಳು) :

ನೂರು ಆರು ಪಾರು ಯಾರು ಮಾಡಿದ್ದಾರು!



## ಶಿಕ್ಷಕರ ಸಹಾಯದಿಂದ ಪಾತರಗಿತ್ತಿಯ ಚಿತ್ರ ಬಿಡಿಸಿ ಬಣ್ಣ ಕೊಡು.



## ನಿನ್ನ ಪರಿಸರದಲ್ಲಿ ನೋಡಿರುವ ಬಣ್ಣ ಬಣ್ಣದ ಕೀಟಕಗಳ ಹೆಸರುಗಳನ್ನು ಬರೆ.

**ಸೂಚನೆ :** ಈ ಕವಿತೆಯನ್ನು ವಿದ್ಯಾರ್ಥಿಗಳಿಂದ ಲಯಬದ್ಧವಾಗಿ ಸಾಭಿನಯದೊಂದಿಗೆ ಸಾದರಪಡಿಸಿಕೊಳ್ಳಿರಿ.

**ಬಾನಂಗಳದಲ್ಲಿ ಹಾರುವ ಪಾತರಗಿತ್ತಿ, ಹೂವು ಕಾಯಾಗಲು ನೀನೇ ಸ್ಫೂರ್ತಿ**

# ೨. ಬಲೂನ

ಚಿತ್ರ ಗಮನಿಸು, ಮುಂದೆ ಏನಾಗಬಹುದು ಎಂಬುದನ್ನು ಕಲ್ಪಿಸಿಕೊಂಡು ಹೇಳು.
















ಮುಂದೆ ಏನಾಗಿರಬಹುದು?

?

# ೩. ಚತುರ ತೆನಾಲಿ ರಾಮಕೃಷ್ಣ

ತೆನಾಲಿ ರಾಮಕೃಷ್ಣನು. ಶ್ರೀಕೃಷ್ಣದೇವರಾಯನ ಆಸ್ಥಾನದ ಚತುರ ಹಾಗೂ ಬುದ್ಧಿವಂತ ಹಾಸ್ಯಕವಿ. ತನ್ನ ಜಾಣತನದಿಂದ ಆತ ರಾಜನ ಪ್ರೀತಿಗೆ ಪಾತ್ರನಾಗಿದ್ದ. ಅನೇಕ ಬಾರಿ ರಾಜನಿಂದ ರತ್ನಾಭರಣಗಳನ್ನು ಬಹುಮಾನವಾಗಿ ಪಡೆಯುತ್ತಿದ್ದ.



ಒಂದು ದಿನ ರಾತ್ರಿ ತೆನಾಲಿ ರಾಮ ಊಟಕ್ಕೂ ಮೊದಲು ಕೈ ತೊಳೆಯಲೆಂದು ಹಿತ್ತಲಿಗೆ ಹೋಗಿದ್ದ. ಆಗ ಅವನಿಗೆ ಏನೋ ಸದ್ದು ಕೇಳಿಸಿತು. ತೆನಾಲಿರಾಮನಿಗೆ ಅಲ್ಲಿ ಕಳ್ಳರಿರಬಹುದು ಎಂದು ಸಂಶಯ ಬಂದಿತು. ಆತ ಮನೆಯೊಳಗೆ ಹೋಗಿ ಊಟ ಮಾಡಿದ. ನಂತರ ತನ್ನ ಹೆಂಡತಿಯನ್ನು ಜೋರಾಗಿ ಕೂಗಿ ಕರೆದನು. ಆಕೆ ಏನಾಯಿತು? ಎಂದು ಕೇಳಿದಾಗ ಊರಲ್ಲಿ ಕಳ್ಳಕಾಕರ ಹಾವಳಿ ಹೆಚ್ಚಾಗಿದೆ. ಹಾಗಾಗಿ ಮನೆಯಲ್ಲಿರುವ 'ಎಲ್ಲ ಬೆಲೆಬಾಳುವ ವಸ್ತುಗಳನ್ನು ತೆಗೆದುಕೊಂಡು ಬಾ' ಎಂದು ಹೇಳಿದ. ಅವಳು ಸರಿ ಎಂದು ಅವುಗಳನ್ನು ತರಲು ಒಳಗೆ ಹೋದಳು.



ಅಷ್ಟರಲ್ಲಿ ತೆನಾಲಿರಾಮ ಒಂದು ದೊಡ್ಡ ಸಂದೂಕನ್ನು ತೆಗೆದುಕೊಂಡು ಅದರಲ್ಲಿ ಮನೆಯಲ್ಲಿರುವ ಒಡಕು ಮಡಿಕೆ, ಕುಡಿಕೆ, ಮುರಿದ ಸೌಟು, ಮೊಂಡು ಕಸಬರಿಗೆ ಇವುಗಳನ್ನೆಲ್ಲ ತಂದು ತುಂಬಿಸಿದನು. ಹೆಂಡತಿ ಆಭರಣಗಳನ್ನು ತೆಗೆದುಕೊಂಡು ಬಂದಳು. ಆದರೆ ತೆನಾಲಿರಾಮನ ಕೆಲಸವನ್ನು ನೋಡಿ ಗಾಬರಿಯಾಗಿ ಬಾಯಿ ತೆರೆಯುವ ಮುನ್ನವೇ ಅವಳನ್ನು ತಡೆದು, ಕಣ್ಸನ್ನೆಯ ಮೂಲಕ ಸುಮ್ಮನಾಗಿಸಿದ.

ನಂತರ ಆ ಸಂದೂಕಿಗೆ ದೊಡ್ಡ ಬೀಗವನ್ನು ಹಾಕಿ, ಭಾರವಾದ ಸಂದೂಕನ್ನು ತೆಗೆದುಕೊಂಡು ಹೋಗಿ ಬಾವಿಯಲ್ಲಿ ಇಳಿಸಿದನು.

ಮನೆಗೆ ಬಂದು ಹೆಂಡತಿಗೆ ಹೇಳಿದ ''ನಡೆ ಇನ್ನು ನಾವು ನಿಶ್ಚಿಂತೆಯಿಂದ ಮಲಗೋಣ. ನಮಗೆ ಈಗ ಯಾವ ಕಳ್ಳರ ಭಯವೂ ಇಲ್ಲ.'' ಮನೆಯ ಹಿಂದೆ ಅಡಗಿ ಕುಳಿತಿದ್ದ ಕಳ್ಳರು ಇದೆಲ್ಲವನ್ನು ಕೇಳಿಸಿಕೊಂಡರು. ಅವರಲ್ಲಿ ಒಬ್ಬ ನಗುತ್ತ ಹೀಗೆಂದ ''ಎಲ್ಲರೂ ಈ ತೆನಾಲಿರಾಮನನ್ನು ಬುದ್ಧಿವಂತ ಎನ್ನುತ್ತಾರೆ, ಆದರೆ ಇಂದು ಆತ ಮೂರ್ಖನಾದ. ನಮ್ಮ ಕೆಲಸ ಸುಲಭ ಮಾಡಿದ.'' ನಾಲ್ಕೂ ಜನ ಕಳ್ಳರು ಬಾವಿಯ ಕಡೆಗೆ ಹೋದರು. ಬಾವಿಯಲ್ಲಿ ತುಂಬಾ ನೀರಿತ್ತು. ಅವರಲ್ಲಿ ಯಾರಿಗೂ ಈಜಾಡಲು ಬರುತ್ತಿರಲಿಲ್ಲ. ಬಾವಿಯ ನೀರನ್ನು ಕಡಿಮೆ ಮಾಡಲು ನೀರು ಸೇದಿ ತೋಟದಲ್ಲಿ ಚೆಲ್ಲತೊಡಗಿದರು. ನೀರು ಕಡಿಮೆಯಾದ ಮೇಲೆ ಅವರಲ್ಲಿ ಒಬ್ಬ ಹಗ್ಗದ ಸಹಾಯದಿಂದ ಬಾವಿಯಲ್ಲಿ ಇಳಿದು ಸಂದೂಕನ್ನು ಹೊರಗೆ ತೆಗೆದ.





ಆ ಭಾರವಾದ ಸಂದೂಕನ್ನು ಕಂಡು ಕಳ್ಳರು ಹಿರಿ ಹಿರಿ ಹಿಗ್ಗಿದರು. ಅದಕ್ಕೆ ಹಾಕಿದ ದೊಡ್ಡದಾದ ಬೀಗವನ್ನು ಒಡೆದು ಸಂದೂಕಿನ ಮುಚ್ಚಳವನ್ನು ತೆಗೆದರು. ಒಳಗೆ ಇಣುಕಿದ ಕಳ್ಳರು ಮೂರ್ಛೆ ಹೋಗುವುದೊಂದೇ ಬಾಕಿ. ಅಷ್ಟರಲ್ಲಿ ಬೆಳಕಾಯಿತು. ತೆನಾಲಿರಾಮ ಬಾವಿಯ ಬಳಿಗೆ ಬಂದ. ಅಲ್ಲಿ ಕಳ್ಳರೆಲ್ಲ ತಲೆ ಮೇಲೆ ಕೈಹೊತ್ತು ಕುಳಿತಿದ್ದರು. ಅವರನ್ನು ಕಂಡು ತೆನಾಲಿರಾಮ ''ಯಾರಯ್ಯ ನೀವು ಪುಣ್ಯಾತ್ಮರು, ಒಣಗುತ್ತಿರುವ ನನ್ನ ತೋಟಕ್ಕೆ ನೀರು ಉಣಿಸಿದ್ದೀರಾ? ನಿಮಗೆ ನನ್ನ ಧನ್ಯವಾದಗಳು. ಬನ್ನಿ ನನ್ನ ಅತಿಥಿ ಸತ್ಕಾರವನ್ನು ಸ್ವೀಕರಿಸಿರಿ'' ಎಂದಾಗ ಕಳ್ಳರು ನಿನ್ನ ಸಹವಾಸವೇ ಬೇಡ ಎನ್ನುತ್ತಾ ಅಲ್ಲಿಂದ ಓಡಿ ಹೋದರು.





**ಶಬ್ದಾರ್ಥ :**

ಚತುರ–ಚಾಣಾಕ್ಷ, ಜಾಣ; ಹಾವಳಿ– ತೊಂದರೆ;

ಹಿತ್ತಲ – ಮನೆಯ ಹಿಂದಿನ ಭಾಗ; ಸಂದೂಕು – ಪೆಟ್ಟಿಗೆ



**ಮಾತನಾಡೋಣ ಬನ್ನಿ.**

೧) ನಿಮ್ಮ ಮನೆಯಲ್ಲಿನ ಬೆಲೆ ಬಾಳುವ ವಸ್ತುಗಳನ್ನು ಎಲ್ಲಿಡುತ್ತೀರಿ?

೨) ನಿಮ್ಮ ಮನೆಗೆ ಕಳ್ಳರು ಬಂದರೆ ಏನು ಮಾಡುವಿರಿ?

೩) ಕಳ್ಳರನ್ನು ಹಿಡಿದು ಯಾರ ಕೈಗೆ ಒಪ್ಪಿಸಬೇಕು?



**ಯೋಚಿಸಿ ಬರೆ.**

೧) ತೆನಾಲಿ ರಾಮಕೃಷ್ಣ ಯಾರ ಆಸ್ಥಾನದಲ್ಲಿದ್ದನು?

.................................................................................................

೨) ತೆನಾಲಿ ರಾಮಕೃಷ್ಣ ಎಂತಹ ಕವಿಯಾಗಿದ್ದನು?

.................................................................................................

೩) ಕಳ್ಳರಿಗೆ ಪಾಠ ಕಲಿಸಲು ತೆನಾಲಿರಾಮ ಮಾಡಿದ ಉಪಾಯವೇನು?

.................................................................................................

೪) ಕಳ್ಳರು ತೆನಾಲಿರಾಮನನ್ನು ಮೂರ್ಖ ಎನ್ನಲು ಕಾರಣವೇನು?

.................................................................................................

೫) ಸಂದೂಕನ್ನು ತೆಗೆದು ನೋಡಿದ ಕಳ್ಳರ ಸ್ಥಿತಿ ಏನಾಯಿತು?

.................................................................................................



**ಕೆಳಗಿನ ವಾಕ್ಯ ಸರಿ / ತಪ್ಪು ಹೇಳು ಮತ್ತು ಬರೆ.**

೧) ತೆನಾಲಿ ರಾಮಕೃಷ್ಣ ರಾಜನ ಪ್ರೀತಿಗೆ ಪಾತ್ರನಾಗಿದ್ದ. (................)

೨) ತೆನಾಲಿ ರಾಮಕೃಷ್ಣನು ಬೆಲೆ ಬಾಳುವ ವಸ್ತುಗಳನ್ನು ಸಂದೂಕಿನಲ್ಲಿ ತುಂಬಿದನು. (...........)

೩) ಸಂದೂಕಿನ ಮುಚ್ಚಳವನ್ನು ತೆಗೆದು ನೋಡಿದ ಕಳ್ಳರು ಹಿರಿಹಿರಿ ಹಿಗ್ಗಿದರು. (................)

೪) ತೆನಾಲಿರಾಮನು ಕಳ್ಳರಿಗೆ ಧನ್ಯವಾದಗಳನ್ನು ಹೇಳಿದ. (................)

**ಪರಿಚ್ಛೇದದ ಕೆಳಗೆ ಕೊಟ್ಟಿರುವ ಶಬ್ದಗಳ ವಿರುದ್ಧಾರ್ಥ ಶಬ್ದಗಳನ್ನು ಪರಿಚ್ಛೇದದಿಂದ ಹುಡುಕಿ ಬರೆ.**

ಮನೆಯ ಹಿಂದೆ ಅಡಗಿ ಕುಳಿತಿದ್ದ ಕಳ್ಳರು ಇದೆಲ್ಲವನ್ನು ಕೇಳಿಸಿಕೊಂಡರು. ಅವರಲ್ಲಿ ಒಬ್ಬ ನಗುತ್ತ ಹೀಗೆಂದ ಎಲ್ಲರೂ ಈ 'ತೆನಾಲಿರಾಮನನ್ನು ಬುದ್ಧಿವಂತ' ಎನ್ನುತ್ತಾರೆ. ಆದರೆ ಇಂದು ಆತ ಮೂರ್ಖನಾದ. ನಮ್ಮ ಕೆಲಸ ಸುಲಭ ಮಾಡಿದ. ನಾಲ್ಕೂ ಜನ ಕಳ್ಳರು ಬಾವಿಯ ಕಡೆಗೆ ಹೋದರು. ಬಾವಿಯಲ್ಲಿ ತುಂಬಾ ನೀರಿತ್ತು. ಆಗ ಅವರು ಬಾವಿಯ ನೀರು ಕಡಿಮೆ ಮಾಡಲು ನೀರನ್ನು ಸೇದಿ ತೋಟದಲ್ಲಿ ಚೆಲ್ಲತೊಡಗಿದರು. ನೀರು ಕಡಿಮೆಯಾದ ಮೇಲೆ ಅವರಲ್ಲಿ ಒಬ್ಬ ಹಗ್ಗದ ಸಹಾಯದಿಂದ ಬಾವಿಯಲ್ಲಿ ಇಳಿದು ಸಂದೂಕನ್ನು ಹೊರಗೆ ತೆಗೆದ.

**ಉದಾಹರಣೆ:**

| | | | |
|---|---|---|---|
| ಅಳುತ್ತ X ನಗುತ್ತ | | | |
| ಮುಂದೆ | X ..................... | ಜಾಣ | X. ..................... |
| ಹೆಚ್ಚು | X ..................... | ಕಠಿಣ | X. ..................... |

**ಕೊಟ್ಟ ವಾಕ್ಯವನ್ನು ಸರಿಪಡಿಸಿ ಬರೆಯಿರಿ.**

**ಉದಾಹರಣೆ:** ತನ್ನ ಹೆಂಡತಿ ಜೋರಾಗಿ ಕೂಗಿ ಕರೆದನು.
ತನ್ನ ಹೆಂಡತಿ**ಯನ್ನು** ಜೋರಾಗಿ ಕೂಗಿ ಕರೆದನು.

೧) ತೆನಾಲಿ ರಾಮಕೃಷ್ಣ ತನ್ನ ಜಾಣತನ ರಾಜನ ಪ್ರೀತಿಗೆ ಪಾತ್ರನಾಗಿದ್ದ.

.....................................................................................

೨) ತೆನಾಲಿರಾಮ ಒಂದು ಸಂದೂಕ ತಂದ.

.....................................................................................

೩) ಕಳ್ಳ ಬಾವಿಯ ನೀರು ಸೇದಿ ಹೊರಹಾಕಿದರು.

.....................................................................................

೪) ಸಂದೂಕ ಮುಚ್ಚಳ ತೆಗೆದರು.

.....................................................................................

**ಶಬ್ದಗಳ ಅಂತ್ಯಾಕ್ಷರಿಯಿಂದ ಹೊಸ ಶಬ್ದ ತಯಾರಿಸು.**

**ಉದಾಹರಣೆ :** ಅಮರ – ರವಿ

ಅಮರ

ರವಿ

## ನಾಲಿಗೆ ನುಲಿ

**ಕೆಳಗಿನ ವಾಕ್ಯಗಳನ್ನು ಸರಸರನೇ ಹೇಳು**

ಕಂಬದ ಮೇಲೆ ಕಂಬ
ಮೇಲಕೆ ನೋಡಲದರ ಬಿಂಬ
ಬಿಂಬಗಳೆರಡರಲ್ಲಿ ತೋರಿದ ಕುಂಭ

ಮೈಸೂರಿನ ಮುದುಕ,
ಮುದುಕನ ಹೆಂಡತಿ,ಹೆಂಡತಿಯ ತಮ್ಮ,
ತಮ್ಮನ ಮಗಳು, ಮಗಳ ನಾಯಿ,
ನಾಯಿಯ ಬಾಲ ಬೆಂಗಳೂರಿಗೆ ಬಂದಿತು.





**ಒಂದು ಆಭರಣದಿಂದ ಇನ್ನೊಂದು ಆಭರಣಕ್ಕೆ ಜೋಡಿಸುತ್ತ ಹೊರಗೆ ಬರಲು ರಾಣಿಗೆ ಸಹಾಯ ಮಾಡಿ.**



| | | | |
|---|---|---|---|
| ಕಾಲ್ಗೆಜ್ಜೆ | ಮಡಕೆ | ಬಾರಿಗೆ | ಪಾತ್ರೆ |
| ಮೂಗುತಿ | ಸರ | ಕಿವಿ ಓಲೆ | ಸಂದೂಕ |
| ಊಟ | ಕಡುಗೋಲು | ಕೈಬಳೆ | ಮುಚ್ಚಳ |
| ಹಿತ್ತಲ | ಪೊರಕೆ | ಉಂಗುರ | ವಂಕಿ |











### ನಾಮಪದ

೧) ತೆನಾಲಿ ರಾಮಕೃಷ್ಣ ಒಬ್ಬ ಹಾಸ್ಯಕವಿ.
೨) ಹೆಂಡತಿ ಆಭರಣಗಳನ್ನು ತೆಗೆದುಕೊಂಡು ಬಂದಳು.
೩) ಸಂದೂಕನ್ನು ಬಾವಿಯಲ್ಲಿ ಇಳಿಸಿದನು.
೪) ನೀರು ಸೇದಿ ತೋಟದಲ್ಲಿ ಚೆಲ್ಲತೊಡಗಿದರು.

ಮೇಲಿನ ವಾಕ್ಯಗಳಲ್ಲಿ ಕೊಟ್ಟ ತೆನಾಲಿ ರಾಮಕೃಷ್ಣ, ಹೆಂಡತಿ, ಆಭರಣ, ಸಂದೂಕು, ಬಾವಿ, ನೀರು, ತೋಟ ಮುಂತಾದ ಶಬ್ದಗಳು ನಾಮಪದಗಳಾಗಿವೆ.
ವ್ಯಕ್ತಿ, ಪ್ರಾಣಿ, ವಸ್ತು, ಸ್ಥಳವನ್ನು, ಸೂಚಿಸುವ ಪದಗಳಿಗೆ 'ನಾಮಪದ' ಎನ್ನುವರು.

**ಉಪಾಯ ಬಲ್ಲವನಿಗೆ ಅಪಾಯವಿಲ್ಲ**

# ೪. ಇರುವೆಗಳ ಯಾತ್ರೆ



ಚಿಕ್ಕ ಚಿಕ್ಕ ಇರುವೆಗಳೇ ಚೊಕ್ಕನೆ ಸಾಗುವಿರಿ !
ಎಲೆಯ ದೋಣಿಯಲಿ ಹಾಡು ಹಾಡುತ
ಎಲ್ಲಿಗೆ ಹೋಗುವಿರಿ? ||ಪ||
ಎಲೆಯಡಿ ಅಡಗಿ ತಕಧಿಮಿ ತಕಧಿಮಿ|
ತಾಳವ ಹಾಕುವ ಇರುವೆಗಳೇ
ಹೊಳೆ ನೀರಲ್ಲಿ ಸುಮ್ಮನೆ ಸುಮ್ಮನೆ
ಮುಳುಗೇಳುವ ಮರಿ ಇರುವೆಗಳೇ ||೧||



ಸಣ್ಣ ಹೊಳೆಯ ತೀರದ ಆಚೆ
ಮಣ್ಣ ಮೇಲಿನ ಅಣಬೆಯ ಕಂಡು|
ಕಣ್ಣು ಮಿಟುಕಿಸಿ ಅಲ್ಲಿಗೂ ಕೂಡಾ ತೆರಳುತ್ತೀರಿ ||
ಚಿಕ್ಕ ಚಿಕ್ಕ ಕಾಲುಗಳಲ್ಲಿ ತಕ್ಕ ತೈತಾ ಕುಣಿದು ಕೊಂಡು |
ಚೊಕ್ಕದಾದ ಸಾಲಲಿ ಸಾಗುವ ಇರುವೆಗಳೇ ||೨||



ಬೆನ್ನಲಿ ಅಕ್ಕಿಯ ಮಣಿ ಹೊತ್ತು
ಮಣ್ಣಲಿ ಸಾಗುವುದ ನೋಡಲು |
ಚಿಣ್ಣರಿಗೆ ಇದಕಿಂತ ಬೇರೆ ಸಂತಸವುಂಟೆ? ||
ಪಚ್ಚೆ ಎಲೆಯ ಪ್ಯಾರಾಚ್ಯೂಟಲಿ ಕಚ್ಚಿ ಕುಳಿತು ಹಾರುವುದನು|
ಮೆಚ್ಚದಿರಲು ಸಾಧ್ಯವೆಲ್ಲೂ ಉಂಟೇ? ||೩||

- ಪ್ರಮೋದ ಸಪ್ರೆ ಕಾಂತಾವರ



### ಶಬ್ದಗಳ ಅರ್ಥ.

ಚಿಕ್ಕ – ಸಣ್ಣದು; ಸಂತಸ – ಸಂತೋಷ; ತೀರ – ದಂಡೆ; ಪಚ್ಚ – ಹಸಿರು;
ಅಣಬೆ – ನಾಯಿಕೊಡೆ; ಪ್ಯಾರಾಚ್ಯೂಟ – ಧುಮುಕುಕೊಡೆ



### ಮಾತನಾಡೋಣ ಬನ್ನಿ.

೧) ಇರುವೆಗಳಿಂದ ನಾವು ಯಾವ ವಿಶೇಷ ಗುಣಗಳನ್ನು ಕಲಿಯಬಹುದು?

೨) ಇರುವೆಗಳಂತೆ ಇತರ ಪ್ರಾಣಿ ಪಕ್ಷಿಗಳಲ್ಲಿ ಯಾವ ಗುಣಗಳು ಕಂಡುಬರುತ್ತವೆ?



### ಕೊಟ್ಟ ಪ್ರಶ್ನೆಗಳಿಗೆ ಉತ್ತರ ಬರೆ.

೧. ಚಿಕ್ಕ ಚಿಕ್ಕ ಇರುವೆಗಳು ಹೇಗೆ ಹೋಗುತ್ತಿವೆ?

.......................................................................................

೨. ಇರುವೆಗಳು ಎಲ್ಲಿ ಅಡಗಿ ಕುಳಿತಿವೆ?

.......................................................................................

೩. ಇರುವೆ ಯಾರನ್ನು ಕಂಡು ಕಣ್ಣು ಮಿಟುಕಿಸುತ್ತದೆ?

.......................................................................................

೪. ಇರುವೆ ಬೆನ್ನಲ್ಲಿ ಏನನ್ನು ಹೊತ್ತು ಸಾಗುತ್ತದೆ?

.......................................................................................

೫. ಯಾವುದನ್ನು ನಾವೆಲ್ಲಾ ಮೆಚ್ಚಬೇಕು?

.......................................................................................



### ಬಿಟ್ಟ ಸ್ಥಳ ತುಂಬು.

೧. ................................ ಕಾಲುಗಳಲ್ಲಿ ತಕ್ಕ ತೈತಾ ಕುಣಿದುಕೊಂಡು

೨. ಬೆನ್ನಲಿ. ................................ ಹೊತ್ತು

೩. ಹೊಳೆ ನೀರಲ್ಲಿ. ................................ ಮುಳುಗೇಳುವ ಮರಿ ಇರುವೆಗಳೆ

೪. ................................ ಪ್ಯಾರಾಚ್ಯೂಟಲಿ ಕಚ್ಚಿ ಕುಳಿತು ಹಾರುವುದನು.



### ಈ ಕವಿತೆಯ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಹೇಳಿರಿ.

## ಕೊಟ್ಟ ಪದಬಂಧದಲ್ಲಿಯ ಕೀಟಕಗಳ ಹೆಸರುಗಳನ್ನು ಹುಡುಕಿ ಬರೆ.

| | | | | |
|---|---|---|---|---|
| ನೊ | ಇ | ರು | ವೆ | ಕ |
| ಣ | ಜೀ | ನು | ನೊ | ಣ |
| ಸೊ | ನೊ | ರ | ಜು | ಜ |
| ಳ್ಳೆ | ಜಿ | ರ | ಳೆ | ರ |

ಉದಾ: ನೊಣ

.............................

.............................

.............................

.............................

ಉದಾಹರಣೆಯಲ್ಲಿ ಕೊಟ್ಟಂತೆ ಒತ್ತಕ್ಷರದ ಶಬ್ದಗಳನ್ನು ಕವಿತೆಯಿಂದ ಹುಡುಕಿ ಬರೆ.

ಉದಾಹರಣೆ – ಚಿಕ್ಕ

...................., ...................., ...................., ....................

- **ಹೊಂದಿಸಿ ಬರೆ.**

| (ಅ) | (ಬ) |
|---|---|
| ೧. ಸಣ್ಣ | ದೋಣಿ |
| ೨. ಪಚ್ಚೆ ಎಲೆಯ | ಹೊಳೆ |
| ೩. ಮಣ್ಣಿನ ಮೇಲಿನ | ಪ್ಯಾರಾಚ್ಯೂಟ |
| ೪. ತಕ್ಕ ತೈತಾ | ಅಣಬೆ |
| ೫. ಎಲೆಯ | ಕುಣಿದು |

### ಸರ್ವನಾಮ

೧) ನೀನು ಆಭರಣಗಳನ್ನು ತೆಗೆದುಕೊಂಡು ಬಾ.

೨) ಅದು ತುಂಬ ಭಾರವಾಗಿತ್ತು.

೩) ನೀವು ಹೇಳಿದ ಶಬ್ದಗಳನ್ನು ನಾನು ಫಲಕದ ಮೇಲೆ ಬರೆದಿರುವೆ.

೪) ನನಗೆ ಕ್ರಿಕೆಟ್ ಆಡಲು ಇಷ್ಟ.

ಮೇಲಿನ ವಾಕ್ಯಗಳಲ್ಲಿ ನೀನು, ಅದು, ನೀವು, ನಾನು, ನನಗೆ ಈ ಪದಗಳಿಗೆ 'ಸರ್ವನಾಮ' ಎನ್ನುವರು.

ವಾಕ್ಯದಲ್ಲಿ 'ನಾಮಪದ'ಗಳಿಗೆ ಬದಲಾಗಿ ಬಳಸುವ ಪದಗಳಿಗೆ 'ಸರ್ವನಾಮ' ಎನ್ನುವರು.

**ತನ್ನ ಭವಿಷ್ಯಕ್ಕೆ ತಾನೇ ಶಿಲ್ಪಿ**

# ೫. ನಾಗರಪಂಚಮಿ



ನಾಗರಪಂಚಮಿಯು ಭಾರತದ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಈ ಹಬ್ಬವು ಶ್ರಾವಣ ಮಾಸದ ಶುದ್ಧ ಪಂಚಮಿಯಂದು ಬರುವುದು. ಹೆಣ್ಣು ಮಕ್ಕಳಿಗೆ ಇದು ಬಹಳ ಸಡಗರದ ಹಬ್ಬ.

ನಾಗರಪಂಚಮಿ ಹಬ್ಬವು ಕೇವಲ ಧಾರ್ಮಿಕ ಆಚರಣೆಯಷ್ಟೇ ಅಲ್ಲ. ಇದು ಪ್ರಕೃತಿ, ಪ್ರಾಣಿಗಳು ಮತ್ತು ಮಾನವನ ನಡುವಿನ ಬಾಂಧವ್ಯವನ್ನು ಗೌರವಿಸುವ ಒಂದು ಸಾಂಸ್ಕೃತಿಕ ಪರಂಪರೆ.

ಪಂಚಮಿಯ ಹಿಂದಿನ ದಿನವಾದ ಚೌತಿಯಂದು ಸಹೋದರಿಯರು ಸಹೋದರರಿಗಾಗಿ ಉಪವಾಸ ಮಾಡುತ್ತಾರೆ. ಆಯಸ್ಸು, ಆರೋಗ್ಯ ಮತ್ತು ಸಕಲ ಸಂಪತ್ತು ದೊರೆಯಲೆಂದು ಅವರು ಪ್ರಾರ್ಥಿಸುತ್ತಾರೆ. ಈ ದಿನ ಶಾಲೆಯಲ್ಲಿ ವಿದ್ಯಾದೇವತೆ ಸರಸ್ವತಿಯ ಪೂಜೆ ಮಾಡುತ್ತಾರೆ. ಎಲ್ಲ ವಿದ್ಯಾರ್ಥಿಗಳು ಪ್ರಾರ್ಥಿಸಿ ಅಂದಿನ ವಿಶೇಷವಾದ ಅರಳು, ಕೊಬ್ಬರಿ, ಪುಟಾಣಿ, ತಿಂಡಿಗಳನ್ನು ಒಬ್ಬರಿಗೊಬ್ಬರು ಹಂಚಿ ತಿಂದು ಖುಷಿಪಡುತ್ತಾರೆ.

ಪಂಚಮಿಯ ಹಬ್ಬದಂದು ಹೆಣ್ಣುಮಕ್ಕಳು ಬೇಗನೆ ಏಳುತ್ತಾರೆ. ಅಂಗಳವನ್ನು ಗುಡಿಸಿ, ಸೆಗಣಿಯಿಂದ ಸಾರಿಸಿ, ರಂಗೋಲಿಯನ್ನು ಬಿಡಿಸುತ್ತಾರೆ. ಬಾಗಿಲಿಗೆ ತಳಿರು ತೋರಣ ಕಟ್ಟುತ್ತಾರೆ.

ನಂತರ ಎಲ್ಲರೂ 'ಅಭ್ಯಂಗ' ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸಿಕೊಳ್ಳುವುದೇ ಒಂದು ಖುಷಿ. ಈ ದಿನ ಸರ್ಪವನ್ನು ಪೂಜಿಸಿ, ಕುಟುಂಬದ ಸುಖ-ಶಾಂತಿ, ಕೃಷಿಯಲ್ಲಿ ಯಶಸ್ಸು ಮತ್ತು ಸರ್ಪಭಯದಿಂದ ರಕ್ಷಣೆ ಕೋರುವದು ವಾಡಿಕೆ.

ಈ ಹಬ್ಬದಂದು ಮನೆಯಲ್ಲಿ ಶೇಂಗಾ, ಪುಟಾಣಿ, ರವೆ, ಕೊಬ್ಬರಿ, ಅರಳಿಟ್ಟು, ತಂಬಿಟ್ಟು, ಎಳ್ಳು ಸೇರಿಸಿ ಉಂಡೆಗಳನ್ನು ತಯಾರಿಸುತ್ತಾರೆ. ವಿವಿಧ ಉಂಡೆಗಳನ್ನು ಮಾಡಿ ಮನೆಯವರೆಲ್ಲರೂ ಒಟ್ಟಿಗೆ ಕುಳಿತು ಆ ತಿಂಡಿಯ ಆಸ್ವಾದ ತೆಗೆದುಕೊಳ್ಳುವರು. ಸಾಯಂಕಾಲ ಅನುಕೂಲವಾದ ಸ್ಥಳದಲ್ಲಿ ಹೆಣ್ಣು ಮಕ್ಕಳು ಒಟ್ಟಿಗೆ ಸೇರಿ ಹಾಡುವಂತಹ ವಿಶಿಷ್ಟ ಪದ್ಧತಿ ಇದೆ. ಹಿರಿಯರು ಕಿರಿಯರು ಎಂಬ ಭೇದವಿಲ್ಲದೆ ಜೋಕಾಲಿ ಜೀಕುತ್ತಾರೆ. ಒಬ್ಬರು, ಇಬ್ಬರು ಉಯ್ಯಾಲೆಯಲ್ಲಿ ಜೀಕಿದರೆ, ಇನ್ನುಳಿದವರು ಬದುಕಿನ ಸಾರವನ್ನು ಹೇಳುವ ಜಾನಪದ ಹಾಡುಗಳನ್ನು ಹಾಡುವರು.

**ಜೋಕಾಲಿ ಆಡೋಣ ಬನ್ನಿರೋ...**
**ನಾವೆಲ್ಲ ಜೋಕಾಲಿ ಆಡೋಣ ಬನ್ನಿರೋ...**

ಚಿಕ್ಕ ಮಕ್ಕಳಂತೂ ಕೊಬ್ಬರಿಯ ಬಟ್ಟಲಿನ ಬುಗುರಿ ಆಡುವುದರಲ್ಲಿ ಮಗ್ನರಾಗಿರುತ್ತಾರೆ. ಕೊಬ್ಬರಿಗೆ ದಾರ ಕಟ್ಟುತ್ತಾರೆ. ಅದರಲ್ಲಿ ಅರಳನ್ನು ತುಂಬಿಸುತ್ತಾರೆ. ಅದನ್ನು ಭರ್ರನೇ ತಿರುಗಿಸಿದಾಗ ಕೊಬ್ಬರಿ ಬಟ್ಟಲಿನಲ್ಲಿಯ ಎಲ್ಲಾ ಅರಳುಗಳು ಹೂಗಳಂತೆ ಹರಡುವವು. ಈ ದೃಶ್ಯ ನೋಡುವುದೇ ಒಂದು ಹಬ್ಬ. ಚಿಕ್ಕವರು ದೊಡ್ಡವರು ಎಲ್ಲರೂ ಈ ದಿನದಂದು ತುಂಬಾ ಮನರಂಜನೆಯನ್ನು ಮಾಡುತ್ತಾರೆ.





**ಶಬ್ದಗಳ ಅರ್ಥ.**

ಆಸ್ವಾದ – ರುಚಿ; ಅಭ್ಯಂಗಸ್ನಾನ – ಎಣ್ಣೆ ಸ್ನಾನ; ವಾಡಿಕೆ–ರೂಢಿ.



**ಮಾತನಾಡೋಣ ಬನ್ನಿ.**

೧) ನಿಮ್ಮ ಮನೆಯಲ್ಲಿ ನಾಗರಪಂಚಮಿಯನ್ನು ಹೇಗೆ ಆಚರಿಸುತ್ತೀರಿ?

೨) ನಾಗರಪಂಚಮಿ ಹಬ್ಬಕ್ಕೆ ನಿಮ್ಮ ಮನೆಯಲ್ಲಿ ಯಾವ ಯಾವ ತಿಂಡಿಗಳನ್ನು ತಯಾರಿಸುತ್ತಾರೆ?

೩) ನಾಗರಪಂಚಮಿಯಲ್ಲಿ ನಾಗರಹಾವಿನ ಪೂಜೆ ಏಕೆ ಮಾಡುತ್ತಾರೆ?



**ಕೆಳಗಿನ ಪದಗಳ ಸಮಾನಾರ್ಥಕ ಪದ ಬರೆ.**

೧) ಸಂಭ್ರಮ = ……………………………………

೨) ಜೋಕಾಲಿ = ……………………………………

೩) ಉಡುಗೆ = ……………………………………

೪) ಸಕಲ = ……………………………………



**ಅರಳಿನಿಂದ ತಯಾರಿಸುವ ವಿವಿಧ ಪದಾರ್ಥಗಳ ಹೆಸರಿನ ಪಟ್ಟಿ ಮಾಡು.**

……………………………… ………………………………

……………………………… ………………………………



**ನಾಗರ ಪಂಚಮಿ ಹಬ್ಬದಲ್ಲಿ ಯಾವ–ಯಾವ ಆಟಗಳನ್ನು ಆಡುತ್ತಾರೆ?**

……………………………… ………………………………

……………………………… ………………………………

- **ನಿಮ್ಮ ಮನೆಯಲ್ಲಿ ಅರಳು ತಯಾರಿಸುವ ವಿಧಾನವನ್ನು ಕುರಿತು ಪಾಲಕರಿಗೆ ಕೇಳಿ ತಿಳಿದುಕೊಳ್ಳಿರಿ.**
- **ನೀವು ಆಚರಿಸುವ 'ಹಬ್ಬದ' ಕುರಿತು ಐದು ವಾಕ್ಯಗಳಲ್ಲಿ ಬರೆ.**

……………………………………………………………………………

……………………………………………………………………………

……………………………………………………………………………



**ಕೆಳಗಿನ ಪದಬಂಧದ ಸಹಾಯದಿಂದ ಹಬ್ಬಗಳ ಹೆಸರನ್ನು ಹುಡುಕಿರಿ.**

| | | | | | |
|---|---|---|---|---|---|
| ಕ್ರಿ | ದೀ | ರಾ | ತ್ರಿ | ಸ | ರ |
| ಸ್ | ಜ | ಪಾ | ರಾ | ಯ | ಮ |
| ಮ | ವ | ತ | ವ | ಕ | ಜಾ |
| ಸ್ | ಸೊ | ಹಾ | ತಿ | ಳಿ | ನ್ |
| ವಿ | ಜ | ಯ | ದ | ಶ | ಮಿ |

………………………………

………………………………

………………………………

………………………………

………………………………



**ಕೆಳಗಿನ ಹಿಂದು ತಿಂಗಳುಗಳ ಹೆಸರುಗಳನ್ನು ಪೂರ್ಣ ಮಾಡಿರಿ.**

| | | | |
|---|---|---|---|
| ಚೈತ್ರ | | | |
| ಶ್ರಾವಣ | | | |
| ಮಾರ್ಗಶೀರ್ಷ | | | |



**ಮಾಡಿ ನೋಡು.**

ಕೊಬ್ಬರಿಯ ಬಟ್ಟಲಿನ ಬುಗುರಿ ಮಾಡು, ಅದರಲ್ಲಿ ಅರಳನ್ನು ಹಾಕು ಆ ಬಟ್ಟಲಿನ ಬುಗುರಿಯನ್ನು ತಿರುಗಿಸಿ ನೋಡು.



ಯೋಗ್ಯ ವಿರಾಮ ಚಿಹ್ನೆಗಳೊಂದಿಗೆ ಪಾಠದೊಳಗಿಂದ ನಾಲ್ಕೈದು ಸಾಲುಗಳ ಅನುಲೇಖನ ಮಾಡಿಸಿಕೊಳ್ಳಿರಿ.



**ಕೆಳಗಿನ ಜಾನಪದ ಹಾಡನ್ನು ಹಾಡಿರಿ.**

ಜೋಕಾಲಿ ಆಡೋಣ ಬನ್ನಿರೇ ನಾವೆಲ್ಲ
ಜೋಕಾಲಿ ಆಡೋಣ ಬನ್ನಿರೇ ||ಪ||
ಸಾಕಾಗೋ ತನಕ ಆಡೋಣ ತಂಗಿ
ಸಾಕಾದ ಮ್ಯಾಲೆ ಇಳಿಯೋಣ ನಾವು
ಜೋಕಾಲಿ ಆಡೋಣ ಬನ್ನಿರೇ ||೧||

ಕೊಬ್ಬರಿ ತಂಬಿಟ್ಟು ಇಬ್ಬರ ಉಡಿಯಲ್ಲಿಟ್ಟು
ಹಬ್ಬಕ್ಕೆ ಹಾಲ ಹುಯ್ಯೋಣ
ಸಾಕಾಗೋ ತನಕ ಆಡೋಣ ತಂಗಿ
ಸಾಕಾದ ಮ್ಯಾಲೆ ಇಳಿಯೋಣ ನಾವು ||೨||

## ಲಿಂಗ

೧) ವಿನೋದ ಮತ್ತು ರಫೀಕ ಗೆಳೆಯರು.

೨) ಕಾವೇರಿ ಮತ್ತು ರಾಧಿಕಾ ಅಕ್ಕತಂಗಿಯರು.

೩) ಕುದುರೆ ನೀರನ್ನು ಕುಡಿಯುತ್ತದೆ.

೪) ಮೇಜಿನ ಮೇಲೆ ಪುಸ್ತಕ ಇದೆ.

ವಿನೋದ ಮತ್ತು ರಫೀಕ ಇವು ಪುರುಷ ಸೂಚಕ ಪದಗಳಾಗಿವೆ. ಇವುಗಳನ್ನು 'ಪುಲ್ಲಿಂಗ' ಎನ್ನುವರು. ಕಾವೇರಿ ಮತ್ತು ರಾಧಿಕಾ ಈ ಪದಗಳು ಸ್ತ್ರೀ ಸೂಚಕವಾಗಿವೆ. ಇವುಗಳನ್ನು 'ಸ್ತ್ರೀಲಿಂಗ' ಎನ್ನುವರು. ಕುದುರೆ ಇದು ಪುರುಷ ಅಥವಾ ಸ್ತ್ರೀ ಸೂಚಕವಾಗಿಲ್ಲ. ಮೇಜು ಮತ್ತು ಪುಸ್ತಕ ಇವು ನಿರ್ಜೀವ ವಸ್ತುಗಳಾಗಿವೆ. ಆದ್ದರಿಂದ ಇವುಗಳನ್ನು 'ನಪುಂಸಕ ಲಿಂಗ' ಎನ್ನುವರು.

# ೬. ಕೂಡಿ ಆಡಿದ ಸೋನಿ



ಒಂದು ನಗರದಲ್ಲಿ ಒಂದು ಉದ್ಯಾನವಿತ್ತು. ಅದರ ಪಕ್ಕದಲ್ಲಿಯೇ ಒಂದು 'ಶಿಶುವಿಹಾರ' ಕೇಂದ್ರವಿತ್ತು. ಅಲ್ಲಿ ಪುಟ್ಟ ಮಕ್ಕಳಿಗಾಗಿ ನಾನಾ ಬಗೆಯ ಆಟಿಕೆಗಳು ಇದ್ದವು. ಪುಟ್ಟ ಮಕ್ಕಳು ಆಟ ಆಡುವಂಥ ಹಲವಾರು ಜಾಗಗಳಿದ್ದವು. ಪುಟ್ಟಮಕ್ಕಳು ಆ ಶಿಶುವಿಹಾರ ಕೇಂದ್ರಕ್ಕೆ ಬರುತ್ತಿದ್ದರು. ಅವರಲ್ಲಿ 'ಸೋನಿ' ಕೂಡ ಒಬ್ಬಳು.

ಶಿಶುವಿಹಾರ ಕೇಂದ್ರದಲ್ಲಿರುವ ಎಲ್ಲ ಆಟಿಕೆಗಳೂ ತನಗೆ ಮಾತ್ರ ಬೇಕು.... ಇಲ್ಲಿರುವ ಉಯ್ಯಾಲೆ, ಜಾರುಬಂಡಿಗಳಲ್ಲಿ ತಾನೇ ಮೊದಲು ಆಡಬೇಕು ಎಂಬ ಆಸೆ ಸೋನಿಗೆ ಉಂಟಾಗುತ್ತಿತ್ತು. ಹಾಗಾಗಿ ಅವಳು ಒಂದು ಉಪಾಯ ಹೂಡಿದಳು. ಒಬ್ಬ ಪುಟ್ಟ ಹುಡುಗನು ದೊಡ್ಡ ಚೆಂಡಿನಿಂದ ಆಟ ಆಡುತ್ತಿದ್ದನು. ಸೋನಿಯು ಅವನ ಪಕ್ಕ ನಿಂತಳು. ''ನನಗೆ ಇದೇ ಚೆಂಡು ಬೇಕು'' ಎನ್ನುತ್ತಾ ಹೋ......ಎಂದು ಜೋರಾಗಿ ಅಳತೊಡಗಿದಳು. ತಾನೇ ಇವಳನ್ನು ಅಳಿಸಿದ್ದು ಎಂದು ಟೀಚರ್ ತಿಳಿಯಬಹುದು ಎಂದು ಆ ಹುಡುಗನು ಹೆದರಿದನು. ತಕ್ಷಣವೇ ಚೆಂಡನ್ನು ಅವಳಿಗೆ ಕೊಟ್ಟನು.



ಯಾರಾದರೂ ಉಯ್ಯಾಲೆ, ಚೆಂಡು ಮುಂತಾದವುಗಳಲ್ಲೆಲ್ಲಾ ಆಟ ಆಡುತ್ತಿದ್ದಾಗ, ಸೋನಿ ಅವರ ಪಕ್ಕ ಹೋಗಿ ಅಳುತ್ತಿದ್ದಳು. ತಕ್ಷಣವೇ ಅವರು ಅವಳಿಗೆ ಉಯ್ಯಾಲೆ, ಚೆಂಡು ಇತ್ಯಾದಿಗಳನ್ನು ಬಿಟ್ಟುಕೊಡುತ್ತಿದ್ದರು. ತನ್ನ ಉಪಾಯ ಫಲಿಸಿತೆಂದು ಸೋನಿ

ಬಹಳ ಸಂತೋಷಪಟ್ಟಳು. ಆದರೆ ದಿನ ಕಳೆದಂತೆ, ಸೋನಿ ಹತ್ತಿರ ಬರುತ್ತಿದ್ದಂತೆಯೇ ಇತರ ಮಕ್ಕಳು ದೂರ ಹೋಗಲು ಆರಂಭಿಸಿದರು.



ಸೋನಿಗೆ ಆಟಿಕೆಗಳ ನಡುವೆ ಒಬ್ಬಳೇ ಕುಳಿತು ಆಡಲು ಬೇಸರವಾಗತೊಡಗಿತು. ಅವಳ ಜೊತೆ ಆಟ ಆಡಲು ಯಾರೂ ಬರುತ್ತಿರಲಿಲ್ಲ. ಅವಳ ಗೆಳೆತನವನ್ನು ಯಾರೂ ಇಷ್ಟಪಡುತ್ತಿರಲಿಲ್ಲ. ''ಮೇಡಂ, ನನಗೆ ಒಬ್ಬಳೇ ಕುಳಿತು ಆಟ ಆಡಲು ಬಹಳ ಬೇಸರವಾಗುತ್ತಿದೆ. ನನ್ನ ಜೊತೆ ಆಟ ಆಡಲು ಯಾರೂ ಬರುತ್ತಿಲ್ಲ,'' ಎಂದು ಸೋನಿಯು ಟೀಚರಿಗೆ ಹೇಳಿದಳು. ಟೀಚರ್ ಮುಗುಳು ನಕ್ಕರು. ''ಸೋನಿ, ನೀನು ಮೊದಲು ಏನು ಮಾಡುತ್ತಿದ್ದೆ ನೆನಪಿಸಿಕೋ, ಅವರು ಆಡುವಾಗ ಅವರೊಂದಿಗೆ ಸೇರಲಿಲ್ಲ. ಅವರನ್ನು ಆಟ ಆಡಲೂ ಬಿಡಲಿಲ್ಲ. ಅತ್ತು ಎಲ್ಲರನ್ನು ಹೆದರಿಸುತ್ತಿದ್ದೆ ಅಲ್ಲವೆ''ಎಂದು ಟೀಚರ್ ಸೋನಿಯನ್ನು ಕೇಳಿದರು. ಸೋನಿ ಮಾತಾಡದೆ ತಲೆತಗ್ಗಿಸಿ ನಿಂತಳು. ''ಹೋಗು, ಎಲ್ಲರಲ್ಲಿ ಕ್ಷಮೆ ಕೇಳು. ನಗುನಗುತ್ತಾ ಎಲ್ಲರೊಂದಿಗೆ ಆಟ ಆಡು. ಆಗ ಅವರೆಲ್ಲರೂ ನಿನ್ನ ಗೆಳೆಯರಾಗುತ್ತಾರೆ'' ಎಂದು ಟೀಚರ್ ಹೇಳಿದರು. ಸೋನಿ ಎಲ್ಲ ಮಕ್ಕಳಲ್ಲಿ ಕ್ಷಮೆ ಕೇಳಿದಳು.

''ನಾವೆಲ್ಲರೂ ಜೊತೆಯಾಗಿ ಆಟ ಆಡೋಣ!'' ಎಂದು ಹೇಳಿದಳು. ಆಗ ಎಲ್ಲ ಮಕ್ಕಳು ಜೊತೆ ಸೇರಿದರು. ಒಟ್ಟಾಗಿ ಆಟ ಆಡಿದರು. ಸೋನಿ ಸಂತಸಪಟ್ಟಳು. ಸೋನಿಗೆ ಮತ್ತೆಂದೂ ಶಿಶು ವಿಹಾರ ಕೇಂದ್ರದಲ್ಲಿ ಬೇಸರವಾಗಲಿಲ್ಲ.





## ಶಬ್ದಗಳ ಅರ್ಥ:

ತಲೆ ತಗ್ಗಿಸು – ತಪ್ಪನ್ನು ಒಪ್ಪಿಕೊ; ಹೆದರು – ಭಯಪಡು; ಆಸೆ – ಬಯಕೆ;
ಬೇಸರ – ನಿರುತ್ಸಾಹ; ಕ್ಷಮೆ – ಮನ್ನಿಸು.



## ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆ.

ಉದ್ಯಾನ = ...................... ವಿಹಾರ = ......................



## ಮಾತನಾಡೋಣ ಬನ್ನಿ.

೧. ಸೋನಿಯ ಉಪಾಯ ಸರಿಯೆ?

೨. ಗೆಳೆಯರು ಸೋನಿಯೊಂದಿಗೆ ಏಕೆ ಆಡಿದರು?

೩. ಉದ್ಯಾನದಲ್ಲಿಯ ವಿವಿಧ ಆಟಿಕೆಗಳ ಹೆಸರು ಹೇಳು.

೪. ಉದ್ಯಾನದಲ್ಲಿಯ ಗಿಡಗಳ ಕಾಳಜಿ ಹೇಗೆ ವಹಿಸಬೇಕು?



## ಯಾರು ಹೇಳಿದರು ?

೧. ನನಗೆ ಇದೇ ಚೆಂಡು ಬೇಕು. .....................................

೨. ಸೋನಿ ನೀನು ಮೊದಲು ಏನು ಮಾಡುತ್ತಿದ್ದೆ ನೆನಪಿಸಿಕೋ? ..........................

೩. ನನ್ನ ಜೊತೆ, ಆಟ ಆಡಲು ಯಾರೂ ಬರುತ್ತಿಲ್ಲ. .....................................

೪. ಹೋಗು ಎಲ್ಲರಲ್ಲಿಯೂ ಕ್ಷಮೆ ಕೇಳು. .....................................

## ಕೆಳಗಿನ ವಿಧಾನಗಳು ಸರಿ / ತಪ್ಪು ಎಂಬುದನ್ನು ಬರೆ.

೧. ಸೋನಿ ತನಗೆ ಚೆಂಡು ಬೇಕು ಎಂದು ಅಳತೊಡಗಿದಳು. ...............

೨. ಮಕ್ಕಳು ಸೋನಿಗೆ ಆಟಿಕೆಗಳನ್ನು ಬಿಟ್ಟು ಕೊಡುತ್ತಿರಲಿಲ್ಲ. ...............

೩. ಎಲ್ಲ ಮಕ್ಕಳು ಸೋನಿಯಲ್ಲಿ ಕ್ಷಮೆ ಕೇಳಿದರು. ...............



## ವಿರುದ್ಧಾರ್ಥಕ ಶಬ್ದಗಳನ್ನು ಜೋಡಿಸು.

| | |
|---|---|
| ೧. ಮೊದಲು | ಅ) ನಗು |
| ೨. ಅಳು | ಬ) ಕೊನೆ |
| ೩. ಆಸೆ | ಕ) ದೂರ |
| ೪ ಸಮೀಪ | ಡ) ನಿರಾಸೆ |

**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.**

೧. ಉದ್ಯಾನ ಎಲ್ಲಿತ್ತು?

..........................................................................

೨. ಶಿಶುವಿಹಾರ ಕೇಂದ್ರಕ್ಕೆ ಯಾರು ಬರುತ್ತಿದ್ದರು?

..........................................................................

೩. ಸೋನಿಯು ಹತ್ತಿರ ಬಂದರೆ ಮಕ್ಕಳು ಏನು ಮಾಡುತ್ತಿದ್ದರು?

..........................................................................

೪. ಆಟಿಕೆ ಪಡೆಯಲು ಸೋನಿ ಯಾವ ಉಪಾಯ ಮಾಡಿದಳು?

..........................................................................

೫. ಮಕ್ಕಳಲ್ಲಿ ಯಾರು ಕ್ಷಮೆ ಕೇಳಿದರು?

..........................................................................

**ಕಂಸಿನಲ್ಲಿ ಕೊಟ್ಟ ಪದಗಳನ್ನು ಕೋಷ್ಟಕದಲ್ಲಿ ವಿಂಗಡಿಸಿ ಬರೆ.**

(ಆಟ, ಗೆಳೆಯರು, ಮಕ್ಕಳು, ಚೆಂಡು, ಆಟಿಕೆಗಳು, ಹುಡುಗ)

| ಏಕವಚನ | ಬಹುವಚನ |
|---|---|
| ೧) ............................ | ಅ) ............................ |
| ೨) ............................ | ಬ) ............................ |
| ೩) ............................ | ಕ) ............................ |

**ನಿನಗೆ ಇಷ್ಟವಾದ ಆಟದ ಕುರಿತು ಬರೆ.**

..........................................................................

..........................................................................

..........................................................................

..........................................................................

**ಕೆಳಗಿನ ಅಕ್ಷರ ಗುಂಪಿನಿಂದ ಯೋಗ್ಯ ಅಕ್ಷರಗಳನ್ನು ಜೋಡಿಸಿಕೊಂಡು ಆಟದ ಹೆಸರು ಬರೆ.**

ಉದಾ: ಉ ಕ ಲೆ ಯ್ಯಾ ಜ್ಞ = ಉಯ್ಯಾಲೆ

ಬ ಹಾ ಖೋ ಮ ಕಿ = ..............................................

ಬ ಕ ವಾ ಶ ಡ್ಡಿ = ..............................................

ಸ ಕ್ರಿ ಟ್ ಚ ಕೇ = ..............................................

ಕ್ವ ಡೆ ರು ಜಾ ಬಂ = ..............................................



ವಿಂಗಡಿಸಿ ಬರೆ.

(ಸೋನಿ, ಹುಡುಗ, ಚೆಂಡು, ಹುಡುಗಿ, ಆಟಿಕೆ, ಗೆಳೆಯ)

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| | | |
| | | |



## ಕಥೆ ತಯಾರಿಸೋಣ

**ಕೆಳಗಿನ ಸಂವಾದವನ್ನು ಓದಿ ಕಥೆಯನ್ನು ತಯಾರಿಸಿ ಅದಕ್ಕೆ ಯೋಗ್ಯವಾದ ಶೀರ್ಷಿಕೆ, ಉಪಶೀರ್ಷಿಕೆಯನ್ನು ಕೊಡಿರಿ.**

**ಶಿಕ್ಷಕರು** : ಮಕ್ಕಳೇ, ನಾವು ಇಂದು ಹೊಸದೊಂದು ಕಥೆ ತಯಾರಿಸೋಣವೇ?

**ಮಕ್ಕಳು** : ಅದು ಹೇಗೆ ಗುರುಗಳೇ?

**ಶಿಕ್ಷಕರು** : (ಕೈಯಲ್ಲಿ ಖಾಲಿ ಪುಟ ತೋರಿಸುತ್ತ) ನಾನು ನಿಮಗೊಂದು ಖಾಲಿ ಕಾಗದ ಕೊಡುತ್ತೇನೆ. ಮೊದಲನೆಯ ಆಸನದಿಂದ ಕೊನೆಯ ಆಸನದವರೆಗೆ ಪ್ರತಿಯೊಬ್ಬರು ಒಂದೊಂದು ವಾಕ್ಯವನ್ನು ಸೇರಿಸಬೇಕು. ಆದರೆ ನಿಮ್ಮ ವಾಕ್ಯ ಬರೆಯುವ ಮೊದಲು, ಮೊದಲಿನವರು ಯಾವ ವಾಕ್ಯಗಳನ್ನು ಬರೆದಿದ್ದಾರೆ ಎಂಬುದನ್ನು ಕಾಳಜಿ ಪೂರ್ವಕ ಓದಬೇಕು. ಆಮೇಲೆ ಅದಕ್ಕೆ ಸಂಬಂಧಿಸಿದ ವಾಕ್ಯಗಳನ್ನು ಬರೆಯಬೇಕು. ಹಾಗಾದರೆ ಕಥೆ ಬರೆಯಲು ಪ್ರಾರಂಭಿಸೋಣವೇ.

**ಮಕ್ಕಳು** : ಸರಿ ಸರ್. ಪ್ರಾರಂಭಿಸೋಣ.

**ವಿದ್ಯಾರ್ಥಿ ೧** : ಒಂದು ಕಾಡು ಇತ್ತು.

**ವಿದ್ಯಾರ್ಥಿ ೨** : ಒಂದು ಕಾಡು ಇತ್ತು. ಆ ಕಾಡಿನಲ್ಲಿ ಒಂದು ಸಿಂಹ ವಾಸಿಸುತ್ತಿತ್ತು.

**ವಿದ್ಯಾರ್ಥಿ ೩** : ಒಂದು ಕಾಡು ಇತ್ತು. ಆ ಕಾಡಿನಲ್ಲಿ ಒಂದು ಸಿಂಹ ವಾಸಿಸುತ್ತಿತ್ತು. ಅದು ಎಲ್ಲ ಪ್ರಾಣಿಗಳಿಗೆ ಹಿಂಸೆ ಕೊಡುತ್ತಿತ್ತು.

**ವಿದ್ಯಾರ್ಥಿ ೪** : ಒಂದು ಕಾಡು ಇತ್ತು. ಆ ಕಾಡಿನಲ್ಲಿ ಒಂದು ಸಿಂಹ ವಾಸಿಸುತ್ತಿತ್ತು. ಅದು ಎಲ್ಲ ಪ್ರಾಣಿಗಳಿಗೆ ಹಿಂಸೆ ಕೊಡುತಿತ್ತು. ಪ್ರಾಣಿಗಳು ಒಟ್ಟಿಗೆ ಸೇರಿದವು.

ಹೀಗೆ ಕಥೆ ಮುಂದುವರೆಯುವುದು. ...........

**ಕುಣಿಯಲು ಬಾರದವನಿಗೆ ಅಂಗಳ ಡೊಂಕು**



# ೭. ವನಭೋಜನ



ಡಿಸೆಂಬರ್ ಕಳೆದು ಜನೇವರಿ ಪ್ರಾರಂಭವಾಗಿತ್ತು. ಹೊಸ ವರುಷದ ಹೊಸ ಹರುಷ ಇನ್ನೂ ಮಾಸಿರಲಿಲ್ಲ. ಶಾಲೆಯ ಮಕ್ಕಳ ಮನದಲ್ಲಿ ವನಭೋಜನದ ಆತುರ ಕಾಣುತ್ತಿತ್ತು. ಈ ವರ್ಷ ಗುರುಗಳು ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗಬಹುದು? ಎಂಬ ಪ್ರಶ್ನೆ ಮಕ್ಕಳ ಮನದಲ್ಲಿ ತುಂಬಿತ್ತು.

ಅಂದು ಶನಿವಾರ ಪ್ರಾರ್ಥನೆಯ ನಂತರ, ''ಗುರುಗಳೆ ಈ ವರ್ಷದ ವನಭೋಜನ ಎಲ್ಲಿ?'' ಎಂದು ಮಕ್ಕಳು ಕೇಳಿದರು. ''ಬರುವ ಸೋಮವಾರ ನಾವೆಲ್ಲ ಊರ ಸಮೀಪದ 'ಬಸವೇಶ್ವರ ವನವಿಹಾರ'ಕ್ಕೆ ವನಭೋಜನಕ್ಕಾಗಿ ಹೋಗೋಣ'' ಎಂದು ಗುರುಗಳು ಹೇಳಿದರು. ಆಗ ಎಲ್ಲ ಮಕ್ಕಳು ''ಹುರ್ರೆ!ऽऽ'' ಎಂದು ಕುಣಿದಾಡಿದರು.



ಸೋಮವಾರ ಎಲ್ಲಿಗೆ ಬರಬೇಕು? ಏನೇನು ತರಬೇಕು? ಏನೇನು ತಯಾರಿ ಮಾಡಬೇಕು? ಎಂಬುದರ ಕುರಿತು ಚರ್ಚೆ ಆಯಿತು. ವನಭೋಜನದ ವಿಚಾರದಲ್ಲಿ ಮಕ್ಕಳೆಲ್ಲ ಮನೆಗೆ ಹೋಗಿ ತಯಾರಿ ನಡೆಸಿದರು. ಬೆಳಗಿನ ತಿಂಡಿಯನ್ನು ಎಲ್ಲರೂ ತಮ್ಮ ತಮ್ಮ ಮನೆಯಿಂದ ತರಬೇಕು. ಮಧ್ಯಾಹ್ನದ ಊಟವನ್ನು ಎಲ್ಲರೂ ಸೇರಿ ಅಲ್ಲಿಯೇ ತಯಾರಿಸುವುದೆಂದು ನಿಶ್ಚಯಿಸಿದರು. ನಾಲ್ಕನೆಯ ತರಗತಿಯ ಮಕ್ಕಳು ಅಕ್ಕಿ ಮತ್ತು ಬೇಳೆಯನ್ನು ತಂದರೆ ಮೂರನೆಯ ತರಗತಿಯ ಮಕ್ಕಳು ತರಕಾರಿಯನ್ನು ತರಲು

ಒಪ್ಪಿದರು. ಅಡುಗೆಗೆ ಬೇಕಾಗುವ ಪಾತ್ರೆ, ಉಪ್ಪು, ಖಾರ, ಮಸಾಲೆ ಪದಾರ್ಥಗಳನ್ನು ತರುವುದು ಹಾಗೂ ಮಧ್ಯಾಹ್ನದ ಊಟ ತಯಾರಿಸುವ ಕೆಲಸವನ್ನು ಅನ್ನಪೂರ್ಣಮ್ಮ ವಹಿಸಿಕೊಂಡರು.

ಅಂದು ಸೋಮವಾರ ಬೆಳಗಿನ ಸಮಯ ಮಕ್ಕಳು ತಿಂಡಿಯ ಡಬ್ಬಿಯೊಂದಿಗೆ ಸಿದ್ಧರಾದರು. ಆಟಿಕೆಗಳು ಜೊತೆಗಿದ್ದವು. ಗುರುಗಳು ಬಂದರು. ಜಯಕಾರದೊಂದಿಗೆ ಪ್ರಯಾಣ ಆರಂಭವಾಯಿತು. ಶಾಲೆಯಿಂದ ಸ್ವಲ್ಪ ದೂರದಲ್ಲಿ ವನವಿಹಾರವಿತ್ತು. ಅವರೆಲ್ಲ ಹಾಡು ಹಾಡುತ್ತ, ಹರಟೆ ಹೊಡೆಯುತ್ತ ಕೆಲ ಹೊತ್ತಿನಲ್ಲಿ ನಿಗದಿತ ಸ್ಥಳವನ್ನು ತಲುಪಿದರು. ವನವಿಹಾರದ ವ್ಯವಸ್ಥಾಪಕರು ಬಂದರು. ಮಕ್ಕಳನ್ನು ಗುರುಗಳನ್ನು ಸ್ವಾಗತಿಸಿದರು.

ವನವನ್ನು ಪ್ರವೇಶಿಸಿದ ಮಕ್ಕಳು ಸುತ್ತುಮುತ್ತ ಕುತೂಹಲದಿಂದ ನೋಡಿದರು. ಎಲ್ಲೆಡೆ ಹಸಿರೇ ಹಸಿರು. ಬಳ್ಳಿಗಳು, ಹಕ್ಕಿಗಳು, ಚಿಟ್ಟೆಗಳನ್ನೆಲ್ಲಾ ಕಂಡ ಮಕ್ಕಳು ಸಂತೋಷದಿಂದ ಕುಣಿದಾಡಿದರು. ಗುರುಗಳು ವನವಿಹಾರದಲ್ಲಿಯ ಗಿಡಮರಗಳ ಪರಿಚಯವನ್ನು ಮಾಡಿಕೊಟ್ಟರು. ವಿವಿಧ ಔಷಧಿ ವನಸ್ಪತಿಗಳ, ಹೂ-ಹಣ್ಣಿನ ಗಿಡಮರಗಳ ಪ್ರಯೋಜನ ವಿವರಿಸಿದರು. ಬಣ್ಣ ಬಣ್ಣದ ಅಂದದ-ಚಂದದ ಚಿಟ್ಟೆಗಳನ್ನು ತೋರಿಸಿ ಅವುಗಳ ಬಗ್ಗೆ ಮಾಹಿತಿ ನೀಡಿದರು.

ಮಕ್ಕಳು ವಿಶಾಲವಾದ ಮರಗಳ ನೆರಳಿನಲ್ಲಿ ಗೋಲಾಕಾರವಾಗಿ ಕುಳಿತರು. ಮಧ್ಯದಲ್ಲಿ ಒಂದು ದೊಡ್ಡ ಕಾಗದವನ್ನು ಹರಡಿ ತಾವು ತಂದ ಚಕ್ಕಲಿ, ಚೂಡಾ, ಲಾಡು, ಅವಲಕ್ಕಿ, ಕೋಡುಬಳೆ, ಜಾಮೂನು ಪದಾರ್ಥಗಳನ್ನು ಇಟ್ಟರು. ಎಲ್ಲರೂ ಸೇರಿ ತಿಂಡಿಯ ಸವಿಯನ್ನು ಸವಿದು ಆನಂದಿಸಿದರು.



ಮಕ್ಕಳು ಗುಂಪು ಗುಂಪಾಗಿ ಕ್ರಿಕೆಟ್, ಕಬಡ್ಡಿ, ಕುಂಟೆಬಿಲ್ಲೆ, ಹಗ್ಗದಾಟ, ಕಣ್ಣಾಮುಚ್ಚಾಲೆ ಆಟಗಳನ್ನು ಆಡಿದರು. ಅನ್ನಪೂರ್ಣಮ್ಮವರ ಊಟದ ಕರೆಗೆ ಮಕ್ಕಳು ಕೈಕಾಲು ಮುಖ ತೊಳೆದುಕೊಂಡು ಊಟಕ್ಕೆ ಕುಳಿತರು. ಕೆಲವು ಮಕ್ಕಳು ಊಟ ಬಡಿಸಲು ಮುಂದಾದರು. ಆಟವಾಡಿ ಹಸಿದ ಬಾಲರು ಬಾಳೆಯ ಎಲೆಯ ಮೇಲಿನ ಘಮಘಮಿಸುವ ಮಸಾಲೆ ಅನ್ನದ ಕಡಗೆ ಧಾವಿಸಿದರು. ಗುರುಗಳ ಜೊತೆಗೆ ಭೋಜನ ಸವಿದು ಎಳೆಯರೆಲ್ಲ ಸಂತಸಪಟ್ಟರು. ಅನ್ನಪೂರ್ಣಮ್ಮನಿಗೆ ಪಾತ್ರೆ ತೊಳೆಯಲು ಮಕ್ಕಳು ಸಹಕರಿಸಿದರು. ಗುರುಗಳು ಮಕ್ಕಳೆಲ್ಲರನ್ನೂ ವರ್ತುಳಾಕಾರದಲ್ಲಿ ಕೂಡಿಸಿದರು. ಏಕಪಾತ್ರಾಭಿನಯ, ನಾಟಕ, ಹಾಡು, ಕಥೆ, ಚುಟುಕು, ಒಗಟು, ನೃತ್ಯ ಹೀಗೆ ತಮ್ಮ ಕಲಾ ಗುಣಗಳನ್ನು ತೋರಿಸುವಾಗ ಮಕ್ಕಳಿಗೆ ಸಮಯ ಸರಿದದ್ದು ತಿಳಿಯಲಿಲ್ಲ. ಆಗಲೇ ಸೂರ್ಯ ಪಶ್ಚಿಮದ ಕಡೆ ತಿರುಗಿದ್ದನು. ಭಾರವಾದ ಮನಸ್ಸಿನಿಂದ ಮಕ್ಕಳೆಲ್ಲ ಮನೆಗೆ ಹೊರಡಲು ಮುಂದಾದರು.



ವ್ಯವಸ್ಥಾಪಕರಿಗೆ ಧನ್ಯವಾದಗಳನ್ನು ತಿಳಿಸಿ ಗುರುಗಳೊಟ್ಟಿಗೆ ಊರಿನೆಡೆಗೆ ಹೆಜ್ಜೆ ಹಾಕಿದರು. ಇಷ್ಟು ಬೇಗ ವನಭೋಜನ ಮುಗಿಯಿತೇ ಎಂದು ಎಲ್ಲರೂ ಯೋಚಿಸತೊಡಗಿದರು. ಮಕ್ಕಳಲ್ಲಿ ಬರುವಾಗಿನ ಉತ್ಸಾಹ ಹೋಗುವಾಗ ಕಾಣಲಿಲ್ಲ.



**ಶಬ್ದಗಳ ಅರ್ಥ:**

ಪ್ರಯಾಣ - ಪ್ರವಾಸ; ಸಂಗ್ರಹಿಸು - ಒಟ್ಟುಗೂಡಿಸು; ಕುತೂಹಲ - ಆತುರ; ನೃತ್ಯ - ಕುಣಿತ.



**ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆ.**

ಭೋಜನ- ........................ ತೃಪ್ತಿ - ........................

ಸವಿ - ........................ ಮೃಷ್ಟಾನ್ನ- ........................



**ಮಾತನಾಡೋಣ ಬನ್ನಿ.**

೧) ನೀನು ಹೋದ ವನಭೋಜನ ಸ್ಥಳದ ಹೆಸರು ಹೇಳು.

೨) ವನಭೋಜನದಲ್ಲಿ ನಿನಗೆ ಏನು ಇಷ್ಟವಾಯಿತು?

೩) ವನಭೋಜನಕ್ಕೆ ಹೋಗುವ ಮೊದಲು ನೀನು ಯಾವ ತಯಾರಿ ಮಾಡುವೆ?



**ಕೆಳಗಿನ ಪ್ರಶ್ನೆಗಳಿಗೆ ಪರ್ಯಾಯಗಳನ್ನು ಕೊಡಲಾಗಿದೆ ಯೋಗ್ಯ ಪರ್ಯಾಯಕ್ಕೆ ವರ್ತುಳ ◯ ಹಾಕು.**

ಅ) ಹೊಸ ವರುಷದ ಮೊದಲ ತಿಂಗಳು ಯಾವುದು?

೧) ಡಿಸೆಂಬರ ೨) ಫೆಬ್ರುವರಿ ೩) ಜನೇವರಿ ೪) ಮಾರ್ಚ

ಬ) ತರಕಾರಿ ಯಾರು ತಂದರು?

೧) ಮೂರನೆಯ ತರಗತಿಯ ಮಕ್ಕಳು. ೨) ನಾಲ್ಕನೆಯ ತರಗತಿಯ ಮಕ್ಕಳು.

೩) ಅನ್ನಪೂರ್ಣಮ್ಮ ೪) ಶಿಕ್ಷಕರು

ಕ) ಅಡುಗೆ ಮಾಡುವ ಜವಾಬ್ದಾರಿಯನ್ನು ಯಾರು ವಹಿಸಿಕೊಂಡರು?

೧) ಮಕ್ಕಳು ೨) ಜನರು ೩) ಅನ್ನಪೂರ್ಣಮ್ಮ ೪) ಶಿಕ್ಷಕರು

**ಒಂದೇ ವಾಕ್ಯದಲ್ಲಿ ಉತ್ತರ ಬರೆ.**

ಅ. ವನಭೋಜನಕ್ಕೆ ಎಲ್ಲಿಗೆ ಹೋಗಲು ನಿಶ್ಚಯಿಸಿದರು?

.................................................................................................

ಬ. ಅನ್ನಪೂರ್ಣಮ್ಮ ಏನನ್ನು ತಯಾರಿಸಿದರು?

.................................................................................................

ಕ. ಮಕ್ಕಳು ಹುರ್ರೆ! ಎಂದು ಏಕೆ ಕೂಗಿದರು?

.................................................................................................

ಡ. ಈ ಪಾಠದಲ್ಲಿ ನಿನಗೆ ಯಾವ ಸಂಗತಿ ಇಷ್ಟವಾಯಿತು?

.................................................................................................

ಇ. ಮಕ್ಕಳಿಗೆ ವೇಳೆ ಹೋದದ್ದು ಏಕೆ ಗೊತ್ತಾಗಲಿಲ್ಲ?

.................................................................................................



**ವನಭೋಜನದ ಅನುಭವಗಳನ್ನು ನಿನ್ನ ಮಾತುಗಳಲ್ಲಿ ಯೋಗ್ಯ ವಿರಾಮ ಚಿಹ್ನೆಗಳೊಂದಿಗೆ ಬರೆ.**

..........................................................................................

..........................................................................................

..........................................................................................

..........................................................................................



**ಕೆಳಗಿನ ಶಬ್ದಗಳಲ್ಲಿಯ ಅಕ್ಷರಗಳನ್ನು ಬಳಸಿ ಚಿಕ್ಕ - ಚಿಕ್ಕ ಶಬ್ದಗಳನ್ನು ತಯಾರಿಸಿ ಬರೆ.**

೧) ಅನ್ನಪೂರ್ಣಮ್ಮ

........................, ........................, ........................, ........................,

೨) ವನಭೋಜನ

........................, ........................, ........................, ........................,

## ಶಬ್ದಚಕ್ರ

**ಕೆಳಗೆ ಕೊಟ್ಟ ಶಬ್ದಚಕ್ರದಲ್ಲಿ 'ಆಟದ ಮೈದಾನಕ್ಕೆ' ಸಂಬಂಧಿಸಿದ ಶಬ್ದಗಳನ್ನು ಕೊಡಲಾಗಿದೆ. ಇವುಗಳ ಹೊರತಾಗಿ ನಿನಗೆ ಗೊತ್ತಿರುವ ಶಬ್ದಗಳನ್ನು ಬರೆ.**




ಮೇಲಿನ ಶಬ್ದ ಚಕ್ರದ ಸಹಾಯದಿಂದ ವಾಕ್ಯಗಳನ್ನು ರಚಿಸು,

ಉದಾ. ಶಾಲೆಯ ಮುಂದೆ ಆಟದ ಮೈದಾನ ಇದೆ. ಮೈದಾನದಲ್ಲಿ ಮಕ್ಕಳು ಆಟ ಆಡುತ್ತಿದ್ದಾರೆ.

..........................................................................................

..........................................................................................

..........................................................................................

**ಸಹಭೋಜನ ಸಹಜೀವನದ ದಾರಿ**



# ೮. ತರಕಾರಿ ಗಾಡಿ



ರಸ್ತೆಗೆ ಬಂದಿದೆ ಎಲ್ಲರೂ ನೋಡಿ
ಬಗೆ ಬಗೆಯ ತರಕಾರಿಯ ಗಾಡಿ
ಹೆಂಗಸರೆಲ್ಲರ ಜೊತೆ ಜೊತೆಗೂಡಿ
ಪುಟ್ಟ ಮಕ್ಕಳು ಬಂದರು ಓಡಿ

ಗಾಡಿಯಲ್ಲಿತ್ತು ಸೋರೆಕಾಯಿ
ದುಂಡು ದುಂಡನೆಯ ಕುಂಬಳಕಾಯಿ
ಬದಿಯಲ್ಲಿರುವವು ಬೆಂಡೆ ಕಾಯಿ
ನಡುವಿನ ರಾಶಿಯು ತೊಂಡೆಕಾಯಿ

ಸೊಪ್ಪಿನ ಕಟ್ಟು ಈ ಕಡೆಯಲ್ಲಿ
ಮೆಣಸಿನಕಾಯಿ ರಾಶಿಯು ಇಲ್ಲಿ
ಕೆಂಪಿನ ಟೊಮೇಟೊ ಹಣ್ಣಿಹುದಿಲ್ಲಿ
ಚಂದದ ನೇರಳೆ ಬದನೆಯು ಇಲ್ಲಿ

ಉದ್ದದ ನುಗ್ಗೇಕಾಯಿಯು ಉಂಟು
ಹಸಿರು ಬಣ್ಣದ ಹರಿವೆಯ ದಂಟು
ಆಲೂಗಡ್ಡೆಯ ರಾಶಿಯು ಉಂಟು
ಸೊಪ್ಪು ತರಕಾರಿ ಆರೋಗ್ಯದ ಗುಟ್ಟು

–ಸವಿತಾ ಭಟ್





**ಶಬ್ದಗಳ ಅರ್ಥ :**

ರಸ್ತೆ – ದಾರಿ; ಪುಟ್ಟ– ಚಿಕ್ಕ; ದುಂಡನೆಯ – ಗುಂಡಾಗಿರುವ; ಬದಿ – ಪಕ್ಕ;
ಹರಿವೆ – ದಂಟಿನ ಸೊಪ್ಪು, ರಾಜಗಿರಿ ಸೊಪ್ಪು.



**ಮಾತನಾಡೋಣ ಬನ್ನಿ.**

೧) ನಿನಗೆ ಯಾವ ಯಾವ ತರಕಾರಿ ಇಷ್ಟ?

೨) ನೀನು ಸಂತೆಗೆ ಹೋದಾಗ ಯಾವ ತರಕಾರಿಗಳನ್ನು ನೋಡಿದೆ?



**ವಿಂಗಡಿಸಿ ಬರೆ.**

ಮೂಲಂಗಿ, ಬದನೆಕಾಯಿ, ಟೊಮೇಟೊ, ಗಜ್ಜರೆ, ಕುಂಬಳಕಾಯಿ, ಆಲೂಗಡ್ಡೆ, ತೊಂಡೆಕಾಯಿ, ಸೋರೆಕಾಯಿ, ಮೆಣಸಿನಕಾಯಿ, ಗೆಣಸು, ಪಡುವಲಕಾಯಿ, ಈರುಳ್ಳಿ, ಹೀರೆಕಾಯಿ, ಬೆಂಡೆಕಾಯಿ, ಹಾಗಲಕಾಯಿ





ಎಲೆ ಹಾಗೂ ಹೂವಿನಲ್ಲಿ ಹೊಂದಿಕೆಯಾಗುವ ಅಕ್ಷರಗಳನ್ನು ಸೇರಿಸಿ ಪದ ರಚಿಸು.




## ಹೇಳು ನಾನಾರು?

೧) ಒಂದು ಕೊಂಬಿನ ಗೂಳಿ
ಅದರ ತಲೆಯಲ್ಲಿ ಮುಳ್ಳು

೨) ಹಗ್ಗ ಹಾಸಿದೆ ಗೂಳಿ ಮಲಗಿದೆ

೩) ಬಿಳಿ ಕುದುರೆಗೆ ಹಸಿರು ಬಾಲ







೧) ಬದನೆಕಾಯಿ ೨) ಕುಂಬಳಕಾಯಿ ೩) ಮೂಲಂಗಿ

**ಊಟ ಬಲ್ಲವಗೆ ರೋಗವಿಲ್ಲ, ಮಾತು ಬಲ್ಲವಗೆ ಜಗಳವಿಲ್ಲ**

# ೯. ಕೋತಿಯ ಕಥೆ

‘‘ಅಜ್ಜಿ ಅದ್ಯಾವುದೋ ಒಂದು ಕೋತಿ ತಮಟೆ ಇಟ್ಟುಕೊಂಡು ಬಾರಿಸಿ ಏನೋ ಹಾಡುತ್ತಿತ್ತಲ್ಲ ಆ ಕಥೆ ಹೇಳಜ್ಜಿ’’ ‘‘ಆಯ್ತು ಮಗು ಹೇಳುತ್ತೇನೆ ಕೇಳು’’ ಎಂದು ಅಜ್ಜಿ ಮಗುವಿಗೆ ಕಥೆ ಹೇಳಲು ಪ್ರಾರಂಭಿಸಿದಳು.



ಒಮ್ಮೆ ಒಂದು ಕೋತಿಯ ಬಾಲದಲ್ಲಿಮುಳ್ಳು ಚುಚ್ಚಿಕೊಂಡಿತ್ತು. ಅಲ್ಲಿಯೇ ದಾರಿಯಲ್ಲೊಬ್ಬ ವ್ಯಕ್ತಿ ಹೋಗುತ್ತಿದ್ದ.ಆತನನ್ನು ನೋಡಿ ಕೋತಿ, ‘‘ಅಣ್ಣಾ ನನ್ನ ಬಾಲದಲ್ಲಿ ಮುಳ್ಳೊಂದು ಚುಚ್ಚಿಕೊಂಡಿದೆ ದಯವಿಟ್ಟು ತೆಗೆಯಪ್ಪ’’ ಎಂದು ಕೇಳಿತು. ಆತ ಆ ಮುಳ್ಳು ತೆಗೆಯಲಿಕ್ಕೆ ನೋಡಿದ. ಆದರೆ ಆಗಲೇ ಇಲ್ಲ. ಆಗ ಆತ ತನ್ನ ಕೈಯಲ್ಲಿದ್ದ ಚಾಕುವಿನಿಂದ ಕೋತಿಯ ಬಾಲವನ್ನೇ ಕತ್ತರಿಸಿಬಿಟ್ಟ. ಕೋತಿ ಸಿಟ್ಟಿನಿಂದ ‘‘ನನ್ನ ಬಾಲ ಕೊಡ್ತಿಯೋ? ನಿನ್ನ ಚಾಕು ಕೊಡ್ತಿಯೋ?’’ ಅಂತ ಒಂದೇ ಸವನೆ ರಸ್ತೆಯಲ್ಲಿ ಗಲಾಟೆ ಶುರು ಮಾಡಿತು. ತಕ್ಷಣ ಆ ವ್ಯಕ್ತಿ ಹೆದರಿ ಚಾಕುವನ್ನೇ ಕೊಟ್ಟುಬಿಟ್ಟನು.



ಅಲ್ಲಿಂದ ಕೋತಿ ಮುಂದೆ ಹೋಯಿತು. ಅಲ್ಲೊಬ್ಬ ಕಬ್ಬನ್ನು ಬಾಯಲ್ಲಿ ಕಚ್ಚಿಕೊಂಡು ತಿನ್ನುತ್ತಿದ್ದನು. ಅದನ್ನು ನೋಡಿತು ಕೋತಿ, ಚಾಕು ಅವನಿಗೆ ಕೊಟ್ಟು ‘‘ಅಣ್ಣಾ, ಬಾಯಲ್ಲಿ ಯಾಕೆ ಕಷ್ಟಪಟ್ಟು ತಿನ್ನುತ್ತೀ, ಈ ಚಾಕುವಿನಿಂದ ಹೆರಚಿಕೊ’’ ಎಂದಿತು. ಆತ ಕಬ್ಬು ಹೆರಚುತ್ತಾ ಹೆರಚುತ್ತಾ ಇರುವಾಗ ಫಕ್ಕನೆ ಚಾಕು ಮುರಿದು ಹೋಯಿತು. ಆಗ ಕೋತಿ ಮತ್ತೆ ಅಳುತ್ತಾ ‘‘ಚಾಕು ಕೊಡ್ತಿಯೊ? ಕಬ್ಬು ಕೊಡ್ತಿಯೊ?’’ ಎಂದು ಗದ್ದಲ ಶುರು ಮಾಡಿತು. ‘‘ಅಯ್ಯೋ! ಕಬ್ಬನ್ನೇ ಕೊಡ್ತೀನಿ ಮಹಾರಾಯಾ ಅಳಬೇಡ’’ ಎಂದು ಹೇಳಿ ಆ ವ್ಯಕ್ತಿ ಕಬ್ಬು ಕೊಟ್ಟುಬಿಟ್ಟನು.



ಅಲ್ಲಿಂದ ಕೋತಿ ಮತ್ತೆ ಮುಂದೆ ಸಾಗಿತು. ಒಂದು ಮಗು ''ನನಗೆ ಕಬ್ಬು ಬೇಕು, ಕಬ್ಬು ಬೇಕು'' ಎಂದು ಒಂದೇ ಸವನೆ ಅಳುತ್ತಿತ್ತು. ಅದನ್ನು ನೋಡಿ ಈ ಕೋತಿ ಮಗುವಿಗೆ ಕಬ್ಬು ಕೊಟ್ಟಿತು. ಮಗು ಕಬ್ಬೆಲ್ಲ ತಿಂದು ಮುಗಿಸುತ್ತಲೇ ಕೋತಿ ಮತ್ತೆ ತನ್ನ ಆಟ ಶುರು ಮಾಡಿತು. ಮಗುವಿನ ತಂದೆಗೆ ''ಕಬ್ಬು ಕೊಡ್ತಿಯೋ? ನಿಮ್ಮ ಎತ್ತು ಕೊಡ್ತಿಯೋ?'' ಎಂದು ರಾಗ ಶುರು ಮಾಡಿತು. ಅದರ ರಾಗ ನೋಡಿ ಮಗುವಿನ ತಂದೆ ತಕ್ಷಣ ''ಅಯ್ಯೋ ರಾಮ! ಎತ್ತನ್ನೇ ತೆಗೆದುಕೊ'' ಎಂದು ಎತ್ತನ್ನೇ ಕೊಟ್ಟುಬಿಟ್ಟನು.

ಅಲ್ಲಿಂದ ಕೋತಿ ಮತ್ತೆ ಮುಂದೆ ಚಲಿಸಿತು. ಅಲ್ಲೊಬ್ಬ ಗಾಣದವನು ಒಂದೇ ಒಂದು ಎತ್ತು ಇಟ್ಟುಕೊಂಡು ಕೆಲಸಮಾಡುತ್ತಿದ್ದನು. ಅದನ್ನು ಕೋತಿ ನೋಡಿತು, ''ಅಣ್ಣಾ ಒಂದೇ ಎತ್ತು ತೆಗೆದುಕೊಂಡು ಯಾಕೆ ಕೆಲಸ ಮಾಡುತ್ತಿರುವೆ? ನನ್ನ ಎತ್ತೊಂದು ಜೊತೆಗೆ ತೆಗೆದುಕೊ'' ಎಂದು ಹೇಳಿತು ಎತ್ತನ್ನು ಅವನಿಗೆ ಕೊಟ್ಟಿತು. ಆದರೆ ಗಾಣ ಹೊಡೆಯುವಾಗ ಕೋತಿ ಕೊಟ್ಟ ಎತ್ತು ನೆಗೆದು ಬಿದ್ದಿತು. ಆಗ ಮತ್ತೆ ಕೋತಿ ತನ್ನ ಮೊದಲಿನ ಆಟ ಆರಂಭಿಸಿತು.



''ಎತ್ತು ಕೊಡ್ತಿಯೋ? ಎಣ್ಣೆ ಕೊಡ್ತೀಯೋ?'' ಎಂದು ಕಿರಿ ಕಿರಿ ಶುರು ಮಾಡಿತು. ಕಿರಿಕಿರಿಗೆ ಗಾಣಿಗ ಹೆದರಿ ತಕ್ಷಣ ಕೋತಿಗೆ ಎಣ್ಣೆ ಕೊಟ್ಟು ಕಳುಹಿಸಿದನು.



ಅಲ್ಲಿಂದ ಕೋತಿ ಮತ್ತೆ ಸಂಚಾರ ಮುಂದುವರಿಸಿತು. ದಾರಿಯಲ್ಲಿ ಮುದುಕಿ ಒಬ್ಬಳು ನೀರು ಹಚ್ಚಿ ದೋಸೆ ಮಾಡುತ್ತಿದ್ದಳು. ಆಕೆಗೆ ಕೋತಿ, ಅಮ್ಮ ಅಮ್ಮ ನೀರು ಹಚ್ಚಿ ಯಾಕೆ ದೋಸೆ ಮಾಡುತ್ತಿ? ತಗೋ ಈ ಎಣ್ಣೆಯಲ್ಲಿ ದೋಸೆ ಮಾಡಿದರೆ ಅದು ರುಚಿಯಾಗಿರುತ್ತೆ ಎಂದು ಹೇಳಿ ಎಣ್ಣೆ ಕೊಟ್ಟಿತು. ಎಣ್ಣೆ ಎಲ್ಲಾ ಮುಗಿದ ನಂತರ ಕೋತಿ ಮತ್ತೆ ತನ್ನ ನಾಟಕ

ಆರಂಭ ಮಾಡಿತು. ''ಎಣ್ಣೆ ಕೊಡ್ತೀಯೋ? ದೋಸೆ ಕೊಡ್ತಿಯೋ?'' ಎಂದು ಕಾಡಿತು, ಮುದುಕಿ ದೋಸೆ ಕೊಟ್ಟು ಜಾಗ ಖಾಲಿ ಮಾಡಿಸಿದಳು.



ಅಲ್ಲಿಂದ ಕೋತಿ ಮತ್ತೆ ಮುಂದೆ ಸಾಗಿತು, ಅಲ್ಲಿ ತಮಟೆ ಬಾರಿಸುವವರು ಕುಳಿತಿದ್ದರು. ಆಗ ಕೋತಿ ಎಲ್ಲರಿಗೂ ತಿನ್ನಲು ಎರಡೆರಡು ದೋಸೆ ಕೊಟ್ಟಿತು. ಎಲ್ಲರೂ ದೋಸೆ ತಿಂದ ನಂತರ ಮತ್ತೆ ಕೋತಿ ತನ್ನ ಚಾಳಿ ಮುಂದುವರಿಸಿತು. ''ನನ್ನ ದೋಸೆ ಕೊಡ್ತಿರೋ? ಇಲ್ಲ ನಿಮ್ಮ ತಮಟೆ ಕೊಡ್ತಿರೋ?'' ಎಂದು ಗೋಳಾಡಿತು. ತಕ್ಷಣ ತಮಟೆ ಬಾರಿಸುವವರು ಕೋತಿಯ ರಂಪಾಟ ನೋಡಿ ಇದರ ಸಹವಾಸವೇ ಬೇಡ ಎಂದು ಒಂದು ತಮಟೆ ಕೊಟ್ಟು ಅಲ್ಲಿಂದ ಓಡಿಸಿದರು.



ಆಗ ಕೋತಿ ಒಂದು ಮರವೇರಿ
ತಮಟೆ ಬಾರಿಸುತ್ತಾ

ಬಾಲ ಹೋಯಿತು ಚಾಕು ಬಂತು
ಡುಂ ಡುಂ ಡುಮುಕ್

ಚಾಕು ಹೋಯಿತು ಕಬ್ಬು ಬಂತು
ಡುಂ ಡುಂ ಡುಮುಕ್
ಕಬ್ಬು ಹೋಯಿತು ಎತ್ತು ಬಂತು
ಡುಂ ಡುಂ ಡುಮುಕ್
ಎತ್ತು ಹೋಯಿತು ಎಣ್ಣೆ ಬಂತು
ಡುಂ ಡುಂ ಡುಮುಕ್

ಎಣ್ಣೆ ಹೋಯಿತು ದೋಸೆ ಬಂತು
ಡುಂ ಡುಂ ಡುಮುಕ್

ದೋಸೆ ಹೊಯ್ತು ತಮಟೆ ಬಂತು
ಡುಂ ಡುಂ ಡುಮುಕ್

ಡುಂ ಡುಂ ಡುಮುಕ್
ಡುಂ ಡುಂ ಡುಮುಕ್
ಡುಂ ಡುಂ ಡುಮುಕ್

ಎಂದು ಹಾಡುತ್ತ ಜಿಗಿಯುತ್ತಾ ಓಡಿ ಹೋಯಿತು.



### ಶಬ್ದಗಳ ಅರ್ಥ:

ಕೋತಿ – ಮಂಗ; ಗಲಾಟೆ – ಗದ್ದಲ;

ತಮಟೆ – ಒಂದು ವಿಧದ ವಾದ್ಯ.



### ಮಾತನಾಡೋಣ ಬನ್ನಿ,

೧) ನಿನಗೆ ನಿಮ್ಮ ಮನೆಯಲ್ಲಿ ಯಾರು ಕಥೆ ಹೇಳುತ್ತಾರೆ?

೨) ನಿನಗೆ ಗುರುತಿರುವ ಯಾವುದೇ ಒಂದು ಕಥೆಯ ಹೆಸರು ಹೇಳು.

೩) ನಿನಗೆ ಯಾವ ರೀತಿಯ ಕಥೆಗಳು ಇಷ್ಟವಾಗುವವು?



### ಯೋಚಿಸಿ ಹೇಳು.

ನಿನಗೆ ಗುರುತಿರುವ ಯಾವುದಾದರೂ ಒಂದು ಕಥೆ ಹೇಳು.



### ‘ಅ’ ಭಾಗದ ಎರಡೂ ಪದಗಳನ್ನು ಓದು, ಸರಿಯಾದ ಪದವನ್ನು ಆಯ್ದುಕೊಂಡು ‘ಬ’ ಭಾಗದಲ್ಲಿ ಬರೆ.

| | ಅ | ಬ |
|---|---|---|
| ಉದಾ: | ತಮಟೆ<br>ತಮಠೆ | ತಮಟೆ |
| | ಹೋಇತ್ತು<br>ಹೋಯಿತು | |
| | ನನ್ನಗೆ<br>ನನಗೆ | |
| | ದೋಸೆ<br>ದೊಸೆ | |
| | ರುಚಿ<br>ರೂಚಿ | |



**ಗೆರೆ ಹೊಡೆದ ಶಬ್ದಗಳನ್ನು 'ನಾಮಪದ' ಮತ್ತು 'ಸರ್ವನಾಮ' ಎಂಬುದನ್ನು ಗುರುತಿಸಿ ಬರೆ.**

೧) <u>ಕೋತಿ</u>ಯೊಂದು <u>ಗಿಡ</u>ದ ಮೇಲೆ ಕುಳಿತಿತ್ತು. <u>ಅದು</u> <u>ತಮಟೆ</u> ಬಾರಿಸುತಿತ್ತು.

ನಾಮಪದ : ..........................

ಸರ್ವನಾಮ : ..........................

೨) <u>ಆತ</u> <u>ಚಾಕು</u>ವಿನಿಂದ <u>ಅದರ</u> ಬಾಲವನ್ನೇ ಕತ್ತರಿಸಿ ಬಿಟ್ಟನು.

ನಾಮಪದ : ..........................

ಸರ್ವನಾಮ : ..........................



**ಈ ಪದಗಳಿಗೆ ಉದಾಹರಣೆಯಲ್ಲಿ ತೋರಿಸಿದಂತೆ ಬುಟ್ಟಿಯಲ್ಲಿಯ ಸರಿ ಹೊಂದುವ ಶಬ್ದವನ್ನು ಬರೆ.**

ಉದಾ : ಕೊಡ್ತೀನಿ – ಕೊಡುತ್ತೇನೆ.




ಗದ್ಲ......................

ಮಾಡ್ತು ....................

ಯಾಕೆ ......................

ಎಣ್ಣೇಲಿ ....................

ಮಾಡ್ತಾರೆ .................



**ದ್ರಾಕ್ಷಿ ಗೊಂಚಲಿನಲ್ಲಿರುವ ಪದಗಳನ್ನು ಮತ್ತು ಸಂಖ್ಯೆಗಳನ್ನು ಓದು, ಉದಾಹರಣೆಯಲ್ಲಿ ತೋರಿಸಿದಂತೆ ಗಾದೆಮಾತುಗಳನ್ನು ರಚಿಸು.**




| ಉದಾ: | ಸಂಖ್ಯೆ | | ಗಾದೆ ಮಾತು |
|---|---|---|---|
| | ೧೮,೮,೧೪ | – | ಮಾಡು ಇಲ್ಲವೆ ಮಡಿ |
| | ೧೧,೧೭,೧೨ | – | .............................................. |
| | ೦೪,೦೧ | – | .............................................. |
| | ೦೨,೧೩,೧೬,೦೬ | – | .............................................. |
| | ೦೫,೧೫,೦೯ | – | .............................................. |

**ಸೂಚನೆ :** ಕೋತಿ ಹಾಡಿದ ಹಾಡನ್ನು ಅನುಲೇಖನ ಮಾಡಿಸಿಕೊಳ್ಳಿರಿ.



**ಉದಾಹರಣೆಯಲ್ಲಿ ತೋರಿಸಿದಂತೆ ಕೊಡದಲ್ಲಿಯ ಶಬ್ದಗಳನ್ನು ಜೋಡಿಸಿ ಬರೆ.**







**ಉದಾ:** ಸಿಹಿ X ಕಹಿ

...................... X ........................

...................... X ........................

...................... X ........................

...................... X ........................



**ಕೊಟ್ಟಿರುವ ಕೋಷ್ಟಕದಲ್ಲಿಯ ಪದಗಳನ್ನು ಓದಿ ಅರ್ಥಪೂರ್ಣ ವಾಕ್ಯ ತಯಾರಿಸಿ ಬರೆ.**

| | | |
|---|---|---|
| ಅವನು | ಕಬ್ಬನ್ನು | ಬಾರಿಸಿತು |
| ಅವಳು | ತಮಟೆಯನ್ನು | ಕುಡಿದಳು |
| ಅವರು | ದೋಸೆಯನ್ನು | ತಿಂದನು |
| ಆಕೆ | ನೀರನ್ನು | ಮಾಡಿದಳು |
| ಅದು | ಎಣ್ಣೆಯನ್ನು | ಮಾರಿದರು |

**ಉದಾ :** ಅವರು ಎಣ್ಣೆಯನ್ನು ಮಾರಿದರು.

................................................

................................................

................................................

................................................



**'ಕೋತಿಯ ಕಥೆ' ಯಂತೆ ಇನ್ನೊಂದು ಚಿಕ್ಕ ಕಥೆ ರಚಿಸಿ ಅದಕ್ಕೆ ಶೀರ್ಷಿಕೆ ಕೊಡಿ.**

## ಮಂಗನ ಕೈಯಲ್ಲಿ ಮಾಣಿಕ್ಯ



# ೧೦. ಆಲೂಗಡ್ಡೆಯ ಓಟ



ಶಿಕ್ಷಕರು ಎಲ್ಲ ಮಕ್ಕಳನ್ನು ಕರೆದುಕೊಂಡು ಆಟದ ಮೈದಾನಕ್ಕೆ ಬಂದರು. ''ನಾವು ಇಂದು ಆಲೂಗಡ್ಡೆಯ ಆಟವನ್ನು ಆಡೋಣ'' ಎಂದರು. ಮಕ್ಕಳಿಗೆ ಆನಂದವೇ ಆನಂದ. ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಶಿಕ್ಷಕರು ಒಂದು ಗೆರೆಯನ್ನು ಎಳೆದರು ಮತ್ತು ಆಟದ ನಿಯಮ ತಿಳಿಸಿ ಹೇಳಿದರು.



- ಪ್ರತಿ ಸಾಲಿನಲ್ಲಿ ೪ ರಿಂದ ೫ ಆಲೂಗಡ್ಡೆಗಳಿರುವವು.
- ಒಂದು ಆಲೂಗಡ್ಡೆಯಿಂದ ಮತ್ತೊಂದು ಆಲೂಗಡ್ಡೆಯ ನಡುವಿನ ಅಂತರ ಸುಮಾರು ೬ ರಿಂದ ೧೦ ಅಡಿಗಳಿರುವುದು.
- ಆಲೂಗಡ್ಡೆಗಳನ್ನು ತುಂಬಲು ಒಂದು ರಟ್ಟಿನ ಪೆಟ್ಟಿಗೆ ಅಥವಾ ಬುಟ್ಟಿಯನ್ನು ಆರಂಭದ ಗೆರೆಯ ಮೇಲೆ ಇಡುವುದು.
- ಪ್ರತಿ ಬುಟ್ಟಿಯ ಹಿಂದೆ ಒಬ್ಬ ಆಟಗಾರ ನಿಲ್ಲುವನು, ಸೂಚನೆಯಾದೊಡನೆ ಆಟಗಾರರು ಓಡಿ ಮೊದಲ ಆಲೂಗಡ್ಡೆಯನ್ನು ತೆಗೆದುಕೊಂಡು ಬಂದು ಬುಟ್ಟಿಯಲ್ಲಿಟ್ಟು ಎರಡನೆಯದನ್ನು ತಂದು ಬುಟ್ಟಿಯಲ್ಲಿಟ್ಟು, ಮೂರನೆಯದನ್ನು ತೆಗೆದುಕೊಂಡು ಬರಲು ಹೋಗುವುದು. ಹೀಗೆ ಒಂದಾದ ಮೇಲೆ ಒಂದರಂತೆ ಎಲ್ಲಾ ಆಲೂಗಡ್ಡೆಗಳನ್ನು ಬುಟ್ಟಿಯಲ್ಲಿ ಕೂಡಿಸುವುದು.
- ಯಾವ ಆಟಗಾರ ಮೊದಲು ಎಲ್ಲ ಆಲೂಗಡ್ಡೆಗಳನ್ನು ಬುಟ್ಟಿಯಲ್ಲಿ ಕೂಡಿಸುವನೋ ಅವನು ಗೆದ್ದಂತೆ.
- ಆಟಗಾರರು ಆಲೂಗಡ್ಡೆಗಳನ್ನು ಯಾವ ಕ್ರಮದಲ್ಲಿಯಾದರೂ ಕೂಡಿಸಬಹುದು. ಇದೇ ಕ್ರಮವೆಂಬ ನಿರ್ಬಂಧವಿರುವದಿಲ್ಲ. ಒಂದಾದ ಮೇಲೆ ಒಂದನ್ನು ಮಾತ್ರ ತರಬೇಕು. ನಿಯಮದ ವಿರುದ್ಧ

ನಡೆಯುವ ಆಟಗಾರರನ್ನು ಹೊರಗೆ ಹಾಕಲಾಗುವುದು. ಹೆಚ್ಚು ಆಟಗಾರರಿದ್ದರೆ ತಂಡಗಳಾಗಿ ವಿಂಗಡಿಸಿ ಆಡಿಸಲಾಗುವುದು.

- ಆಟದ ಹೆಸರು ಆಲೂಗಡ್ಡೆಯ ಓಟವಾದರೂ ಆಲೂಗಡ್ಡೆಗಳನ್ನೇ ಇಡಬೇಕೆಂದಿಲ್ಲ. ಕಲ್ಲುಗಳನ್ನು, ಚೆಂಡುಗಳನ್ನು, ಕಟ್ಟಿಗೆಯ ತುಂಡುಗಳನ್ನು ಅಥವಾ ಯಾವುದಾದರೂ ಅನುಕೂಲವಾದ ವಸ್ತುಗಳನ್ನು ಆಲೂಗಡ್ಡೆಗಳಿಗೆ ಬದಲಾಗಿ ಇಡಬಹುದು.

ಆಟ ಆಡಿ ಮುಗಿಯುವಷ್ಟರಲ್ಲಿ ಶಾಲೆಯ ಗಂಟೆ ಬಾರಿಸಿತು ಆನಂದದಿಂದ ಮಕ್ಕಳು ಮನೆಗೆ ತೆರಳಿದರು.



**ಶಬ್ದಗಳ ಅರ್ಥ:**

ಆಲೂಗಡ್ಡೆ – ಬಟಾಟೆ; ನಿಯಮ – ಕಟ್ಟುಪಾಡು; ತಂಡ – ಗುಂಪು;
ಅನುಕೂಲತೆ – ಸೌಕರ್ಯ; ಕ್ರಮ – ವಿಧಾನ.



**ಮಾತನಾಡೋಣ ಬನ್ನಿ**

೧. ನೀವು ಯಾವ ಯಾವ ಆಟಗಳನ್ನು ಆಡುತ್ತೀರಿ?

೨. ನಿನ್ನ ನೆಚ್ಚಿನ ಆಟ ಯಾವುದು ಮತ್ತು ಏಕೆ?

೩. ಮೈದಾನದಲ್ಲಿ ಆಡುವ ಆಟಗಳು ಯಾವವು?



**ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆ.**

೧. ಶಿಕ್ಷಕರು ಯಾವ ಆಟ ಆಡಿಸಿದರು?

..............................................................................................

೨. ಪ್ರತಿ ಸಾಲಿನಲ್ಲಿ ಎಷ್ಟು ಆಲೂಗಡ್ಡೆಗಳಿರುವವು?

..............................................................................................

೩. ಒಂದು ಆಲೂಗಡ್ಡೆಯಿಂದ ಮತ್ತೊಂದು ಆಲೂಗಡ್ಡೆಯ ನಡುವಿನ ಅಂತರ ಎಷ್ಟು?

..............................................................................................

೪. ಆಲೂಗಡ್ಡೆ ಬದಲಾಗಿ ಬೇರೆ ಯಾವ ವಸ್ತುಗಳನ್ನು ಇಡಬಹುದು?

..............................................................................................

೫. ನಿನಗೆ ಇಷ್ಟವಾದ ಆಟಗಳ ಹೆಸರು ಬರೆ.

..............................................................................................



**ಕೆಳಗಿನ ವಾಕ್ಯಗಳನ್ನು ಅನುಕ್ರಮವಾಗಿ ಬರೆ.**

೧. ಯಾವ ಆಟಗಾರ ಮೊದಲು ಎಲ್ಲ ಆಲೂಗಡ್ಡೆಗಳನ್ನು ಕೂಡಿಸುವನೋ ಅವನು ಗೆದ್ದಂತೆ.

೨. ಪ್ರತಿ ಬುಟ್ಟಿಯ ಹಿಂದೆ ಒಬ್ಬ ಆಟಗಾರ ನಿಲ್ಲಬೇಕು.

೩. ಆಲೂಗಡ್ಡೆಯ ನಡುವಿನ ಅಂತರ ಸುಮಾರು ೬ ರಿಂದ ೧೦ ಅಡಿ ಇರುವುದು.

೪. ಒಂದಾದ ಮೇಲೆ ಒಂದರಂತೆ ಎಲ್ಲ ಆಲೂಗಡ್ಡೆಗಳನ್ನು ಕೂಡಿಸುವುದು.



**ಶಿಕ್ಷಕರ / ಪಾಲಕರ ಸಹಾಯದಿಂದ ಕಂಸದಲ್ಲಿ ಕೊಟ್ಟಂತಹ ಆಟಗಾರರ ಹೆಸರನ್ನು ಸಂಬಂಧಿತ ಆಟದ ಮುಂದೆ ಬರೆ.**

(ಸಾಯನಾ ನೆಹವಾಲ, ಸಚಿನ ತೆಂಡೂಲ್ಕರ, ಧ್ಯಾನಚಂದ, ಮೇರಿಕಾಮ್, ಹಿಮಾದಾಸ, ಪಿ.ವಿ.ಸಿಂಧು, ರಾಹುಲ ದ್ರಾವಿಡ, ಪಿ.ಟಿ. ಉಷಾ)

★ ಬ್ಯಾಡ್ಮಿಂಟನ್ : ..........................................

★ ಹಾಕಿ : ..........................................

★ ಬಾಕ್ಸಿಂಗ : ..........................................

★ ಓಟ : ..........................................

★ ಕ್ರಿಕೆಟ್ : ..........................................

## ವಚನ

**ಏಕವಚನ:**

೧) ಬಾಲಕನು ತೋಟದಲ್ಲಿ ಆಡುತ್ತಿದ್ದಾನೆ.

೨) ನಾಯಿ ಜೋರಾಗಿ ಬೊಗಳುತ್ತಿದೆ.

೩) ನನ್ನ ಬಳಿ ಒಂದು ಪುಸ್ತಕ ಇದೆ.

ಮೇಲಿನ ವಾಕ್ಯಗಳಲ್ಲಿ ಬಾಲಕ, ನಾಯಿ, ಪುಸ್ತಕ ಇವು ಒಂದೊಂದೇ ಇವೆ ಎಂಬುದನ್ನು ಸೂಚಿಸುತ್ತವೆ. ಅವುಗಳನ್ನು ಏಕವಚನ ಎನ್ನುವರು.

**ಬಹುವಚನ:**

೧) ಬಾಲಕರು ತೋಟದಲ್ಲಿ ಆಡುತ್ತಿದ್ದಾರೆ.

೨) ನಾಯಿಗಳು ಜೋರಾಗಿ ಬೊಗಳುತ್ತಿವೆ.

೩) ನನ್ನ ಬಳಿ ಪುಸ್ತಕಗಳು ಇವೆ.

ಮೇಲಿನ ವಾಕ್ಯಗಳಲ್ಲಿ ಬಾಲಕರು, ನಾಯಿಗಳು, ಪುಸ್ತಕಗಳು ಇವು ಒಂದಕ್ಕಿಂತ ಹೆಚ್ಚು ಇವೆ ಎಂಬುದನ್ನು ಸೂಚಿಸುತ್ತವೆ. ಅವುಗಳನ್ನು ಬಹುವಚನ ಎನ್ನುವರು.

**ಆಟ ಆಡು ಪಾಠ ಓದು**



# ೧೧. ತಂಗಿಯ ಬೇಡಿಕೆ





ಅಣ್ಣಾ, ಅಣ್ಣಾ
ರಜೆಯಲಿ, ಮರೆಯದೆ
ಊರಿಗೆ ಬಾರಣ್ಣ
ಬರುತಲಿ ನಿನ್ನಯ
ಪ್ರೀತಿಯ ತಂಗಿಗೆ
ಉಡುಗೊರೆ ತಾರಣ್ಣ ||೧||

ರಿಬ್ಬನ್ ಪೌಡರು
ಬಣ್ಣದ ಬಳೆಗಳು
ಬೇಕೆ ಬೇಕಣ್ಣ
ಚಕ್ಕುಲಿ ಚೂಡಾ
ರುಚಿಕರ ಪೇಡೆ
ತರಲೇ ಬೇಕಣ್ಣ ||೨||



ಅಂದದ ಚಂದದ
ಕಥೆಗಳ ಪುಸ್ತಕ
ತರುವೆ ಏನಣ್ಣ
ದಿನವೂ ನಿನ್ನಯ
ದಾರಿಯ ಕಾಯುವೆ
ಮರೆಯಲು ಬೇಡಣ್ಣ ||೩||

– ಉಮಾತನಯ ರಾಜ



**ಶಬ್ದಗಳ ಅರ್ಥ:**

ರುಚಿಕರ – ಸಿಹಿ; ಪ್ರೀತಿಯ – ಮಮತೆಯ.



**ಶಬ್ದಕೋಶದಿಂದ ಕೆಳಗಿನ ಶಬ್ದಗಳ ಅರ್ಥವನ್ನು ಹುಡುಕಿ ಬರೆ.**

೧) ಉಡುಗೊರೆ = ..............................................

೨) ದಾರಿ = ..............................................



**ಮಾತನಾಡೋಣ ಬನ್ನಿ.**

೧) ನಿಮಗೆ ಯಾರು ಉಡುಗೊರೆ ಕೊಡುತ್ತಾರೆ?

೨) ನಿನ್ನ ಗೆಳೆಯ/ಗೆಳತಿಗೆ ಹುಟ್ಟು ಹಬ್ಬಕ್ಕೆ ಯಾವ ಉಡುಗೊರೆ ಕೊಡುವೆ?



**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.**

೧) ತಂಗಿ ಅಣ್ಣನಿಗೆ ಯಾವ ಉಡುಗೊರೆಯನ್ನು ತರಲು ಹೇಳಿದ್ದಾಳೆ?

..........................................................................................

೨) ತಂಗಿ ಅಣ್ಣನಿಗೆ ಯಾವ ರುಚಿಕರ ತಿಂಡಿಗಳನ್ನು ತರಲು ಹೇಳಿದ್ದಾಳೆ?

..........................................................................................



ಪ್ರಾಸಯುಕ್ತ ಶಬ್ದಗಳನ್ನು ಕವಿತೆಯಿಂದ ಆರಿಸಿ ಬರೆಯಿರಿ.

...................... – ......................; ...................... – ......................,

...................... – ......................

**ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನವುಗಳ ಮುಂದೆ ಯೋಗ್ಯ ಪದ ಬರೆ.**

ಉದಾ: ರಿಬ್ಬನ್ – ಕಟ್ಟುವುದು.

೧) ಪೌಡರ – ......................................

೨) ಚಕ್ಕುಲಿ – ......................................

೩) ಬಳೆ – ......................................

೪) ಪುಸ್ತಕ – ......................................




# ಶುಭಾಶಯಗಳ ಪೆಟ್ಟಿಗೆ

**ಚಟುವಟಿಕೆಯ ಹಂತಗಳು:**

೧. **ಸಿದ್ಧತೆ:**

ತರಗತಿಯಲ್ಲಿ ಒಂದು ಸಣ್ಣ ಪೆಟ್ಟಿಗೆಯನ್ನು ಇರಿಸಿ. ಅದರಲ್ಲಿ ವಿವಿಧ ಸಂದರ್ಭಗಳನ್ನು ಬರೆದ ಚೀಟಿಗಳನ್ನು ಹಾಕಿ.

ಉದಾಹರಣೆಗೆ:

- ಗೆಳೆಯನ ಜನ್ಮದಿನ.
- ದೀಪಾವಳಿ ಹಬ್ಬ.
- ಅಕ್ಕನಿಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಬಂದಾಗ.
- ಶಿಕ್ಷಕರ ದಿನಾಚರಣೆ.
- ಹೊಸ ವರ್ಷದ ಆರಂಭ.

೨. **ಅಭಿನಯ ಮತ್ತು ಸಂಭಾಷಣೆ:**

ಒಬ್ಬ ವಿದ್ಯಾರ್ಥಿ ಮುಂದೆ ಬಂದು ಪೆಟ್ಟಿಗೆಯಿಂದ ಒಂದು ಚೀಟಿ ತೆಗೆಯಬೇಕು. ಆ ಚೀಟಿಯಲ್ಲಿರುವ ಸಂದರ್ಭಕ್ಕೆ ತಕ್ಕಂತೆ ತನ್ನ ಗೆಳೆಯನಿಗೆ ಅಥವಾ ಶಿಕ್ಷಕರಿಗೆ ಶುಭಾಶಯ ತಿಳಿಸಬೇಕು.

ಮಾದರಿ ಸಂಭಾಷಣೆಗಳು:

ಜನ್ಮದಿನ: ನಿನಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು, ಗೆಳೆಯಾ.

ಹಬ್ಬ: ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಯುಗಾದಿ ಹಬ್ಬದ ಶುಭಾಶಯಗಳು.

ಯಶಸ್ಸು: ಪರೀಕ್ಷೆಯಲ್ಲಿ ಪಾಸಾಗಿದ್ದಕ್ಕೆ ನಿನಗೆ ಅಭಿನಂದನೆಗಳು.

೩. 'ಶುಭಾಶಯ ಪತ್ರ' ತಯಾರಿಸು.






















(ಕೈಬರಹದ ಅಭ್ಯಾಸ): ಮಕ್ಕಳಿಗೆ ಸಣ್ಣ ಕಾಗದಗಳನ್ನು ನೀಡಿ, ಅವರಿಗೆ ಇಷ್ಟವಾದ ಒಂದು ಸಂದರ್ಭವನ್ನು ಆರಿಸಿಕೊಂಡು ಸುಂದರವಾದ ಶುಭಾಶಯ ಪತ್ರ ಬರೆಯಲು ಹೇಳಿ. ಅದರಲ್ಲಿ ಬಣ್ಣದ ಚಿತ್ರಗಳನ್ನು ಬಿಡಿಸಲು ಪ್ರೋತ್ಸಾಹಿಸಿರಿ.



# ೧೨. ಚಿತ್ರಹರಟೆ: ನಾವು ಎಲ್ಲಿ ತಪ್ಪು ಮಾಡುತ್ತಿದ್ದೇವೆ?





**ಸೂಚನೆ:** ವಿದ್ಯಾರ್ಥಿಗಳಿಗೆ ಚಿತ್ರವನ್ನು ಸೂಕ್ಷ್ಮ ನಿರೀಕ್ಷಣೆ ಮಾಡಲು ಹೇಳಿರಿ ಮತ್ತು ಚಿತ್ರಕ್ಕೆ ಸಂಬಂಧಿತ ಪ್ರಶ್ನೆಗಳನ್ನು ಕೇಳಿರಿ.
ಉದಾ: ಓಡುತ್ತಿರುವ ಗಾಡಿಯನ್ನು ಹತ್ತಿದರೆ ಏನಾಗಬಹುದು?

# ೧೩. ಮುಗಿಲು ಕಡಿದು ಬಿತ್ತು



ಒಂದು ಮರದ ಕೆಳಗೆ ಕೋಳಿಮರಿ ಕಾಳು ತಿನ್ನುತ್ತಿತ್ತು. ಮರದಿಂದ ಒಂದು ಎಲೆ ಅದರ ತಲೆಯ ಮೇಲೆ ಬಿದ್ದಿತು. ಅದು ಬಹಳಷ್ಟು ಗಾಬರಿಯಿಂದ, ''ಏ ಯಪ್ಪಾ! ನನ್ನ ತೆಲಿಮ್ಯಾಲ ಮುಗಲ ಕಡದು ಬಿಳಾಕತ್ತಾದೋ ಯಪ್ಪಾ,'' ಹೀಗೆ ಹೇಳುತ್ತಾ ಓಡತೊಡಗಿತು.

ಅಷ್ಟರಲ್ಲಿ ಎದುರಿಗೆ ಕೋಳೆವ್ವ ಬರುತ್ತಿದ್ದಳು. ಅವಳು ಕೋಳಿಮರಿಗೆ ಕೇಳಿದಳು. ''ಮರಿ ಮರಿ ಕೋಳಿಮರಿ ಹಿಂಗ್ಯಾಕ ಓಡಾಕತ್ತೀಯೇ? ಆಗ ಕೋಳಿಮರಿ ''ಏ! ಯವ್ವಾ ! ಮುಗಲ ಕಡದು ಬೀಳಾಕತ್ತಾದ.... ಅದರದೊಂದು ತುಣುಕು ನನ್ನ ತೆಲಿಮ್ಯಾಲ ಬಿದ್ದಾದ ನೀನೂ ಓಡು'' ಆಗ ಕೋಳೆವ್ವ ಅದರ ಜೊತೆಗೆ ಓಡತೊಡಗಿದಳು.



ಎದುರಿಗೆ ಹುಂಜಪ್ಪಾ ಬರುತ್ತಿದ್ದನು. ಅವನು ''ಏ! ಮರಿ ಮರಿ ಕೋಳಿಮರಿ, ಕೋಳೆವ್ವ ನೀವಿಬ್ರೂ ಹಿಂಗ್ಯಾಕ ಓಡಾಕತ್ತೀರಿ? ಎಂದು ಕೇಳಿದನು. ಕೋಳೆವ್ವ ಹೇಳಿದಳು. ''ಏ! ಹುಂಜಪ್ಪಾ ಮುಗಲ ಕಡದು ಬೀಳಾಕತ್ತಾದ ... ಅದರದೊಂದು ತುಣುಕು ಕೋಳಿಮರಿ ತೆಲಿಮ್ಯಾಲ ಬಿದ್ದಾದ ನೀನು ಓಡು'' ಹುಂಜಪ್ಪನೂ ಅವರ ಜೊತೆಗೆ ಓಡತೊಡಗಿದನು.



ಎದುರಿಗೆ ಬಾತಕ್ಕ ಬರುತ್ತಿದ್ದಳು, ''ಏ!... ಮರಿ ಮರಿ ಕೋಳಿಮರಿ, ಕೋಳೆವ್ವ ಮತ್ತು ಹುಂಜಪ್ಪಾ ಹಿಂಗ್ಯಾಕ ಓಡಾಕತ್ತೀರಿ?'' ಎಂದು ಕೇಳಿದಳು. ಹುಂಜಪ್ಪಾ ಹೇಳಿದನು, ''ಏ! ಬಾತಕ್ಕ ಮುಗಲ ಕಡದು ಬೀಳಾಕತ್ತಾದ... ಅದರದೊಂದು ತುಣುಕು ಕೋಳಿಮರಿ ತೆಲಿಮ್ಯಾಲ ಬಿದ್ದಾದ ನೀನೂ ಓಡು'' ಆಗ ಬಾತಕ್ಕ ಕೂಡ ಅವರೊಂದಿಗೆ ಓಡತೊಡಗಿದಳು.



ದೂರದಿಂದ ನರಿಯಣ್ಣ ಇವರನ್ನು ನೋಡಿ ಹತ್ತಿರ ಬಂದು ''ಏ!... ಮರಿ ಮರಿ ಕೋಳಿಮರಿ, ಕೋಳೆವ್ವ, ಹುಂಜಪ್ಪಾ ಮತ್ತು ಬಾತಕ್ಕ ಹಿಂಗ್ಯಾಕ ಓಡಾಕತ್ತೀರಿ?'' ಎಂದು ಕೇಳಿತು. ಆಗ ಬಾತಕ್ಕ ಹೇಳಿದಳು. ''ಏ! ನರಿಯಣ್ಣ ಮುಗಲ ಕಡದು ಬೀಳಾಕತ್ತಾದ... ಅದರದೊಂದು ತುಣುಕು ಕೋಳಿಮರಿ ತೆಲಿಮ್ಯಾಲ ಬಿದ್ದಾದ ನೀನೂ ಓಡು ನರಿಯಣ್ಣ''. ಇವುಗಳ ಮೂರ್ಖತನ ಅರಿತು ಹೊಂಚು ಹಾಕಿ ''ನೀವ್ಯಾರೂ ಅಂಜಬ್ಯಾಡ್ರಿ, ನನ್ನ ಮನಿಗೆ ನಡಿರಿ. ಅದು ಭಾಳ ಗಟ್ಟಿ ಮುಟ್ಟ ಐತಿ'' ಎಂದು ಹೇಳಿ ಎಲ್ಲರನ್ನೂ ಗುಹೆಯಲ್ಲಿ ಹಾಕಿತು.

''ಆಹಾ.. ಹಾ.. ನನಗೆ ಊಟ ಸಿಕ್ತು. ಹಾ... ಹಾ... ನನಗೆ ಭಲೋ ಊಟ ಸಿಕ್ತು'', ಎಂದು ಕೂಗತೊಡಗಿತು. ಇದನ್ನು ಕೇಳಿ ಗುಹೆಯಲ್ಲಿಯ ಪಕ್ಷಿಗಳು ''ಕಾಪಾಡಿರಿ... ಕಾಪಾಡಿರಿ...ಕಾಪಾಡಿರಿ'' ಎಂದು ಚೀರಾಡತೊಡಗಿದವು. ಅಷ್ಟರಲ್ಲಿ ಒಂದು ನಾಯಿಯು ಬಂದಿತು. ಚೀರಾಡುವ ಧ್ವನಿ ಕೇಳಿ ನಾಯಿಯು ಗುಹೆಯ ಕಡೆಗೆ ಓಡಿತು. ನಾಯಿಯನ್ನು ಕಂಡು ನರಿಯು ಕಾಲಿಗೆ ಬುದ್ಧಿ ಹೇಳಿತು. ಎಲ್ಲಾ ಪಕ್ಷಿಗಳು ನಾಯಣ್ಣನಿಗೆ ಧನ್ಯವಾದಗಳನ್ನು ಹೇಳಿದವು.





## ಶಬ್ದಗಳ ಅರ್ಥ:

ಗಾಬರಿ – ಹೆದರಿಕೆ;  ತುಣುಕು – ತುಂಡು; ಮೂರ್ಖ – ದಡ್ಡ, ಅಜ್ಞಾನಿ;

ಕಾಲಿಗೆ ಬುದ್ಧಿ ಹೇಳು – ಓಡಿಹೋಗು; ಹೊಂಚು ಹಾಕು – ಉಪಾಯ ಮಾಡು.



## ಮಾತನಾಡೋಣ ಬನ್ನಿ

೧. ನಿಮಗೆ ಗುರುತಿರುವ ಪ್ರಾಣಿ ಪಕ್ಷಿಗಳ ಧ್ವನಿಗಳನ್ನು ನಕಲು ಮಾಡಿ ತೋರಿಸು.

೨. ಕೋಳಿ ಮರಿಯ ಸ್ಥಾನದಲ್ಲಿ ನೀನು ಇದ್ದರೆ ಏನು ಮಾಡುವೆ?



## ಉದಾಹರಣೆಯಲ್ಲಿ ತೋರಿಸಿದಂತೆ ಬರೆ.

ಉದಾ : ಮುಗಲ – ಮುಗಿಲು.

ಹಿಂಗ್ಯಾಕ – ..........................................

ಮ್ಯಾಲ ಕಡದು – ..........................................

ಅಂಜಬ್ಯಾಡ್ರಿ – ..........................................

## ಉದಾಹರಣೆಯಲ್ಲಿ ತೋರಿಸಿದಂತೆ ಅರ್ಥಪೂರ್ಣ ವಾಕ್ಯ ರಚಿಸು.

ಉದಾ: ಧನ್ಯವಾದಗಳನ್ನು ನಾಯಣ್ಣನಿಗೆ ಪಕ್ಷಿಗಳು ಹೇಳಿದವು.

ಪಕ್ಷಿಗಳು ನಾಯಣ್ಣನಿಗೆ ಧನ್ಯವಾದಗಳನ್ನು ಹೇಳಿದವು.

೧) ಅವರೊಂದಿಗೆ ಕೂಡ ಓಡತೊಡಗಿದಳು ಬಾತಕ್ಕ.

..................................................................................

೨) ಅಂಜಬ್ಯಾಡ್ರಿ, ನನ್ನ ನಡಿರಿ ನೀವ್ಯಾರು ಮನಿಗೆ.

..................................................................................

೩) ಸಿಕ್ಕಿತು ಊಟ ಭಲೋ ನನಗ.

..................................................................................

೪) ನಾಯಿಯು ಅಲ್ಲಿ ಒಂದು ಬಂದಿತು

..................................................................................



**ಒಂದೇ ವಾಕ್ಯದಲ್ಲಿ ಉತ್ತರ ಬರೆ.**

೧) ಮರದ ಕೆಳಗೆ ಯಾರು ಇದ್ದರು?

....................................................................................................

೨) ತಲೆಯ ಮೇಲೆ ಏನು ಬಿತ್ತು?

....................................................................................................

೩) ಪ್ರಾಣಿಗಳ ಮೂರ್ಖತನ ಅರಿತು ಯಾರು ಹೊಂಚು ಹಾಕಿದರು?

....................................................................................................

೪) ನರಿಯು ಏಕೆ ಕಾಲಿಗೆ ಬುದ್ಧಿ ಹೇಳಿತು?

....................................................................................................



**ಕೆಳಗಿನ ವಾಕ್ಯದಲ್ಲಿ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ವಾಕ್ಯ ಪುನಃ ಬರೆ.**

ಮರಿ ಮರಿ ಕೋಳಿಮರಿ ನೀವಿಬ್ರೂ ಹಿಂಗ್ಯಾಕ ಓಡಾಕತ್ತೀರಿ.

....................................................................................................



**ಕೆಳಗಿನ ಮಾತು ಬೇರೆ ಬೇರೆ ಹಾವಭಾವದಲ್ಲಿ ಹೇಳಿರಿ.**

''ಏ ಯಪ್ಪಾ! ನನ್ನ ತೆಲಿಮ್ಯಾಲ ಮುಗಲ ಕಡದು ಬೀಳಾಕತ್ತಾದೋ ಯಪ್ಪಾ''



ದುಃಖದಲ್ಲಿ ಹೇಳು



ಸಂತೋಷದಲ್ಲಿ ಹೇಳು



ಗಾಬರಿಯಾಗುತ್ತ ಹೇಳು

**ಶಿಕ್ಷಕರ / ಪಾಲಕರ ಸಹಾಯದಿಂದ ಕಥೆಯನ್ನು ನಾಟ್ಯೀಕರಣ ಮಾಡಿರಿ.**

**ಸೂಚನೆ:** ಯೋಗ್ಯ ವಿರಾಮ ಚಿಹ್ನೆಗಳೊಂದಿಗೆ ಪಾಠದಲ್ಲಿಯ ಐದಾರು ಸಾಲುಗಳ ಅನುಲೇಖನವನ್ನು ಮಾಡಿಸಿಕೊಳ್ಳಿರಿ.

**ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು**

# ೧೪. ಡಾಲ್ಫಿನ್



(ಟಿವ್ಹಿಯಲ್ಲಿ ಡಾಲ್ಫಿನ್ ಶೋ ನಡೆದಿರುವಾಗ, ಮಗ ಮತ್ತು ತಂದೆ ಇವರ ನಡುವೆ ನಡೆದ ಸಂಭಾಷಣೆ )

**ಅವನೀಶ :** ಅಪ್ಪಾ, ಇದು ಯಾವ ಮೀನು ಇದೆ?

**ಅಪ್ಪ :** ಅವನೀಶ ಇದು ಡಾಲ್ಫಿನ್, ಇದು ತಿಮಿಂಗಲ ಜಾತಿಗೆ ಸೇರಿದೆ. ಇದನ್ನು ಕನ್ನಡ ಭಾಷೆಯಲ್ಲಿ 'ಹಂದಿಮೀನು' ಎನ್ನುವರು.

**ಅವನೀಶ :** ಅಪ್ಪಾ, ಇದು ಎಲ್ಲಿ ವಾಸಿಸುತ್ತದೆ?

**ಅಪ್ಪ :** ಸಾಗರದಲ್ಲಿ ವಾಸಿಸುತ್ತದೆ.

**ಅವನೀಶ :** ಅಪ್ಪಾ, ಇದು ಟಿವ್ಹಿಯಲ್ಲಿ ಎಷ್ಟು ಚಂದ ಕಾಣುತ್ತಿದೆ. ಆದರೆ ನನಗೆ ಇದರ ಬಣ್ಣ ಸರಿಯಾಗಿ ತಿಳಿಯುತ್ತಿಲ್ಲ.




**ಅಪ್ಪ** : ಹೌದಾ, ಇದರ ದೇಹದ ಬಣ್ಣವು ಬೆನ್ನು ಭಾಗದಲ್ಲಿ ಬೂದು ಅಥವಾ ಬೂದು ಮಿಶ್ರಿತ ಕಪ್ಪು ಉದರ ಭಾಗದಲ್ಲಿ ಬಿಳಿ ಇರುತ್ತದೆ. ಇದು ನುಣುಪು ದೇಹದ ಪ್ರಾಣಿಯಾಗಿದೆ.

**ಅವನೀಶ** : ಅಪ್ಪಾ, ಡಾಲ್ಫಿನ್‌ಗಳು ಏನನ್ನು ತಿನ್ನುತ್ತವೆ?

**ಅಪ್ಪ** : ಡಾಲ್ಫಿನ್‌ಗಳು ಮೀನು, ಸಿಗಡಿ, ಸಾಗರ ತಳದಲ್ಲಿ ವಾಸಿಸುವ ಹಲವಾರು ಬಗೆಯ ಜೀವಿಗಳನ್ನು ತಿಂದು ಬದುಕುತ್ತವೆ.

**ಅವನೀಶ** : ಈ ಡಾಲ್ಫಿನ್‌ಗಳು ಎಷ್ಟು ವರ್ಷ ಜೀವಿಸುತ್ತವೆ?

**ಅಪ್ಪ** : ಇವುಗಳು ಸುಮಾರು ೨೫ ವರ್ಷಗಳ ಕಾಲ ಬದುಕುತ್ತವೆ.

**ಅವನೀಶ** : ಅಪ್ಪಾ, ಟಿವ್ಹಿಯಲ್ಲಿ ಆ ಅಕ್ಕ, ಡಾಲ್ಫಿನ್‌ಗಳ ಹತ್ತಿರ ಹೋಗುತ್ತಿದ್ದಾಳೆ. ಅವಳಿಗೆ ಅಪಾಯವಿಲ್ಲವೇ?

**ಅಪ್ಪ** : ಇಲ್ಲ. ಡಾಲ್ಫಿನ್‌ಗಳು ಸ್ನೇಹಪರ ಜೀವಿಗಳು, ಬುದ್ಧಿವಂತ ಪ್ರಾಣಿಗಳು ಕೂಡ. ಇವು ಮಾನವನಿಗೆ ಬಹಳ ಹಿಂದಿನ ಕಾಲದಿಂದಲೂ ಪರಿಚಿತವಾದ ಪ್ರಾಣಿಗಳು.

**ಅವನೀಶ** : ಅಪ್ಪಾ, ಈ ಕೊಳದಲ್ಲಿ ಡಾಲ್ಫಿನ್‌ಗಳು ಏನು ಮಾಡುತ್ತಿವೆ?

**ಅಪ್ಪ** : ಅವನೀಶ ಅಲ್ಲಿ ನೋಡು, ಡಾಲ್ಫಿನ್‌ಗಳಿಗೆ ಚೆಂಡು ಎಸೆತ, ನೀರಿನಿಂದ ಜಿಗಿತ, ಬಗೆ ಬಗೆಯ ಮನೋರಂಜನೆಯ ಆಟ ಆಡಿಸುತ್ತಾರೆ. ಅವು ಬೇರೆ ಬೇರೆ ಧ್ವನಿಯಲ್ಲಿ ಸಿಳ್ಳೆ ಹೊಡೆಯುತ್ತವೆ. ಅವುಗಳಿಗೆ ತರಬೇತಿ ಕೊಡುತ್ತಾರೆ. ಅವುಗಳ ಬುದ್ಧಿಮಟ್ಟದ ಬಗ್ಗೆ, ಭಾಷೆಯ ಬಗ್ಗೆ, ವೈಜ್ಞಾನಿಕ ಅಧ್ಯಯನಗಳು ನಡೆದಿವೆ.

**ಅವನೀಶ** : ಅಬ್ಬಾ! ಇದು ತುಂಬಾ ಚೆಂದದ ಪ್ರಾಣಿಯಾಗಿದೆ.



**ಶಬ್ದಾರ್ಥ:**

ಸಾಗರ-ಸಮುದ್ರ; ಅಪಾಯ-ತೊಂದರೆ; ನುಣುಪು-ಮೃದುವಾದ; ಉದರ-ಹೊಟ್ಟೆ.



**ಮಾತನಾಡೋಣ ಬನ್ನಿ**

೧) ನೀನು ಯಾವ ಯಾವ ಪ್ರಾಣಿಗಳನ್ನು ನೋಡಿದ್ದೀಯಾ ಮತ್ತು ಎಲ್ಲಿ?

೨) ನೀರಿನಲ್ಲಿರುವ ಪ್ರಾಣಿಗಳ ಹೆಸರು ಹೇಳು.

೩) ನಿನಗೆ ಇಷ್ಟವಾದ ಪ್ರಾಣಿ ಯಾವುದು ಮತ್ತು ಏಕೆ?

೪) ನಿಮ್ಮ ಮನೆಯಲ್ಲಿ ಯಾವ ಪ್ರಾಣಿಯನ್ನು ಸಾಕಿರುವೆ?



**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.**

೧) ಡಾಲ್ಫಿನ್‌ಗೆ ಕನ್ನಡದಲ್ಲಿ ಏನೆಂದು ಕರೆಯುತ್ತಾರೆ?

......................................................................................

೨) ಡಾಲ್ಫಿನ್ ಎಷ್ಟು ವರ್ಷ ಬದುಕುತ್ತದೆ?

......................................................................................



**ನಿಮ್ಮ ನೆಚ್ಚಿನ ಪ್ರಾಣಿಯ ಕುರಿತು ನಾಲ್ಕೈದು ವಾಕ್ಯಗಳಲ್ಲಿ ವಿವರಿಸಿ ಬರೆ.**

......................................................................................

......................................................................................

......................................................................................

......................................................................................

......................................................................................



**ಕೆಳಗಿನ ವಾಕ್ಯಗಳಲ್ಲಿ ಕ್ರಿಯಾಪದವನ್ನು ಗುರುತಿಸಿ ಆ ಪದಕ್ಕೆ ಅಡಿಗೆರೆ ಎಳೆ.**

೧) ಡಾಲ್ಫಿನ್ ಜೀವಂತ ಮೀನುಗಳನ್ನು ತಿನ್ನುತ್ತದೆ.

೨) ಡಾಲ್ಫಿನ್‌ಗಳು ಮಾನವನ ಸ್ನೇಹವನ್ನು ಬಯಸುತ್ತವೆ.

೩) ಡಾಲ್ಫಿನ್ ನುಣುಪು ದೇಹದ ಪ್ರಾಣಿಯಾಗಿದೆ.

೪) ಡಾಲ್ಫಿನ್ ಸುಮಾರು ೨೫ ವರ್ಷಗಳ ಕಾಲ ಬದುಕುತ್ತದೆ.



**ಕೃತಿ:** ನಿಮಗೆ ದೊರೆತ ಎಲೆಗಳು, ಹೂವುಗಳು ಹಾಗೂ ಬಣ್ಣ ಬಣ್ಣದ ಕಾಗದಗಳಿಂದ ಪಕ್ಷಿ, ಪ್ರಾಣಿಗಳನ್ನು ತಯಾರಿಸಿರಿ.



**ಕೆಳಗಿನ ಪದಬಂಧದಲ್ಲಿರುವ ಪ್ರಾಣಿ ಮತ್ತು ಪಕ್ಷಿಗಳ ಹೆಸರು ಹುಡುಕಿ ಬರೆ.**

## ಪದಬಂಧ

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಪೆ | ಕ | ಕೋ | ಗಿ | ಲೆ | ಸು | ಅ | ಕೊ | ಬು | ಡ | ನಾ | ಕ್ಷ | ಫೇ | ಸಿಂ | ನಂ |
| ಳು | ತ್ತು | ರಿ | ಪಾ | ಣ | ತಿ | ರಿ | ಲು | ಚಿ | ಗು | ರು | ಫೆ | ಹ | ಘು | ಧಾ |
| ಮಂ | ಣ | ಗ | ರಿ | ಜ | ನ | ತಿ | ವಿ | ಯಿ | ರ | ಬ್ಬಿ | ಆ | ಕಾ | ಚೇ | ಳಿ |
| ಚಿ | ಗ | ರು | ವಾ | ಲು | ವೆ | ಸಾ | ನ | ಟು | ಲು | ತೆ | ಸೆ | ಯೊ | ಕೋ | ಪ |
| ಬಾ | ದ | ಮೆ | ಳ | ಹೆ | ಬಾ | ಗಿ | ಡು | ದೇ | ತೋ | ಳ | ಭೀ | ಜೆ | ಝೋ | ಡಾ |

● **ಶೋಧಿಸು, ವಿಂಗಡಿಸು :**

| ಪಕ್ಷಿಗಳು | | ಪ್ರಾಣಿಗಳು | |
|---|---|---|---|
| ೧ | ಗುಬ್ಬಿ | ೧ | ಸಿಂಹ |
| ೨ | | ೨ | |
| ೩ | | ೩ | |
| ೪ | | ೪ | |
| ೫ | | ೫ | |

**ಕೊಟ್ಟ ಪರಿಚ್ಛೇದದಲ್ಲಿ ಸರ್ವನಾಮಗಳನ್ನು ಹುಡುಕಿ ಗೋಲು ಹಾಕು.**

ಜಾನಕಿ ಹಾಗೂ ಡೇವಿಡ್ ಒಳ್ಳೆಯ ಸ್ನೇಹಿತರು. ಅವರಿಗೆ ಶಾಲೆಯಲ್ಲಿಯೂ ಅನೇಕ ಸ್ನೇಹಿತರಿದ್ದಾರೆ. ಜಾನಕಿಗೆ ಪುಸ್ತಕ ಓದಲು ಇಷ್ಟ. ಅವಳ ಬಳಿ ಅನೇಕ ಪುಸ್ತಕಗಳಿವೆ. ಡೇವಿಡ್‌ನಿಗೆ ಆಟ ಹೆಚ್ಚು ಪ್ರಿಯ. ಅವನು ದಿನಾಲೂ ಗೆಳೆಯರೊಂದಿಗೆ ಆಟ ಆಡುತ್ತಾನೆ. 'ಟಾಮಿ' ಜಾನಕಿ ಸಾಕಿದ ನಾಯಿಮರಿ. ಅದು ಅವರೊಂದಿಗೆ ಆಟವಾಡುತ್ತದೆ. ಅವರೆಲ್ಲ ಅದನ್ನು ಬಹಳ ಪ್ರೀತಿಸುತ್ತಾರೆ.

## ನಾನು ಪ್ರಶ್ನೆ ತಯಾರಿಸುವೆ.



**ಚಿತ್ರ ನೋಡಿ ಪ್ರಶ್ನೆ ತಯಾರಿಸು.**



**ಉದಾ :-** ಎತ್ತಿನ ಗಾಡಿ ಎಲ್ಲಿಗೆ ಹೊರಟಿದೆ?

೧) ..........................................................................................

೨) ..........................................................................................

೩) ..........................................................................................

೪) ..........................................................................................

೫) ..........................................................................................

# ೧೫. ದಿನಪತ್ರಿಕೆಯ ಆತ್ಮಕಥೆ

ಮಕ್ಕಳೇ, ನಾನೊಂದು ದಿನಪತ್ರಿಕೆ. ಬೆಳಕು ಹರಿಯುವ ಹೊತ್ತಿಗೆ ಸುದ್ದಿಯ ಸೂರಪ್ಪನಾಗಿ ನಿಮ್ಮ ಮನೆಯ ಬಾಗಿಲಿಗೆ ಬರುತ್ತೇನೆ. ಹೊಸ ಹೊಸ ಸುದ್ದಿಗಳನ್ನು ತರುತ್ತೇನೆ. ನನ್ನ ಈ ಕಾರ್ಯ ನಿಮಗೆ ಆಶ್ಚರ್ಯ ತರುವುದಲ್ಲವೇ? ಹಾಗಾದರೆ ನನ್ನ ಜೀವನದ ಕಥೆಯನ್ನು ಕೇಳಿರಿ. ನಾನು ರಾತ್ರಿ ಮುದ್ರಣಾಲಯದಲ್ಲಿ ಹುಟ್ಟುತ್ತೇನೆ. ಆಮೇಲೆ ಮಾರಾಟಕ್ಕೆ ಸಿದ್ಧನಾಗುತ್ತೇನೆ. ನಾನು ಇಷ್ಟು ಬೇಗ ಹೇಗೆ ತಯಾರಾಗುವೆ ಎಂಬ ಸೋಜಿಗವೇ ನಿಮಗೆ? ಮುದ್ರಣದ ಕೆಲಸವು ಮೊದಲು ಕಠಿಣವಾಗಿತ್ತು ಇತ್ತೀಚೆಗೆ ಸಂಗಣಕದಿಂದ ಅದು ಅತ್ಯಂತ ಸುಲಭವಾಗಿದೆ. ದೇಶ ವಿದೇಶಗಳ ಸಮಾಚಾರಗಳು ನನ್ನ ಮುಖದಲ್ಲಿಯೇ ಎದ್ದು ಕಾಣುತ್ತವೆ. ನನ್ನ ಬೆನ್ನಂತೂ ಆಟದ ಸುದ್ದಿಗಳಿಗಾಗಿ ಮೀಸಲಾಗಿದೆ. ಅಲ್ಲಲ್ಲಿ ಕಾಣುವ ಬಣ್ಣ ಬಣ್ಣದ ಜಾಹೀರಾತುಗಳಿಂದ ನನ್ನ ಸೊಬಗು ಹೆಚ್ಚುತ್ತದೆ.

ಮಿತ್ರರೇ, ನಾನು ಭಾನುವಾರ ವಿಶೇಷವಾಗಿ ಮತ್ತು ಸುಂದರವಾಗಿ ಪ್ರಕಟವಾಗುತ್ತೇನೆ. ಭಾನುವಾರದ ಸಂಚಿಕೆ ಇರುತ್ತದೆ. ಅದರಲ್ಲಿ ಸುಂದರವಾದ ಕಥೆ, ಕವಿತೆ, ಜ್ಞಾನ, ವಿಜ್ಞಾನ ಮತ್ತು ಕಲೆಯ ವಿಷಯಗಳು ಇರುತ್ತವೆ. ನನ್ನಲ್ಲಿ ಮಕ್ಕಳಿಗಾಗಿಯೇ ಒಂದು ಪುಟ ಮೀಸಲಾಗಿರುತ್ತದೆ. ಅದರಲ್ಲಿ ಕಥೆಗಳು, ಕವಿತೆಗಳು, ಒಗಟುಗಳು, ಸುಂದರವಾದ ಚಿತ್ರಗಳು ಇರುತ್ತವೆ. ವಾರಪತ್ರಿಕೆಗಳು, ಮಾಸಪತ್ರಿಕೆಗಳೆಲ್ಲ ನನ್ನ ಬಂಧುಗಳು. ಅವುಗಳನ್ನೆಲ್ಲ ನೀವು ಓದಬೇಕು. ನಿಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ಆಕಸ್ಮಿಕವಾಗಿ ಸಂಭವಿಸುವ ಯುದ್ಧ, ಭೂಕಂಪ, ಬಿರುಗಾಳಿ, ರೋಗಗಳ ಹಾವಳಿಯ ಸುದ್ದಿಗಳನ್ನು ನಾನು ನೀಡುತ್ತೇನೆ. ಅವುಗಳನ್ನು ಓದಿ ಸಂಕಟದಲ್ಲಿದ್ದ ಜನರಿಗೆ ಸಹಾಯ ಮಾಡುವುದು ನಿಮ್ಮ ಕರ್ತವ್ಯ ಅಲ್ಲವೇ?



ಒಬ್ಬರಿಗೊಬ್ಬರು ಸಹಾಯ, ಸಹಕಾರ ಮಾಡಬೇಕು. ಜನರೆಲ್ಲ ಒಂದಾಗಿ ಬಾಳಬೇಕು. ದೇಶದ ಪ್ರಗತಿಗಾಗಿ ಪ್ರಯತ್ನಿಸಬೇಕು. ಈ ಸಂದೇಶ ಸಾರುವುದೇ ನನ್ನ ಬಾಳಿನ ಗುರಿಯಾಗಿದೆ.



**ಶಬ್ದಗಳ ಅರ್ಥ :**

ಆಕಸ್ಮಿಕ –ಒಮ್ಮೆಲೆ ತಿಳಿಯದೆ ನಡೆದ ಘಟನೆ; ಸಂಭವಿಸು– ಉಂಟಾಗು; ಸಂದೇಶ – ಸುದ್ದಿ.



**ಮಾತನಾಡೋಣ ಬನ್ನಿ.**

೧. ನೀನು ಓದುವ ದಿನಪತ್ರಿಕೆಗಳ ಹೆಸರು ಹೇಳು?

೨. ದಿನಪತ್ರಿಕೆಯನ್ನು ನೀನು ಎಲ್ಲಿ ನೋಡಿರುವೆ?

೩. ದಿನಪತ್ರಿಕೆಯಿಂದ ನಮಗೆ ಯಾವ ಲಾಭಗಳು ಇವೆ?



**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

೧. ದಿನಪತ್ರಿಕೆಯು ಎಲ್ಲಿ ಹುಟ್ಟುತ್ತದೆ?

..........................................................................

೨. ಈಗ ಮುದ್ರಣದ ಕೆಲಸ ಏಕೆ ಸುಲಭವಾಗಿದೆ?

..........................................................................

೩. ದಿನಪತ್ರಿಕೆಯ ಬಾಳಿನ ಗುರಿ ಯಾವುದು?

..........................................................................

೪. ದಿನ ಪತ್ರಿಕೆಯ ಬಂಧುಗಳು ಯಾರು?

..........................................................................

**ಬಿಟ್ಟ ಸ್ಥಳ ತುಂಬಿರಿ.**

೧. ನನ್ನ ಬೆನ್ನಂತೂ ...................... ಮೀಸಲಾಗಿದೆ.

೨. ದೇಶದ ...................... ಪ್ರಯತ್ನಿಸಬೇಕು.

**ಕೆಳಗಿನ ಶಬ್ದಗಳಿಗೆ ಆರಂಭದಲ್ಲಿ 'ವಿ' ಸೇರಿಸಿ ಬರೆ.**

ದೇಶ ..........................

ಜ್ಞಾನ ..........................

ನಯ ..........................

ಶೇಷ ..........................



ಕೊಟ್ಟ ಶಬ್ದ ಸಮೂಹಕ್ಕೆ ಒಂದು ಶಬ್ದ ಓದು, ಬರೆ.

| ಶಬ್ದ ಸಮೂಹ | ಉತ್ತರ | ಒಂದು ಶಬ್ದ |
|---|---|---|
| ೧) ಪ್ರತಿದಿನ ಬರುವ ಪತ್ರಿಕೆ | .............................. | ಅ) ವಾರಪತ್ರಿಕೆ |
| ೨) ವಾರಕ್ಕೊಮ್ಮೆ ಬರುವ ಪತ್ರಿಕೆ | .............................. | ಆ) ಪಾಕ್ಷಿಕ |
| ೩) ಹದಿನೈದು ದಿನಕ್ಕೊಮ್ಮೆ ಬರುವ ಪತ್ರಿಕೆ | .............................. | ಇ) ಅರ್ಧವಾರ್ಷಿಕ |
| ೪) ತಿಂಗಳಿಗೊಮ್ಮೆ ಬರುವ ಪತ್ರಿಕೆ | .............................. | ಈ) ದಿನಪತ್ರಿಕೆ |
| ೫) ಮೂರು ತಿಂಗಳಿಗೊಮ್ಮೆ ಬರುವ ಪತ್ರಿಕೆ | .............................. | ಉ) ಮಾಸಿಕ |
| ೬) ಆರು ತಿಂಗಳಿಗೊಮ್ಮೆ ಬರುವ ಪತ್ರಿಕೆ | .............................. | ಊ) ತ್ರೈಮಾಸಿಕ |
| ೭) ವರ್ಷಕ್ಕೊಮ್ಮೆ ಬರುವ ಪತ್ರಿಕೆ | .............................. | ಋ) ವಾರ್ಷಿಕ |



**ವಾರ್ತೆಗಳ ವಾಚನ :**

ಓದಿರಿ.

## ಈ ವರ್ಷದ 'ಮಕ್ಕಳ ಮೇಳ' ಕಾರ್ಯಕ್ರಮ ಕನಕಪುರದಲ್ಲಿ ಜರುಗಿತು

**ಕನಕಪುರ, ನ. ೧೫ :** ಪ್ರತಿವರ್ಷ ತೆಗೆದುಕೊಳ್ಳುವ 'ಮಕ್ಕಳ ಮೇಳ' ಕಾರ್ಯಕ್ರಮ ಈ ವರ್ಷ ಕನಕಪುರದ ನೆಹರು ಸಭಾಗೃಹದಲ್ಲಿ ಜರುಗಿತು.

ಈ ಕಾರ್ಯಕ್ರಮದಲ್ಲಿ ಕನಕಪುರದ ಶಾಲೆಯ ಮಕ್ಕಳು, ಶಿಕ್ಷಕರು, ಪಾಲಕರು, ಊರಿನ ಗಣ್ಯರು ಉಪಸ್ಥಿತರಿದ್ದರು. 'ಮಕ್ಕಳ ಮೇಳ' ಕಾರ್ಯಕ್ರಮದಲ್ಲಿ ಸಾಕಷ್ಟು ಮಕ್ಕಳು ಭಾಗವಹಿಸಿದ್ದರು. ಭಾವಗೀತೆ, ಭಕ್ತಿಗೀತೆ, ಶಿಶುಗೀತೆ, ಸಮೂಹಗೀತೆ, ಸಮೂಹ ನೃತ್ಯ, ಏಕಪಾತ್ರ ಅಭಿನಯ, ಕಥೆ ಹೇಳುವ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಯಿತು. ಪ್ರತಿಯೊಂದು ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮಕ್ಕಳಿಗೆ ಬಹುಮಾನ ಕೊಟ್ಟು ಗೌರವಿಸಲಾಯಿತು. ಉಪಸ್ಥಿತರಿದ್ದವರೆಲ್ಲ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಮಕ್ಕಳನ್ನು ಪ್ರೋತ್ಸಾಹಿಸಿ ಕೊಂಡಾಡಿದರು.



**ಉತ್ತರ ಬರೆ.**

೧. ಈ ವಾರ್ತೆಯು ಯಾವ ವಿಷಯಕ್ಕೆ ಸಂಬಂಧಿಸಿದೆ?

..........................................................................................

೨. ವಾರ್ತೆಯ ಶೀರ್ಷಿಕೆ ಏನು ಇದೆ?

..........................................................................................

೩. ಸ್ಪರ್ಧೆಯಲ್ಲಿ ಎಷ್ಟು ಬಹುಮಾನಗಳನ್ನು ಇಡಲಾಗಿತ್ತು?

..........................................................................................

೪. ಮಕ್ಕಳನ್ನು ಹೇಗೆ ಗೌರವಿಸಿದರು?

..........................................................................................



**ಉಪಕ್ರಮ:**

**ಪ್ರತಿದಿನ ದಿನಪತ್ರಿಕೆಯನ್ನು ತೆಗೆದುಕೊಂಡು ಪರಿಪಾಠದ / ಪ್ರಾರ್ಥನೆಯ ಸಮಯದಲ್ಲಿ ದಿನಪತ್ರಿಕೆಯಲ್ಲಿ ಬಂದಿರುವ ಸುವಿಚಾರ, ದಿನವಿಶೇಷ, ಮುಖ್ಯಾಂಶಗಳನ್ನು ಓದಿ ಹೇಳಿರಿ.**

**ಸೂಚನೆ**

ದಿನಾಂಕ-೨೦.೧೨.೨೦೧೬

**ಜಿಲ್ಲಾ ಪರಿಷದ ಪ್ರಾಥಮಿಕ ಕನ್ನಡ ಶಾಲೆ, ಮ್ಯೆಂದರ್ಗಿ.**

ನಾಳೆ ೧೦ ಗಂಟೆಗೆ ಪಾಲಕರ ಸಭೆ ಇದೆ. ಸರಿಯಾದ ಸಮಯಕ್ಕೆ ಹಾಜರಾಗಿ.

ಮುಖ್ಯ ಗುರುಗಳು



**ಮೇಲಿನ ಸೂಚನಾ ಫಲಕವನ್ನು ಓದಿ ಶಿಕ್ಷಕರ ಸಹಾಯದಿಂದ ವಾರ್ಷಿಕ ಸ್ನೇಹ ಸಮ್ಮೇಳನದ ಮೇಲೆ ಒಂದು ಸೂಚನೆ ತಯಾರಿಸು.**

**ಸೂಚನೆ.**

ದಿನಾಂಕ:



ಕೆಳಗಿನ ಪರಿಚ್ಛೇದವನ್ನು ಓದಿ ಅನುಲೇಖನ ಮಾಡು.

## ದಿನಪತ್ರಿಕೆ

ದಿನಪತ್ರಿಕೆಗಳಿಂದ ಜ್ಞಾನವು ಹೆಚ್ಚಾಗುತ್ತದೆ. ಲೋಕದ ವ್ಯವಹಾರಗಳು ತಿಳಿಯುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ, ನಮಗೆ ದಿನಪತ್ರಿಕೆಗಳ ಮಹತ್ವ ಅರಿವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ದಿನಪತ್ರಿಕೆಗಳನ್ನು ಓದಿ ಬುದ್ಧಿವಂತರಾಗಬೇಕಾಗಿದೆ.

**ಅಕ್ಷರ ಅಳಿದರೂ ಸುದ್ದಿ ಉಳಿಯುವುದು**



# ೧೬. ನನ್ನ ನವಿಲು



ನನ್ನ ನವಿಲೆ ನನ್ನ ನವಿಲೆ ಬಾರೆ ಇಲ್ಲಿಗೆ
ಅಂಕು ಡೊಂಕು ಹೆಜ್ಜೆ ಹಾಕಿ ಹೊರಟೆ ಎಲ್ಲಿಗೆ? ॥ ೧ ॥

ನಿನ್ನ ದನಿಯು ಎಷ್ಟು ಮಧುರ ಏನು ಹೇಳಲಿ!
ನಿನ್ನ ರೂಪ ಎನಿತು ಚೆಂದ ಹೇಗೆ ಹೊಗಳಲಿ! ॥ ೨ ॥

ಹಲವು ಬಗೆಯ ಬಣ್ಣದಿಂದ ನಿನ್ನ ಗರಿಗಳು
ಮುತ್ತು ರತ್ನ ಹವಳದಂತೆ ಹೊಳೆಯುತಿರುವುವು ॥ ೩ ॥





ನಿನ್ನ ಕಣ್ಣ ರೇಖೆ ಚೆನ್ನ ಚಿನ್ನದುಂಗುರ
ತಲೆಯ ಮೇಲೆ ತೆನೆ- ತುರಾಯಿ ಬಹಳ ಸುಂದರ ॥ ೪ ॥

ಮೇಘಮಾಲೆ ತಿರುಗುತಿರಲು ಕೇಕೆ ಹಾಕುವೆ
ಮಣಿದು ಕುಣಿದು ಹರುಷದಿಂದ ಹಾಡ ಹಾಡುವೆ. ॥ ೫॥

ನನ್ನ ನವಿಲೆ ನನ್ನ ನವಿಲೆ ಬಾರೆ ಇಲ್ಲಿಗೆ
ಅಂಕು ಡೊಂಕು ಹೆಜ್ಜೆ ಹಾಕಿ ಹೊರಟೆ ಎಲ್ಲಿಗೆ? ॥ ೬ ॥

- ಅಣ್ಣಾರಾಯ ಸಾಲಿಮನಿ.



**ಶಬ್ದಾರ್ಥ:**

ಹರುಷ - ಸಂತೋಷ; ಮೇಘ-ಮೋಡ;

ಹೊಗಳು - ಬಣ್ಣಿಸು; ಹೊಳೆ-ಮಿಂಚು.



**ಮಾತನಾಡೋಣ ಬನ್ನಿ.**

ಅ) ನಿನ್ನ ನೆಚ್ಚಿನ ಪಕ್ಷಿ ಯಾವುದು? ಏಕೆ?

ಆ) ಎತ್ತರಕ್ಕೆ ಹಾರುವ ಮತ್ತು ಕಡಿಮೆ ಎತ್ತರಕ್ಕೆ ಹಾರುವ ಪಕ್ಷಿಗಳು ಯಾವವು?



**ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.**

೧) ನವಿಲಿನ ತಲೆಯ ಮೇಲೆ ಏನಿದೆ?

........................................................................................................

೨) ನವಿಲಿನ ಕಣ್ಣು ಹೇಗೆ ಹೊಳೆಯುತ್ತಿದೆ?

........................................................................................................

೩) ನವಿಲಿನ ದನಿಯು ಹೇಗಿದೆ?

........................................................................................................

೪) ಮಳೆ ಬರುವಾಗ ನವಿಲು ಏನು ಮಾಡುತ್ತದೆ?

........................................................................................................

೫) ನವಿಲು ಹೇಗೆ ಹೆಜ್ಜೆ ಹಾಕುತ್ತದೆ?

........................................................................................................

೬) ನಮ್ಮ ರಾಷ್ಟ್ರೀಯ ಪಕ್ಷಿ ಯಾವುದು?

........................................................................................................



**ಕೆಳಗೆ ಕೊಟ್ಟ ಶಬ್ದಗಳಲ್ಲಿ ಏಕವಚನ ಮತ್ತು ಬಹುವಚನ ಶಬ್ದಗಳನ್ನು ಗುರುತಿಸಿ ಬರೆ.**

ನವಿಲು, ಗರಿಗಳು, ತೆನೆ, ರೇಖೆಗಳು, ಹೆಜ್ಜೆ, ಉಂಗುರ, ಬಣ್ಣಗಳು, ಕಣ್ಣುಗಳು.

| ಏಕವಚನ | ಬಹುವಚನ |
|---|---|
| ೧) ................................ | ೧) ................................ |
| ೨) ................................ | ೨) ................................ |
| ೩) ................................ | ೩) ................................ |
| ೪) ................................ | ೪) ................................ |



**ಕವಿತೆಯಲ್ಲಿ ಬಂದಿರುವ ಪ್ರಾಸಗಳನ್ನು ಬಳಸಿ ಪದ್ಯ ತಯಾರಿಸು.**

(ಇಲ್ಲಿಗೆ-ಎಲ್ಲಿಗೆ, ಕೊಡುವೆ-ಹೋಗುವೆ, ಆಡುವೆ-ಕುಣಿಯುವೆ, ಹಾಕುವೆ-ಹಾಡುವೆ)

ಉದಾ : ನಾಯಿಮರಿ ನಾಯಿಮರಿ ಹೊರಟೆ ಎಲ್ಲಿಗೆ
ನಾಯಿಮರಿ ನಾಯಿಮರಿ ಬಾರೆ ಇಲ್ಲಿಗೆ



**ನಿನ್ನ ನೆಚ್ಚಿನ ಪಕ್ಷಿಯ ಕುರಿತು ನಾಲ್ಕೈದು ವಾಕ್ಯಗಳಲ್ಲಿ ವರ್ಣನೆ ಬರೆಯಿರಿ.**



**ನವಿಲಿನ ಚಿತ್ರಕ್ಕೆ ಬಣ್ಣ ತುಂಬು.**





**ಹಸಿರು ತೋಟ, ಸುಂದರ ನೋಟ**

# ೧೭. ಮಹಾಬಳೇಶ್ವರ



ಮಹಾಬಳೇಶ್ವರ ಇದು ಮಹಾರಾಷ್ಟ್ರದ ಒಂದು ಪ್ರಸಿದ್ಧ ಪ್ರವಾಸಿ ತಾಣ. ಇದು ಪಶ್ಚಿಮ ಘಟ್ಟದ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿದ್ದು, ಕೃಷ್ಣಾ ನದಿಯ ಉಗಮಸ್ಥಾನವಾಗಿದೆ. ಇದೊಂದು ಪ್ರೇಕ್ಷಣೀಯ ಗಿರಿಧಾಮವಾಗಿದ್ದು, ಪ್ರವಾಸಿಗರ ಸ್ವರ್ಗವೆಂದು ಹೆಸರಾಗಿದೆ. ಈ ಸ್ಥಳವು ಸಾತಾರಾ ಜಿಲ್ಲೆಯಲ್ಲಿದೆ. ಈ ತಂಪುಧಾಮ ವಿಶ್ವದ ಕೆಲವೇ ನಿತ್ಯ ಹರಿದ್ವರ್ಣದ ತಾಣಗಳಲ್ಲಿ ಒಂದಾಗಿದೆ.

ಇಲ್ಲಿ ಗಾಯತ್ರಿ, ಸಾವಿತ್ರಿ, ಕೊಯನಾ, ವೆಣ್ಣಾ ಮತ್ತು ಕೃಷ್ಣಾ ಈ ಐದು ನದಿಗಳು ಉಗಮ ಹೊಂದಿವೆ. ಹೀಗಾಗಿ ಈ ತಾಣಕ್ಕೆ 'ಪಂಚ ನದಿಗಳ ಬೀಡು' ಎನ್ನುವರು. ಪ್ರವಾಸಿಗರಿಗೆ ತಂಗಲು ಇಲ್ಲಿ ಉತ್ತಮ ಹೋಟೆಲ್, ವಸತಿ ಗೃಹಗಳು ಇವೆ.

ಮಹಾಬಳೇಶ್ವರದಲ್ಲಿ ಆರ್ಥರ್ ಸೀಟ್ ಪಾಯಿಂಟ್, ಎಲಿಫೆಂಟಾ ಹೆಡ್ ಪಾಯಿಂಟ್, ಥ್ರೀ ಮಂಕಿ ಪಾಯಿಂಟ್, ವಿಲ್ಸನ್ ಪಾಯಿಂಟ್, ಕೇವ್ಸ್ ಪಾಯಿಂಟ್ ಜನರ ಆಕರ್ಷಣೀಯ ಸ್ಥಳಗಳಾಗಿವೆ. ಅಲ್ಲದೆ ಪ್ರತಾಪಗಡ ಕೋಟೆ, ವೆನ್ನಾ ಸರೋವರ, ಪ್ರತಾಪ್ ಸಿಂಗ್ ಉದ್ಯಾನ, ಲಿಂಗಮೂಲ ಜಲಪಾತ ಮತ್ತು ಸ್ಟ್ರಾಬೆರಿ ಗಾರ್ಡನ್ ಹೀಗೆ ಹಲವಾರು ಪ್ರೇಕ್ಷಣೀಯ ಸ್ಥಳಗಳು ಇವೆ.

ನಾವು ಈಗ ಎಲಿಫೆಂಟಾ ಹೆಡ್ ಪಾಯಿಂಟ್ ಅಥವಾ ನೀಡಲ್ ಹೋಲ್ ಪಾಯಿಂಟ್ ಬಗ್ಗೆ ತಿಳಿಯೋಣ, ಇಲ್ಲಿ ಆನೆಯ ತಲೆ ಮತ್ತು ಸೊಂಡಿಲನ್ನು ಹೋಲುವ ನೈಸರ್ಗಿಕ ಬಂಡೆಯ ರಚನೆಯಾಗಿದೆ. ಇದರ ಮಧ್ಯೆ ಇರುವ ರಂಧ್ರ, ಸೂಜಿಯ ಹಿಂದೆ ದಾರ ಪೋಣಿಸುವ ರಂಧ್ರದ ಹಾಗೆ ಇದೆ. ಆದ್ದರಿಂದ ಇದಕ್ಕೆ ನೀಡಲ್ ಹೋಲ್ ಪಾಯಿಂಟ್ ಎಂದು ಕರೆಯುವರು.





**ತ್ರೀ ಮಂಕಿ ಪಾಯಿಂಟ್:** ಇಲ್ಲಿ ಮಹಾತ್ಮ ಗಾಂಧೀಜಿಯವರ ಮೂರು ತತ್ವಗಳನ್ನು ಪ್ರತಿಪಾದಿಸುವ ಕೋತಿಗಳ ಪ್ರತಿಮೆಯನ್ನು ನೈಸರ್ಗಿಕ ಬಂಡೆಯಲ್ಲಿ ಕಾಣಬಹುದು.

**ವಿಲ್ಸನ್ ಪಾಯಿಂಟ್:** ಇಲ್ಲಿಂದ ಸೂರ್ಯೋದಯದ ಸುಂದರ ನೋಟ ಕಾಣಬಹುದು. ಅದೇ ರೀತಿ ಬಾಲಕವಾಡಿ ಹಾಗೂ ದೂಮ್ ಜಲಪಾತಗಳನ್ನು ನೋಡಬಹುದು.

**ಪ್ರತಾಪಗಡ ಕೋಟೆ:** ಈ ಕೋಟೆಯನ್ನು ಛತ್ರಪತಿ ಶಿವಾಜಿ ಮಹಾರಾಜರು ಕಟ್ಟಿಸಿದ್ದಾರೆ. ದಾರಿಯಲ್ಲಿ ಭವಾನಿ ಮಂದಿರವಿದೆ. ಕೋಟೆಯ ಮೇಲೆ ಶಿವಾಜಿ ಮಹಾರಾಜರ ಹದಿನೇಳು ಅಡಿ ಎತ್ತರದ ಕುದುರೆ ಸವಾರಿ ಮಾಡುತ್ತಿರುವ ಕಂಚಿನ ಪ್ರತಿಮೆ ಇದೆ.



**ವೆಣ್ಣಾ ಸರೋವರ:** ಇದು ಎಲ್ಲರಿಗೂ ಇಷ್ಟವಾದ ತಾಣವೆಂದು ಪ್ರಸಿದ್ಧವಾಗಿದೆ. ಸರೋವರದ ಸುತ್ತಲೂ ದಟ್ಟವಾದ ಮರಗಳಿವೆ. ಸಂಜೆಯ ವೇಳೆಗೆ ಬೋಟಿಂಗ್ ವ್ಯವಸ್ಥೆಯಿದೆ. ಬೋಟಿಂಗ ಮಾಡುತ್ತಾ ಸೂರ್ಯಾಸ್ತವನ್ನು ನೋಡಲು ಹಾಗೂ ಫೋಟೋಗಳನ್ನು ತೆಗೆಯಲು ಬಹಳ ಸುಂದರವಾದ ಸ್ಥಳವಾಗಿದೆ.

**ಪ್ರತಾಪ್ ಸಿಂಗ್ ಉದ್ಯಾನ:** ಸುಂದರ ಹೂ ಗಿಡಗಳಿಂದ ಕೂಡಿದ ಈ ಉದ್ಯಾನವನ ಪ್ರಶಾಂತತೆಗೆ, ಭವ್ಯತೆಗೆ ಹೆಸರುವಾಸಿಯಾಗಿದೆ. ಇಲ್ಲಿ ಮಕ್ಕಳಿಗೆ ಆಡಲು ವಿಶಾಲವಾದ ಸ್ಥಳವಿದೆ. ಇಲ್ಲಿ ಹಲವು ಬಗೆಯ ಹಲ್ವಾ, ಸ್ಟ್ರಾಬೆರಿ ಹಣ್ಣುಗಳು, ಬಿದರಿನ ವಸ್ತುಗಳು, ವಿಧವಿಧವಾದ ರುಚಿಯ ಚಿಕ್ಕಿಗಳು ದೊರೆಯುತ್ತವೆ.



ಮಹಾಬಳೇಶ್ವರದಂತಹ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟಾಗ ಮನಸ್ಸಿಗೆ ತುಂಬಾ ಆನಂದವೆನಿಸುವುದು. ಜೀವನದಲ್ಲಿ ಒಮ್ಮೆಯಾದರೂ ಇಂತಹ ಅಪೂರ್ವವಾದ ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿಕೊಟ್ಟು, ನಿಸರ್ಗದ ಅನುಭವಗಳನ್ನು ಅನುಭವಿಸಿರಿ.



**ಶಬ್ದಗಳ ಅರ್ಥ :**

ಘಟ್ಟ – ಪರ್ವತ; ನಿತ್ಯ ಹರಿದ್ವರ್ಣ – ಸದಾ ಹಸಿರಾದ; ವೀಕ್ಷಿಸು – ನೋಡು; ಗಿರಿಧಾಮ – ಪರ್ವತ ಪ್ರದೇಶ; ರಂಧ್ರ – ಛಿದ್ರ, ತೂತು; ವಿಶ್ವ – ಜಗತ್ತು; ಉಗಮ – ಹುಟ್ಟು; ಪ್ರೇಕ್ಷಣೀಯ ಸ್ಥಳ – ಪ್ರವಾಸಿ ತಾಣ; ಪ್ರತಿಮೆ – ಮೂರ್ತಿ.



**ಮಾತನಾಡೋಣ ಬನ್ನಿ.**

೧) ನೀವು ಪ್ರವಾಸಕ್ಕೆ ಎಲ್ಲಿಗೆ ಹೋಗಿದ್ದೀರಿ?

೨) ನೀನು ಪ್ರವಾಸಕ್ಕೆ ಹೋಗಿ ಬಂದ ಅನುಭವವನ್ನು ಹೇಳು.

೩) ನಿಮ್ಮೂರಿನ ಸುತ್ತಮುತ್ತಲು ಇರುವ ಪ್ರವಾಸಿ ತಾಣಗಳ ಕುರಿತು ವಿವರಿಸು.



**ಯೋಗ್ಯ ಪರ್ಯಾಯಕ್ಕೆ ವೃತ್ತ ◯ ಹಾಕು.**

ಅ) ಮಹಾಬಳೇಶ್ವರ ಯಾವ ಪರ್ವತ ಶ್ರೇಣಿಯಲ್ಲಿಯ ಗಿರಿಧಾಮವಾಗಿದೆ?

೧) ಸಹ್ಯಾದ್ರಿ  ೨) ಹಿಮಾಲಯ  ೩) ಮಹಾದೇವ  ೪) ನೀಲಗಿರಿ

ಬ) ಮಹಾಬಳೇಶ್ವರದಲ್ಲಿ ಯಾವ ಯಾವ ನದಿಗಳು ಉಗಮ ಹೊಂದಿವೆ?

೧) ಗಾಯತ್ರಿ, ಸಾವಿತ್ರಿ, ಕೊಯನಾ, ಭೀಮಾ, ಕೃಷ್ಣಾ.

೨) ಸಾವಿತ್ರಿ, ಕೊಯನಾ, ವೆಣ್ಣಾ, ಕೃಷ್ಣಾ, ಗಾಯತ್ರಿ.

೩) ಗಾಯತ್ರಿ, ಸಾವಿತ್ರಿ, ವೆಣ್ಣಾ, ಕೊಯನಾ, ಕಾವೇರಿ.

೪) ಕೊಯನಾ, ಕೃಷ್ಣಾ, ಹೇಮಾವತಿ, ಕಾವೇರಿ.



**ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆ.**

೧) ಮಹಾಬಳೇಶ್ವರದಲ್ಲಿ ಯಾವ ಯಾವ ಪ್ರೇಕ್ಷಣೀಯ ಸ್ಥಳಗಳು ಇವೆ?

೨) ಮಹಾಬಳೇಶ್ವರಕ್ಕೆ 'ಪಂಚ ನದಿಗಳ ಬೀಡು' ಎಂದು ಏಕೆ ಕರೆಯಲಾಗುತ್ತದೆ?

೩) ಮಹಾಬಳೇಶ್ವರದಲ್ಲಿ ನೀನು ಇಷ್ಟಪಡುವ ಪ್ರೇಕ್ಷಣೀಯ ಸ್ಥಳದ ಕುರಿತು ವಿವರಿಸು.



**ಕೆಳಗೆ ಕೊಟ್ಟ ವಾಕ್ಯವನ್ನು ಓದಿ ಸಂಬಂಧಿಸಿದ ಪ್ರೇಕ್ಷಣೀಯ ಸ್ಥಳದ ಹೆಸರು ಬರೆ.**

೧) ಆನೆಯ ಸೊಂಡಿಲನ್ನು ಹೋಲುವ ನೈಸರ್ಗಿಕ ಬಂಡೆ ..................................

೨) ಸೂರ್ಯೋದಯ ನೋಡುವ ಸ್ಥಳ ..................................

೩) ಸೂರ್ಯಾಸ್ತ ನೋಡುವ ಸ್ಥಳ ..................................

೪) ಶಿವಾಜಿ ಮಹಾರಾಜರ ೧೭ ಅಡಿ ಎತ್ತರದ ಪ್ರತಿಮೆ ..................................



**ಪಾಠದಲ್ಲಿ ಬಂದಿರುವ ಸ್ಥಳಗಳನ್ನು ಹೊರತುಪಡಿಸಿ ಮಹಾರಾಷ್ಟ್ರದಲ್ಲಿಯ ಇತರ ಪ್ರೇಕ್ಷಣೀಯ ಸ್ಥಳಗಳ ಪಟ್ಟಿ ಮಾಡಿರಿ.**

- **ಹೇಳು ನಾನಾರು?**



★ ಕಣ್ಣಿಗೆ ಕಾಣದು
ಕೈಗೆ ಸಿಗದು
ಅದಿಲ್ಲದೆ ನಡೆಯದು

★ ಬಾಯಿ ಇಲ್ಲದೆ ಮಾತನಾಡಬಲ್ಲೆ
ಹನಿ ರಕ್ತವೆಲ್ಲಿದೆ? ಹೇಳು ನನ್ನಲ್ಲಿ
ಹಲವು ಭಾಷೆಗಳು ನನ್ನೆದೆಯಲ್ಲಿ
ವಿಶ್ವದ ಸಂಗತಿ ಹೇಳುವೆ ನಾನು
ಹಾಗಾದರೆ ಹೇಳಿರಿ ಜಾಣರೆ ನಾನಾರು?

(ಗಾಳಿ, ಮೊಬಾಯಿಲ್)



**ಹೂವುಗಳಲ್ಲಿ ಕೊಟ್ಟ ಶಬ್ದಗಳಿಗೆ ಯೋಗ್ಯ ಉಪಸರ್ಗ ಜೋಡಿಸಿ ಅರ್ಥಪೂರ್ಣ ಶಬ್ದಗಳನ್ನು ತಯಾರಿಸು.**




ಸು

ಪ್ರ

ಅ

ವಿ

ಉದಾ: ಸುಜ್ಞಾನ

______________________

______________________

______________________

______________________

______________________

______________________

______________________

______________________

**ದೇಶ ಸುತ್ತಿ ನೋಡು, ಕೋಶ ಓದಿ ನೋಡು**



# ೧೮. ಪರಿಸರ ಗೀತೆ





ಗಿಡ ಮರ ಹಚ್ಚೋಣ
ನಾವು ಗಿಡ ಮರ ಬೆಳೆಸೋಣ
ಅಂದದ ಚಂದದ ಸುಂದರ ಹಸಿರಿನ
ಗಿಡ ಮರ ಹಚ್ಚೋಣ ||ನಾವು||

ಊರಿನ ಪರಿಸರ ರಸ್ತೆಯ ಎಡಬಲ
ಗಿಡಮರ ಬೆಳೆಸೋಣ
ನೆಟ್ಟಿದ ಗಿಡಗಳ ನೆಟ್ಟಗೆ ನಾವು
ರಕ್ಷಣೆ ಮಾಡೋಣ ||ನಾವು||



ಬೆಳೆದ ಗಿಡಗಳು ತಂಪನು ನೀಡುತ
ನೆರಳನು ನೀಡುವವು
ರುಚಿರುಚಿಯಾದ ಹಣ್ಣನು ಕೊಟ್ಟು
ಶಕ್ತಿಯ ನೀಡುವವು ||ನಾವು||

ಓಡುವ ಮೋಡಕೆ ತಂಪನು ನೀಡಿ
ಮಳೆಯನು ಸುರಿಸುವವು
ಹಸಿರನು ಹೆಚ್ಚಿಸಿ ಸುತ್ತಲ ಪರಿಸರ
ಕಣ್ಮನ ಸೆಳೆಯುವವು ||ನಾವು||



ಹಸಿರು ಇದ್ದರೆ ಉಸಿರು ಉಳಿವುದು
ಅದು ಗಿಡಗಳ ತಾಕತ್ತು
ಜೀವ ರಾಶಿಗಳ ಆರೋಗ್ಯದನಿಧಿ
ತಿಳಿಯೋಣ ಯಾವತ್ತು ||ನಾವು||

– ಹೂವಾನಂದ ಸಲಗರ



**ಶಬ್ದಗಳ ಅರ್ಥ :**

ನಿಧಿ – ಸಂಪತ್ತು; ತಾಕತ್ತು – ಶಕ್ತಿ; ನೆಟ್ಟಗೆ – ಸರಿಯಾಗಿ; ಜೀವರಾಶಿ – ಸಜೀವಿಗಳು.



**ಮಾತನಾಡೋಣ ಬನ್ನಿ.**

೧) ಗಿಡಗಳು ನಮಗೆ ಹೇಗೆ ಉಪಕಾರಿಯಾಗಿವೆ? ಎಂಬುದನ್ನು ಹೇಳು.

೨) ನೀವು ನಿಮ್ಮ ಶಾಲೆಯ ಪರಿಸರದಲ್ಲಿ ಯಾವ ಯಾವ ಗಿಡಗಳನ್ನು ನೆಟ್ಟಿದ್ದೀರಿ?



**ಒಂದೇ ವಾಕ್ಯದಲ್ಲಿ ಉತ್ತರಿಸು.**

೧) ನಾವು ಗಿಡಮರಗಳನ್ನು ಎಲ್ಲೆಲ್ಲಿ ಹಚ್ಚೋಣ?

..............................................................................................

೨) ಏನು ಇದ್ದರೆ ಉಸಿರು ಉಳಿವುದು?

..............................................................................................



**ಕೊಟ್ಟ ಸುವಿಚಾರಗಳ ಅನುಲೇಖನ ಮಾಡಿರಿ.**

೧) ಬೀಜದಂತೆ ಬೆಳೆ, ಯೋಜನೆಯಂತೆ ಯಶಸ್ಸು.

..............................................................................................

೨) ಸತತ ಪರಿಶ್ರಮವೇ ಸಾಧನೆಗೆ ಹೆದ್ದಾರಿ.

..............................................................................................

೩) ಮಾತೃಭಾಷೆ ನಮ್ಮ ಸಂಸ್ಕೃತಿಯ ಗುರುತು.

..............................................................................................



**ವೃಕ್ಷಸಂವರ್ಧನೆಯ ಕುರಿತು ನಾಲ್ಕೈದು ಸುವಿಚಾರಗಳನ್ನು ಸಂಗ್ರಹಿಸಿ ನಿಮ್ಮ ಲೇಖನ ಪುಸ್ತಕದಲ್ಲಿ ಬರೆಯಿರಿ.**

**ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಬಳಸಿ ಚಿಕ್ಕ ಪದ್ಯ ತಯಾರಿಸು.**

**ಉದಾ.:** ಬೆಳೆಸೋಣ – ಹಚ್ಚೋಣ .....

.......................................................

.......................................................

.......................................................

.......................................................



**ಪರಿಸರವನ್ನು ಸ್ವಚ್ಛ ಹಾಗೂ ಸುಂದರವಾಗಿಡಲು ನೀವು ಯಾವ ಯಾವ ಉಪಾಯಗಳನ್ನು ಮಾಡುವಿರಿ?**

**ಮರವಿದ್ದರೆ ಮನುಷ್ಯ; ಕಾಡಿದ್ದರೆ ನಾಡು**



# ೧೯. ಸಾರ್ವಜನಿಕ ಗ್ರಂಥಾಲಯ



**ಗುರುಗಳು** : ಮಕ್ಕಳೇ, ನಾಳೆ ನಾವೆಲ್ಲ ನಮ್ಮೂರಿನ ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿ ಕೊಡೋಣ. ನೀವೆಲ್ಲ ನಿಮ್ಮ ಪಾಲಕರ ಅನುಮತಿಯನ್ನು ತೆಗೆದುಕೊಂಡು ಬನ್ನಿರಿ.

(ಮಕ್ಕಳೆಲ್ಲ ಸಂತೋಷದಿಂದ ಒಪ್ಪಿಕೊಂಡು ಮನೆಗೆ ಹೋದರು ಮರುದಿನ ಅವರೆಲ್ಲ ಗ್ರಂಥಾಲಯಕ್ಕೆ ಹೋಗಲು ಉತ್ಸಾಹದಿಂದ ಬಂದರು.)

**ಗುರುಗಳು** : ಮಕ್ಕಳೇ, ಪ್ರಾರ್ಥನೆಯ ನಂತರ ನಾವೆಲ್ಲ ಗ್ರಂಥಾಲಯಕ್ಕೆ ಹೋಗೋಣ.



**ಮಕ್ಕಳು** : ಸರಿ ಗುರುಗಳೇ.

**ಗುರುಗಳು** : ಎಲ್ಲರೂ ಸಾಲಾಗಿ ನನ್ನೊಂದಿಗೆ ನಡೆಯಿರಿ.

(ಎಲ್ಲರೂ ಗ್ರಂಥಾಲಯ ತಲುಪಿದರು)

**ಗ್ರಂಥಪಾಲಕ** : ನಮಸ್ಕಾರ ಗುರುಗಳೇ, ಬನ್ನಿರಿ ಮಕ್ಕಳೇ ನಿಮಗೆಲ್ಲಾ ನಮ್ಮ ಗ್ರಂಥಾಲಯಕ್ಕೆ ಸ್ವಾಗತ.

**ಗುರುಗಳು** : ನಮಸ್ಕಾರ, ನಾನು ನಮ್ಮ ಮಕ್ಕಳನ್ನು ಕರೆ ತಂದಿರುವೆ. ನೀವು ಮಕ್ಕಳಿಗೆ ಗ್ರಂಥಾಲಯದ ಮಾಹಿತಿಯನ್ನು ನೀಡಿರಿ.

**ಗ್ರಂಥಪಾಲಕ** : ಆಗಲಿ ಗುರುಗಳೇ, ಮಕ್ಕಳೇ ನೀವೆಲ್ಲ ಮೊದಲು ಗ್ರಂಥಾಲಯವನ್ನು ಸುತ್ತುಹಾಕಿ ನೋಡಿರಿ, ನಂತರ ನಾನು ನಿಮಗೆ ಎಲ್ಲವನ್ನು ವಿವರಿಸುವೆ.

(ಮಕ್ಕಳೆಲ್ಲ ವಿಸ್ಮಯದಿಂದ ಅಲ್ಲಿನ ಪುಸ್ತಕಗಳಿಂದ ತುಂಬಿದ ಕಪಾಟುಗಳನ್ನು, ಚಿಕ್ಕ-ದೊಡ್ಡ ಪುಸ್ತಕಗಳನ್ನೆಲ್ಲ ನೋಡಿದರು. ಮರಳಿ ಗ್ರಂಥ ಪಾಲಕನ ಬಳಿಗೆ ಬಂದರು.)

**ಅರುಣ** : ಸರ್, ಈ ಗ್ರಂಥಾಲಯದಲ್ಲಿ ಎಷ್ಟು ಪುಸ್ತಕಗಳಿವೆ?

**ಗ್ರಂಥಪಾಲಕ** : ಸುಮಾರು ಐದುಸಾವಿರ ಪುಸ್ತಕಗಳಿವೆ.

**ಸುಮಾ** : ಅಬ್ಬಾ! ಅಷ್ಟೊಂದು ಪುಸ್ತಕಗಳು! ಯಾವ ಯಾವ ತರಹದ ಪುಸ್ತಕಗಳಿವೆ?

**ಗ್ರಂಥಪಾಲಕ** : ಇಲ್ಲಿ ಭಾಷೆ, ಇತಿಹಾಸ, ವಿಜ್ಞಾನ, ಕಥೆಗಳು, ಕಾದಂಬರಿ, ಕವನ, ಮಹಾಕಾವ್ಯ, ಶಬ್ದಕೋಶ, ಪಾಕಕಲೆ, ಸಂಶೋಧನೆ ಹೀಗೆ ಅನೇಕ ಪ್ರಕಾರದ ಪುಸ್ತಕಗಳಿವೆ. ಮಕ್ಕಳಿಗಾಗಿಯೇ ವಿಶೇಷವಾದ ವಿಭಾಗವಿದೆ. ಅಲ್ಲಿ ಮಕ್ಕಳ ಅಭಿರುಚಿಗೆ ತಕ್ಕ ಪುಸ್ತಕಗಳಿವೆ.

**ಸಮೀರ್** : ನಾವು ಈ ಪುಸ್ತಕಗಳನ್ನು ಓದಬೇಕೆಂದರೆ ಏನು ಮಾಡಬೇಕು?

**ಗ್ರಂಥಪಾಲಕ** : ನೀವು ಈ ಗ್ರಂಥಾಲಯದ ಸದಸ್ಯರಾಗಬೇಕು.

**ಪೀಟರ್** : ಅದು ಹೇಗೆ?

**ಗ್ರಂಥಪಾಲಕ** : ಒಂದು ವರ್ಷಕ್ಕೆ ಸದಸ್ಯರಾಗಲು ಎರಡು ನೂರು ರೂಪಾಯಿಗಳನ್ನು ತುಂಬಿ ಒಂದು ಫಾರ್ಮ್ ತುಂಬಿಕೊಟ್ಟರೆ ನಾವು ನಿಮಗೆ ಒಂದು ಕಾರ್ಡ್ ಕೊಡುತ್ತೇವೆ. ಅದರ ಮೂಲಕ ನೀವು ಪುಸ್ತಕಗಳನ್ನು ಓದಬಹುದು.

**ಸಾಕ್ಷಿ** : ಒಂದು ಸಲಕ್ಕೆ ನಾವು ಎಷ್ಟು ಪುಸ್ತಕ ತೆಗೆದುಕೊಳ್ಳಬಹುದು? ಎಷ್ಟು ದಿನ ಓದಬಹುದು? ಅದನ್ನು ಹಿಂದಿರುಗಿಸಿ ಕೊಡುವುದು ಹೇಗೆ?

**ಗ್ರಂಥಪಾಲಕ** : ಸರಿಯಾದ ಪ್ರಶ್ನೆ. ಮಕ್ಕಳೇ, ಒಂದು ಸಲಕ್ಕೆ ಒಂದು ಪುಸ್ತಕ ನೀವು ಓದಬಹುದು. ಅದರ ಸಮಯ ಒಂದು ವಾರ, ನೀವು ನಿಮಗೆ ಬೇಕಾದ ಪುಸ್ತಕವನ್ನು ಆರಿಸಿಕೊಂಡು ಬರಬೇಕು ಆ ಪುಸ್ತಕದ ಒಳಗೆ ಒಂದು ಕಾರ್ಡ್ ಇರುತ್ತದೆ. ಅದನ್ನು ನಿಮ್ಮ ಸದಸ್ಯತ್ವದ ಕಾರ್ಡಿನೊಂದಿಗೆ ಜೋಡಿಸಿ ಇಡುತ್ತೇವೆ. ನೀವು ಪುಸ್ತಕ ಮರಳಿಸಿದಾಗ ನಿಮ್ಮ ಕಾರ್ಡ್ ನಿಮಗೆ ಕೊಟ್ಟುಬಿಡುತ್ತೇವೆ.

**ಸಾಯಿರಾ** : ಅಬ್ಬಾ! ಇಷ್ಟೆಲ್ಲ ಇದೆಯೇ?

**ಅರುಣ** : ಗುರುಗಳೇ, ನಾವು ಕೂಡ ಗ್ರಂಥಾಲಯದ ಸದಸ್ಯರಾಗಬಹುದೇ?

**ಗುರುಗಳು** : ಖಂಡಿತ ಆಗಬಹುದು ಆಗ ನಿಮಗೆ ಅನೇಕ ಪ್ರಕಾರದ ಪುಸ್ತಕಗಳು ಓದಲು ಸಿಗುತ್ತವೆ?

**ಪೀಟರ್** : ಗುರುಗಳೇ ನಾವು ನಾಳೆಯೇ ನಮ್ಮ ಪಾಲಕರೊಂದಿಗೆ ಬಂದು ಹಣ ತುಂಬಿ ಸದಸ್ಯರಾಗುತ್ತೇವೆ.

**ಸಾಯಿರಾ** : ಹೌದು, ನಾವೆಲ್ಲರೂ ಸದಸ್ಯರಾಗುತ್ತೇವೆ ಪುಸ್ತಕಗಳನ್ನು ಓದಿ ಜಾಣರಾಗುತ್ತೇವೆ.

**ಗುರುಗಳು** : ಸರಿ ಮಕ್ಕಳೇ, ಹಾಗೆಯೇ ಮಾಡಿರಿ. ಈಗ ಗ್ರಂಥಪಾಲಕರಿಗೆ ಧನ್ಯವಾದಗಳನ್ನು ಹೇಳಿ ನಾವೆಲ್ಲ ಮರಳಿ ಶಾಲೆಗೆ ಹೋಗೋಣ.

(ಅವರೆಲ್ಲ ಗ್ರಂಥ ಪಾಲಕರಿಗೆ ಧನ್ಯವಾದಗಳನ್ನು ಹೇಳಿ ಶಾಲೆಯ ಕಡೆಗೆ ಹೊರಟರು)





**ಶಬ್ದಾರ್ಥ:**

ಗ್ರಂಥಾಲಯ-ವಾಚನಾಲಯ; ವಿಸ್ಮಯ-ಆಶ್ಚರ್ಯ; ಪಾಕಕಲೆ-ಅಡುಗೆಯ ಕಲೆ.



**ಮಾತನಾಡೋಣ ಬನ್ನಿರಿ.**

೧) ನಿಮಗೆ ಪುಸ್ತಕ ಓದಲು ಇಷ್ಟವೇ?

೨) ನೀನು ಓದಿದ ಪುಸ್ತಕದ ಹೆಸರೇನು?

೩) ನಿಮ್ಮ ಮನೆಯಲ್ಲಿ ಯಾವ ಯಾವ ಪುಸ್ತಕಗಳಿವೆ?

೪) ನಿಮ್ಮ ಮನೆಯಲ್ಲಿ ಗ್ರಂಥಾಲಯಕ್ಕೆ ಹೋಗಿ ಪುಸ್ತಕ ತರುತ್ತಾರೆಯೇ?



**ವಿಚಾರ ಮಾಡಿ ಬರೆ.**

೧) ಗುರುಗಳು ಮಕ್ಕಳನ್ನು ಎಲ್ಲಿಗೆ ಕರೆದುಕೊಂಡು ಹೋದರು?

..............................................................................................

೨) ಸಾರ್ವಜನಿಕ ಗ್ರಂಥಾಲಯದಲ್ಲಿ ಎಷ್ಟು ಪುಸ್ತಕಗಳಿದ್ದವು?

..............................................................................................

೩) ಗ್ರಂಥಾಲಯದಲ್ಲಿನ ಪುಸ್ತಕ ಓದಬೇಕಾದರೆ ನಾವು ಏನು ಮಾಡಬೇಕು?

..............................................................................................

೪) ಗ್ರಂಥಾಲಯದ ಪುಸ್ತಕಗಳ ಕೊಡು ಕೊಳ್ಳುವಿಕೆಯನ್ನು ಹೇಗೆ ಮಾಡುವರು? ವಿವರಿಸಿರಿ.

..............................................................................................



**ನಿನಗೆ ಇಷ್ಟವಾದ ಪುಸ್ತಕವನ್ನು ಓದು ಮತ್ತು ಕೆಳಗಿನ ಅಂಶಗಳ ಆಧಾರದ ಮೇಲೆ ಪುಸ್ತಕದ ಬಗ್ಗೆ ಮಾಹಿತಿಯನ್ನು ಬರೆ.**

ಪುಸ್ತಕದ ಹೆಸರು : ..................................................

ಲೇಖಕರ ಹೆಸರು : ..................................................

ಪುಸ್ತಕದ ವಿಷಯ : ..................................................

..................................................................

..................................................................

..................................................................



ಕೆಳಗೆ ಕೊಟ್ಟ ಪುಸ್ತಕದ ಮುಖಪುಟ ಹಾಗೂ ಬೆನ್ನುಪುಟಗಳ ನಿರೀಕ್ಷಣೆ ಮಾಡಿ ಅದನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.









**ಉಪಕ್ರಮ :** ನಿಮ್ಮ ಪರಿಸರದಲ್ಲಿರುವ ಯಾವುದಾದರೂ ಒಂದು ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿ ಕೊಟ್ಟು ಅಲ್ಲಿನ ನಿಯಮಗಳನ್ನು ತಿಳಿದುಕೊಂಡು ಬರೆಯಿರಿ.



ನಿಮ್ಮ ಶಾಲೆಯ ಪುಸ್ತಕ ಪೆಟ್ಟಿಗೆ ಹಾಗೂ ಗ್ರಂಥಾಲಯಗಳಲ್ಲಿ ಇರುವಂತಹ ನಿನ್ನ ನೆಚ್ಚಿನ ಪುಸ್ತಕಗಳ ಪಟ್ಟಿ ತಯಾರಿಸು.

.........................................................................................

.........................................................................................

.........................................................................................

.........................................................................................

.........................................................................................

.........................................................................................

**ಗ್ರಂಥಾಲಯ, ಜ್ಞಾನದ ಹೆಬ್ಬಾಗಿಲು**

# ೨೦. ನೀರು

ಜಲಜನಕ ಆಮ್ಲಜನಕ
ಸೇರಿ ನೀರು ಆಗಿದೆ
ಭೂಮಿ ಮೇಲೆ ಮೂರು ಭಾಗ
ನೀರು ಹರಡಿಕೊಂಡಿದೆ ॥೧॥

ಬಣ್ಣ ರುಚಿಯು ಎನಿತು ಇಲ್ಲ
ಶುದ್ಧವಾದ ನೀರಿಗೆ
ನಿತ್ಯ ಬೇಕು ಬದುಕಿಗಾಗಿ
ಪಕ್ಷಿ ಪ್ರಾಣಿ ಜನರಿಗೆ ॥೨॥

ಶಾಖದಿಂದ ನೀರು ಕಾದು
ಆವಿಯಾಗಿ ಬಿಡುವುದು
ಮೋಡವಾಗಿ ಬಾನಿನಲ್ಲೆ
ಮತ್ತೆ ತೇಲಿ ಬರುವುದು ॥೩॥

ತಂಪು ತಗಲಿದೊಡನೆ ಮೋಡ
ಮಳೆಯ ರೂಪ ಪಡೆವುದು
ಹಳ್ಳಕೊಳ್ಳ ತುಂಬಿ ತುಳುಕಿ
ಧರೆಗೆ ಮೆರಗು ತರುವುದು ॥೪॥

ನೀರಿನಿಂದ ದವಸ- ಧಾನ್ಯ
ನಿತ್ಯ ನಮಗೆ ದೊರೆಯುವುದು
ಸಸ್ಯ ರಾಶಿ ಜೀವ ರಾಶಿ
ನೀರು ಇರದೆ ಬದುಕದು ॥೫॥

– ಚಂದ್ರಶೇಖರ ಹಿರೇಮಠ





**ಶಬ್ದಗಳ ಅರ್ಥ:**

ನೀರು – ಜಲ; ಧರೆ – ಭೂಮಿ; ಆವಿ – ಉಗಿ

ಮೆರಗು – ಹೊಳಪು; ಬಾನು – ಆಕಾಶ



**ಮಾತನಾಡೋಣ ಬನ್ನಿ**

೧) ನಮಗೆ ನೀರು ಎಲ್ಲಿಂದ ದೊರೆಯುತ್ತದೆ?

೨) ನೀರಿನ ಉಪಯೋಗಗಳನ್ನು ಹೇಳು.

೩) ಶುದ್ಧವಾದ ನೀರನ್ನು ಪಡೆಯಲು ಏನು ಮಾಡಬಹುದು?



**ಯೋಗ್ಯ ಪರ್ಯಾಯವನ್ನು ತುಂಬಿ ವಾಕ್ಯ ಪೂರ್ಣಗೊಳಿಸು.**

೧) ಭೂಮಿಯ ಮೇಲೆ .............. ಭಾಗ ನೀರು ಹರಡಿದೆ. (ಒಂದು, ಮೂರು, ನಾಲ್ಕು)

೨) ಶಾಖದಿಂದ ನೀರು .............. ಆವಿಯಾಗುವುದು. ( ತುಂಬಿ, ಕಾದು, ಹರಡಿ )

೩) ತಂಪು ತಗಲಿದೊಡನೆ .............. ಮಳೆಯ ರೂಪ ಪಡೆಯುವುದು. (ಆಕಾಶ, ಮೋಡ, ಗಾಳಿ)

೪) ಸಸ್ಯ ರಾಶಿ ಜೀವರಾಶಿ .............. ಇರದೆ ಬದುಕದು. (ನೀರು, ಹಾಲು, ಹಿಮು)



**ಉದಾಹರಣೆಯಲ್ಲಿ ತೋರಿಸಿದಂತೆ ಕ್ರಿಯಾಪದಗಳನ್ನು ಕವಿತೆಯಿಂದ ಆರಿಸಿ ಬರೆ.**

ಉದಾ:– ಬಿಡುವುದು.

೧) ................................ ೨) ................................

೩) ................................ ೪) ................................

೫) ................................ ೬) ................................



**ನೀರಿನ ಮಹತ್ವದ ಬಗ್ಗೆ ಬರೆ.**

..............................................................................................

..............................................................................................

..............................................................................................

..............................................................................................

..............................................................................................

..............................................................................................

..............................................................................................

‘ಜಲಜನಕ’ ಈ ಶಬ್ದದಿಂದ ಹೊಸ ಶಬ್ದಗಳನ್ನು ರಚಿಸು.

೧) .................... ೨) .................... ೩) .................... ೪) ....................

## ನಾಲಿಗೆ ನುಲಿ

ಕೆಳಗಿನ ವಾಕ್ಯಗಳನ್ನು ಸರಸರನೇ ಹೇಳು

೧) ಕಾಕು ಕಾಕಾನ ಕರವಸ್ತ್ರ.

೨) ಸರಳ ಸರಸರನೆ ಸೇರಿದಳು.

೩) ಮರದ ಮೇಲೆ ಮಂಗ ಮಲಗುವ ಮೊದಲು.

೪) ತಾರಾ ತಕ್ಕಡಿಯಲ್ಲಿ ತರತರದ ತರಕಾರಿ ತೂಗು.

ಕವಿತೆಯ ಸಾಲುಗಳನ್ನು ಪೂರ್ಣ ಮಾಡಿರಿ.

ತಂಪು ತಗಲಿದೊಡನೆ ಮೋಡ
..........................................
..........................................
.......................................... ಮೆರಗು ತರುವುದು.

ನೀರಿನಿಂದ ದವಸಧಾನ್ಯ
..........................................
..........................................
.......................................... ಇರದೆ ಬದುಕದು.

ಕೆಳಗಿನ ಜಲಚಕ್ರದ ಚಿತ್ರಕ್ಕೆ ಬಣ್ಣ ತುಂಬಿ, ಹೆಸರಿಸು.



ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ರಾಶಿ

# ೨೧. ತೊಗಲು ಗೊಂಬೆಯಾಟ

ತೊಗಲು ಗೊಂಬೆ ಒಂದು ಜನಪದ ಕಲೆ. ಇದು ಚರ್ಮದಿಂದ ಮಾಡಿದ ಗೊಂಬೆಗಳನ್ನು ಬೆಳಕಿನ ಮುಂದೆ ತೋರಿಸಿ ಕಥೆ ಹೇಳುವ ಕಲೆ. ಈ ಕಲೆ ವಿಶೇಷವಾಗಿ ಕರ್ನಾಟಕದ ಭಾಗವಾದ ಬಾಗಲಕೋಟೆ, ಚಿತ್ರದುರ್ಗ, ಧಾರವಾಡ ಮುಂತಾದ ಕಡೆಗಳಲ್ಲಿ ಪ್ರಸಿದ್ಧವಾಗಿದೆ.

ಹಲವಾರು ವರ್ಷಗಳ ಹಿಂದೆ ವಿದ್ಯುತ್ ಇರಲಿಲ್ಲ. ಅದಕ್ಕಾಗಿ ಜನರು ಬೆಳಕಿನ ಪರದೆ ಹಿಂದೆ ಗೊಂಬೆಗಳನ್ನು ತೋರಿಸುತ್ತಿದ್ದರು. ಗೊಂಬೆಗಳನ್ನು ಚರ್ಮದಿಂದ ಮಾಡುತ್ತಾರೆ. ಗೊಂಬೆಗಳ



ಹಿಂದೆ ಬೆಳಕು ಇಟ್ಟು, ಮುಂಭಾಗದಲ್ಲಿ ಬಿಳಿ ಪರದೆ ಇಡುತ್ತಾರೆ. ಗೊಂಬೆಗಳನ್ನು ಕಂಬಿಗಳ ಮೂಲಕ ಚಲಿಸುತ್ತಾರೆ. ಕಥೆ ಹೇಳುವವರು ಸಂಭಾಷಣೆ, ಹಾಡು ಹಾಗೂ ಸಂಗೀತದ ಮೂಲಕ ಕಥೆ ಹೇಳುತ್ತಾರೆ. ಈ ಕಲೆಯಲ್ಲಿ ಹೆಣ್ಣುಮಕ್ಕಳೂ ಇರುವರು. ಗಂಡಸರ ಜೊತೆಗೆ ಧ್ವನಿಗೂಡಿಸಿ ಹಾಡು ಹೇಳುತ್ತ ವಾದ್ಯ ನುಡಿಸುವರು. ಮುಖ್ಯ ಕಲಾವಿದರು ತೊಗಲು ಗೊಂಬೆಗಳನ್ನು ಕಥನಕ್ಕೆ ಅನುಗುಣವಾಗಿ ಕುಣಿಸುತ್ತ ಹಾಡು ಹೇಳುವರು. ನಡುನಡುವೆ ಪ್ರೇಕ್ಷಕರು ಬೇಸರಗೊಳ್ಳದಂತೆ ಹಾಸ್ಯ ಪ್ರಸಂಗಗಳನ್ನು ತಂದು ಕಥೆಯನ್ನು ಮುಂದುವರಿಸುವ ಕಲೆ, ಮುಖ್ಯ ಕಲಾವಿದನಿಗೆ ಇರುವುದು.

ಗೊಂಬೆಯಾಟದ ಪ್ರಕಾರಗಳಲ್ಲಿ ತೊಗಲು ಗೊಂಬೆಯಾಟಕ್ಕೆ ವಿಶಿಷ್ಟ ಸ್ಥಾನವಿದೆ. ಈ ಆಟದಲ್ಲಿ ರಾಮಾಯಣ,ಮಹಾಭಾರತ,ಜನಪದ ಕಥೆಗಳು,ನೀತಿ ಕಥೆಗಳು ಪ್ರದರ್ಶಿಸಲ್ಪಡುತ್ತವೆ. ತೊಗಲು ಗೊಂಬೆಯಾಟದಲ್ಲಿ ವಾದ್ಯ, ಸಂಗೀತ, ಗೀತೆ, ಸಂಭಾಷಣೆ, ಅಭಿನಯ, ಎಲ್ಲವೂ ಇರುವುದರಿಂದ ಇದನ್ನು ಸಮ್ಮಿಶ್ರ ಕಲೆಯೆಂದೇ ಹೇಳಬೇಕಾಗುತ್ತದೆ. ಈ ಆಟದ ಆರಂಭದಲ್ಲಿ ಗಣೇಶನ ಪೂಜಾ ಸನ್ನಿವೇಶ ಇರುವುದು. ಮುಕ್ತಾಯದಲ್ಲಿ ಮಂಗಲಗೀತೆ ಇರುವುದು ವಾಡಿಕೆ.

ಈ ಆಟದ ಕಲಾವಿದರ ವೇಷಭೂಷಣಗಳಲ್ಲಿ ವಿಶೇಷವೇನೂ ಇರುವುದಿಲ್ಲ. ಸಾಮಾನ್ಯವಾಗಿ ಕಚ್ಚೆಪಂಚೆ, ತಲೆಗೆ ಪೇಟ ಇಲ್ಲವೆ ಟೊಪ್ಪಿಗೆ, ಕಪ್ಪಿನ ಶರ್ಟು ಇವು ಗಂಡಸರ ವೇಷಗಳಾದರೆ ಸ್ತ್ರೀಯರು ಸೀರೆ, ಕುಪ್ಪಸ ತೊಡುವರು.ಇತ್ತೀಚೆಗೆ ಕೆಲವರು ಚೂಡಿದಾರ ವೇಶದಲ್ಲಿರುವರು.

ಒಟ್ಟಿನಲ್ಲಿ ತೊಗಲು ಗೊಂಬೆಯಾಟ ಒಂದು ಅದ್ಭುತ ಕೈಚಳಕದ ಆಟ. ಈ ಆಟದವರು ಸೀತಾಸ್ವಯಂವರ, ದ್ರೌಪದಿ ಸ್ವಯಂವರ, ತ್ರಿಪುರ ಸಂಹಾರ, ಶ್ರವಣಕುಮಾರನ ತಂದೆತಾಯಿಗಳ ಮೇಲಿನ ಭಕ್ತಿ ಮೊದಲಾದ ಪ್ರಸಂಗಗಳನ್ನು ಆಡಿ ಮನರಂಜನೆ ನೀಡುತ್ತಾರೆ. ಕೊಪ್ಪಳದ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ ಇವರು ತೊಗಲುಗೊಂಬೆ ಆಟದಲ್ಲಿ ವಿಶೇಷವಾಗಿ ಸಾಧನೆ ಮಾಡಿದ್ದಾರೆ. ಇವರನ್ನು ೨೦೨೫ನೇ ಸಾಲಿನ ಪದ್ಮಶ್ರೀ ಪುರಸ್ಕಾರದಿಂದ ಸನ್ಮಾನಿಸಲಾಯಿತು.



**ಶಬ್ದಗಳ ಅರ್ಥ :**

ಕಂಬಿ – ಕೋಲು; ಅಭಿನಯ – ನಟನೆ;
ಮಂಗಲ – ಶುಭಕರವಾದ; ಚರ್ಮ – ತೊಗಲು



**ಮಾತನಾಡೋಣ ಬನ್ನಿ.**

೧) ನಿನ್ನ ಬಳಿ ಯಾವ ತರಹದ ಗೊಂಬೆಗಳು ಇವೆ?

೨) ನೀನು ಗೊಂಬೆಯಾಟವನ್ನು ಎಲ್ಲಿ ನೋಡಿರುವೆ?



**ಕೆಳಗಿನ ಚಿತ್ರಕ್ಕೆ ಬಣ್ಣ ತುಂಬಿರಿ.**







**ಒಂದೇ ವಾಕ್ಯದಲ್ಲಿ ಉತ್ತರಿಸು.**

೧. ತೊಗಲು ಗೊಂಬೆ ಎಂತಹ ಕಲೆ?

..............................................................................................

೨. ಗೊಂಬೆಗಳನ್ನು ಯಾವ ವಸ್ತುವಿನಿಂದ ತಯಾರಿಸುತ್ತಾರೆ?

..............................................................................................

೩. ಯಾವ ಕಥೆಗಳನ್ನು ತೊಗಲು ಗೊಂಬೆಯಾಟದಲ್ಲಿ ತೋರಿಸುತ್ತಾರೆ?

..............................................................................................

೪. ತೊಗಲುಗೊಂಬೆ ಆಟ ಎಲ್ಲಿ ಪ್ರಸಿದ್ಧವಾಗಿದೆ?

..............................................................................................

**ಪದಬಂಧ ಬಿಡಿಸು.**

**ಎಡದಿಂದ ಬಲಕ್ಕೆ :**

೧. ತೊಗಲು ಗೊಂಬೆಯಾಟ ಯಾವ ಕಲೆಯಾಗಿದೆ. (೪)

೨. ಪಡೆದ ಶ್ರೇಯಸ್ಸು – (೨)

**ಮೇಲಿನಿಂದ ಕೆಳಗೆ :**

೧. ಗೆಲುವು ಇದರ ಸಮಾನ ಪದ (೨)

೨. ಕಣ್ಣು ಇದರ ಸಮಾನ ಪದ (೩)

೩. ಕರುಣಿಸು ಇದರ ಸಮಾನ ಪದ (೪)




**ತಿಳಿಯೋಣ ಬನ್ನಿ.**




- ಅಂತರ್ಜಾಲದ ಸಹಾಯದಿಂದ ಭೀಮವ್ವ ಅಜ್ಜಿಯ ಬಗ್ಗೆ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಿರಿ.

೧. ಪೂರ್ಣ ಹೆಸರು : ........................................................................

೨. ಜನ್ಮಸ್ಥಳ : ........................................................................

೩. ಪುರಸ್ಕಾರಗಳು : ........................................................................

೪. ವಿಶೇಷ ಸಾಧನೆ : ........................................................................

**ಸೂಚನೆ:** ಯೋಗ್ಯ ವಿರಾಮ ಚಿಹ್ನೆಗಳೊಂದಿಗೆ ಪಾಠದ ಐದಾರು ಸಾಲುಗಳಷ್ಟು ಅನುಲೇಖನವನ್ನು ಮಾಡಿಸಿಕೊಳ್ಳಿರಿ.

**ಕಲೆಯೇ ಜೀವನದ ನೆಲೆ**



# ೨೨. ಸರ್ವಜ್ಞನ ವಚನಗಳು





ಗುರುವಿಂದ ಬಂಧುಗಳು, ಗುರುವಿಂದ ದೈವಗಳು
ಗುರುವಿಂದಲಿಹುದು ಪುಣ್ಯವದು। ಜಗಕೆಲ್ಲ।
ಗುರುವಿಂದ ಮುಕ್ತಿ ಸರ್ವಜ್ಞ ॥

ಜ್ಞಾನದಿಂದಲಿ ಇಹವು, ಜ್ಞಾನದಿಂದಲಿ ಪರವು
ಜ್ಞಾನವಿಲ್ಲದಲೆ ಸಕಲವೂ। ತನಗಿದ್ದು।
ಹಾನಿ ಕಾಣಯ್ಯ ಸರ್ವಜ್ಞ ॥

ಮಾತು ಮಾತಿಗೆ ತಕ್ಕ, ಮಾತು ಕೋಟಿಗಳುಂಟು
ಮಾತಾಡಿ ಮನಕೆ ಮುನಿಸಕ್ಕು । ಮಾತಿನಲಿ ।
ಸೋತವನೇ ಜಾಣ ಸರ್ವಜ್ಞ ॥



**ಶಬ್ದಾರ್ಥ :**

ಇಹ – ಈ ಲೋಕ; ಪರ – ಬೇರೆ; ಹಾನಿ – ನಷ್ಟ; ಪುಷ್ಪ – ಹೂ
ಮುನಿಸು – ಸಿಟ್ಟು; ಕೋಟಿ – ಅನೇಕ, ಅಸಂಖ್ಯ; ಸಕಲ – ಎಲ್ಲ, ಸರ್ವ.



**ಮಾತಾಡೋಣ ಬನ್ನಿ.**

೧) ನೀವು ಯಾರ ಯಾರ ವಚನಗಳನ್ನು ಕೇಳಿದ್ದೀರಿ?

೨) ನಿಮಗೆ ಗೊತ್ತಿರುವ ವಚನಗಳನ್ನು ಹೇಳಿರಿ.



**ಒಂದು ವಾಕ್ಯದಲ್ಲಿ ಉತ್ತರ ಬರೆ.**

೧) ಯಾರಿಂದ ಮುಕ್ತಿ ದೊರೆಯುವುದು?

..............................................................................................

೨) ಜ್ಞಾನವಿಲ್ಲದಿದ್ದರೆ ಏನಾಗುವುದು?

..............................................................................................

೩) ಸರ್ವಜ್ಞ ಯಾರನ್ನು ಜಾಣ ಎಂದಿದ್ದಾನೆ?

..............................................................................................



**ಕೆಳಗಿನ ಬಿಟ್ಟ ಸ್ಥಳದಲ್ಲಿ ಕಂಸಿನಲ್ಲಿಯ ಯೋಗ್ಯ ಶಬ್ದಗಳನ್ನು ತುಂಬು.**

(ಮುನಿಸ, ಸಕಲ, ದೈವಗಳನ್ನು, ಕೋಟಿಗಳ)

೧. ..................... ವಿದ್ಯಾರ್ಥಿಗಳು ಪ್ರಾರ್ಥನೆಗೆ ಬಂದರು.

೨. ಜನರು ..................... ಭಕ್ತಿಯಿಂದ ಪೂಜಿಸುತ್ತಾರೆ.

೩. ಆಕಾಶದಲ್ಲಿ ..................... ಷ್ಟು ನಕ್ಷತ್ರಗಳಿವೆ.

೪. ಸ್ನೇಹಿತರೊಂದಿಗೆ ..................... ಬಾರದು.

- **ಸರ್ವಜ್ಞನು ಗುರುವಿನ ಮಹತ್ವವನ್ನು ಹೇಳಿದ ವಚನದ ಸಾಲುಗಳನ್ನು ಬರೆ.**

.................................................................................

.................................................................................

.................................................................................

.................................................................................

- **ಕೆಳಗೆ ಒಂದು ಜನಪದ ತ್ರಿಪದಿಯನ್ನು ಕೊಟ್ಟಿದೆ. ಶಿಕ್ಷಕ / ಪಾಲಕರಿಂದ ಅದರ ಅರ್ಥವನ್ನು ತಿಳಿ. ಹೊಸ ಶಬ್ದಗಳನ್ನು ಹುಡುಕಿ ಬರೆ.**

ಆಡಿ ಬಾ ನನ ಕಂದ ಅಂಗಾಲ ತೊಳದೇನ

ತೆಂಗಿನಕಾಯಿ ತಿಳಿನೀರ । ತಕ್ಕೊಂಡು ।

ಬಂಗಾರದ ಮೋರೆ ತೊಳದೇನ ॥

(ಮನೆಯಲ್ಲಿ ಅಮ್ಮ, ಅಜ್ಜಿ, ಅತ್ತೆ, ಚಿಕ್ಕಮ್ಮ ಇವರಿಂದ ಇನ್ನಷ್ಟು ಜನಪದ ತ್ರಿಪದಿಗಳನ್ನು ಕೇಳಿ ಹಾಡಲು ಕಲಿಯಿರಿ.)

- **ಭಾಷೆ ತಿಳಿಯೋಣ ಬಾ :**

- **ವಿರುದ್ಧಾರ್ಥಕ ಶಬ್ದಗಳನ್ನು ಪದ್ಯದಿಂದ ಹುಡುಕಿ ಬರೆ.**

೧) ಅಜ್ಞಾನ × ..................... ೨) ಪಾಪ × .....................

೩) ಲಾಭ × ..................... ೪) ಗೆದ್ದವ × .....................

- **ಕೊಟ್ಟ ಶಬ್ದಗಳಿಗೆ ಸಮಾನಾರ್ಥಕ ಶಬ್ದ ಬರೆ.**

ಉದಾ: ಗುರು : ಶಿಕ್ಷಕ, ಆಚಾರ್ಯ, ಉಪಾಧ್ಯಾಯ.

೧) ಜಗ : ................, ................, ................

೨) ಮಾತು : ................, ................, ................

೩) ಜಾಣ : ................, ................, ................

- ಒಂದು ಸುಂದರವಾದ ಹಣತೆ (ದೀಪ)ಯ ಚಿತ್ರ ಬಿಡಿಸಿ, ಅದಕ್ಕೆ ಬಣ್ಣ ಹಚ್ಚಿ ಅದರ ಕೆಳಗೆ 'ಜ್ಞಾನವೇ ಬೆಳಕು' ಎಂದು ಬರೆಯಿರಿ.

- ನಿಮ್ಮ ನೆಚ್ಚಿನ ಗುರುಗಳಿಗೆ ಧನ್ಯವಾದ ಹೇಳುವ ಸಲುವಾಗಿ ಒಂದು ಸುಂದರವಾದ ಕಾರ್ಡ್ ತಯಾರಿಸಿ ನಿನ್ನ ಅನಿಸಿಕೆ ಬರೆದು ಗುರುಗಳಿಗೆ ಕೊಡು.

- **ಕೆಳಗಿನ ಗಾದೆಮಾತುಗಳ ಅನುಲೇಖನ ಮಾಡು.**

೧) ಮುಂದೆ ಗುರಿ ಇರಬೇಕು, ಹಿಂದೆ ಗುರು ಇರಬೇಕು.

........................................................................................

೨) ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.

........................................................................................

೩) ವಿದ್ಯೆ ಕಲಿತು ಜಾಣನಾಗು.

........................................................................................

- **ಶಿಕ್ಷಕರ / ಪಾಲಕರ / ಅಂತರ್ಜಾಲದ ಸಹಾಯದಿಂದ ಸರ್ವಜ್ಞನ ಮಾಹಿತಿ ಸಂಗ್ರಹಿಸಿ ಬರೆ.**

೧) ಪೂರ್ಣ ಹೆಸರು : ........................................................................

೨) ತಂದೆ -ತಾಯಿ : ........................................................................

೩) ಊರು : ........................................................................

೪) ಸರ್ವಜ್ಞನಿಗಿರುವ ಹೆಸರುಗಳು: ........................................................................

**ಆಡು ಮುಟ್ಟದ ಗಿಡವಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ.**

# ೨೩. ವಾಚನ ಪ್ರೇರಣೆ ದಿನಾಚರಣೆ



(ಮೂರನೇ ವರ್ಗದ ಮಕ್ಕಳು ವಾಚನ ಪ್ರೇರಣೆ ದಿನಾಚರಣೆ ಆಚರಿಸುವ ಹೊಣೆಯನ್ನು ವಹಿಸಿಕೊಂಡಿದ್ದಾರೆ. ಸಭಾಗೃಹದಲ್ಲಿ ಎಲ್ಲ ಮಕ್ಕಳು ಸೇರಿದರು. ಮುಖ್ಯ ಗುರುಗಳು ಹಾಗೂ ಉಳಿದ ಅಧ್ಯಾಪಕರು ಆಗಮಿಸಿದರು)

**ಶೃತಿ :** ನಮಸ್ಕಾರ ನಾವೆಲ್ಲರೂ ವಾಚನ ಪ್ರೇರಣೆ ದಿನಾಚರಣೆಯ ಸಮಾರಂಭಕ್ಕಾಗಿ ಇಲ್ಲಿ ಸೇರಿದ್ದೇವೆ. ಇಂದಿನ ನಮ್ಮ ಸಭೆಗೆ ರಕ್ಷಿತಾ ಅಧ್ಯಕ್ಷತೆಯ ಸ್ಥಾನ ವಹಿಸಬೇಕೆಂದು ವಿನಂತಿಸಿಕೊಳ್ಳುವೆ.

(ರಕ್ಷಿತಾ ಎದ್ದು ಸಭೆಗೆ ವಂದಿಸಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದಳು)

**ಶೃತಿ :** ಇಂದಿನ ಕಾರ್ಯಕ್ರಮವನ್ನು ಸರಸ್ವತಿ ಪ್ರಾರ್ಥನೆಯೊಂದಿಗೆ ಆರಂಭಿಸೋಣ. ರಶೀದಾ, ಅಕ್ಷತಾ, ಸಂಜೀವಿನಿ ಮತ್ತು ಅಕ್ಷಯ ಇವರು ಪ್ರಾರ್ಥನೆಯನ್ನು ಹಾಡಲಿದ್ದಾರೆ.

(ಪ್ರಾರ್ಥನೆಯ ಗೀತೆ 'ಸರಸ್ವತಿ ನಿ ಭಾರತಿ, ನೀಡು ನಮಗೆ ಸನ್ಮತಿ...' ಎಂದು ಹಾಡುವರು.)

**ಶೃತಿ :** ಸುಂದರವಾಗಿ ಮತ್ತು ರಾಗಬದ್ಧವಾಗಿ ಪ್ರಾರ್ಥನೆಯನ್ನು ಹಾಡಿದ ನನ್ನ ಸಹಪಾಠಿಗಳಿಗೆ

ಧನ್ಯವಾದಗಳು.

ಈಗ ಮೂರನೇ ವರ್ಗದ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಯನ್ನು ಹಾಡಲಿದ್ದಾರೆ.

(ದೇಶಭಕ್ತಿ ಗೀತೆ ಹಾಡುವರು)

**ಶೃತಿ :** 'ಒಂದೇ ಒಂದೇ ನಾವೆಲ್ಲರೂ ಒಂದೇ' ಎಂಥ ಸುಂದರ ಗೀತೆ, ನಿಮ್ಮೆಲ್ಲರಿಗೂ ಈ ಗೀತೆ ಹಿಡಿಸಿತಲ್ಲವೇ? ನಕ್ಷ, ನಾಯರಾ, ಚೈತ್ರ, ಆಸಿಫ್, ಅಸ್ಮಿತಾ, ಜೋಸೆಫ್ ಮತ್ತು ಶ್ರಾವ್ಯ ನೀವು ಗೀತೆಯನ್ನು ಮಧುರವಾಗಿ ಹಾಡಿದಿರಿ. ನಿಮಗೆಲ್ಲರಿಗೂ ಧನ್ಯವಾದಗಳು.

ಈಗ ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ಅವರ ಬಾಲ್ಯದಲ್ಲಿ ನಡೆದ ಘಟನೆಯನ್ನು ಏಕಪಾತ್ರ ಅಭಿನಯ ಮಾಡಲು ಬರಲಿದ್ದಾರೆ ಐದನೆಯ ತರಗತಿಯ ವಿದ್ಯಾರ್ಥಿ ಸಂಜಯ.

(ಏಕಪಾತ್ರಾಭಿನಯ ಮಾಡುವನು)

**ಶೃತಿ :** ತುಂಬಾ ಸುಂದರವಾಗಿ ಅಭಿನಯ ಮಾಡಿರುವ ಸಂಜಯನಿಗೆ ಅಭಿನಂದನೆಗಳು. ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ಅವರ ಬಗ್ಗೆ ಸುಂದರವಾಗಿ ವ್ಯಕ್ತಿ ಚಿತ್ರಣ ಸಾದರಪಡಿಸಿದಕ್ಕೆ ತುಂಬಾ ತುಂಬಾ ಧನ್ಯವಾದಗಳು. ಈಗ 'ವಾಚನ ಪ್ರೇರಣೆ ದಿನಾಚರಣೆ'ಯ ಬಗ್ಗೆ ಭಾಷಣ ಮಾಡಲು ಬರಲಿದ್ದಾನೆ.ಆರನೆಯ ತರಗತಿಯ ವಿದ್ಯಾರ್ಥಿ ಜಿಗರ.

(ಭಾಷಣ ಮಾಡುವನು)

**ಶೃತಿ :** ಅತೀ ಸರಳ ಭಾಷೆಯಲ್ಲಿ, ಸ್ಪಷ್ಟವಾಗಿ ತನ್ನ ವಿಚಾರ ವ್ಯಕ್ತಪಡಿಸಿರುವ ಜಿಗರನಿಗೆ ಅಭಿನಂದನೆಗಳು ಮತ್ತು ಧನ್ಯವಾದಗಳು.

ಇಂದಿನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ರಕ್ಷಿತಾಳು ಒಂದೆರಡು ಮಾತುಗಳನ್ನು ಹೇಳಬೇಕೆಂದು ಕೇಳಿಕೊಳ್ಳುವೆ.

(ಅಧ್ಯಕ್ಷರ ಭಾಷಣ ನಡೆಯುವುದು)

**ಶೃತಿ :** ಎಲ್ಲ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡು, ತನ್ನ ಸಹಪಾಠಿಗಳಿಗೆ ಪ್ರೋತ್ಸಾಹ ನೀಡಿ ಉತ್ತಮ ಮಾತುಗಳನ್ನು ಹೇಳಿದ್ದಕ್ಕಾಗಿ ಅಧ್ಯಕ್ಷರಿಗೆ ಧನ್ಯವಾದಗಳು.

ಸಭೆಗೆ ಆಗಮಿಸಿದ ನಿಮ್ಮೆಲ್ಲರಿಗೂ ನನ್ನ ಧನ್ಯವಾದಗಳು.

(ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಗುತ್ತದೆ)



**ಶಬ್ದಾರ್ಥ :**

ವಾಚನ – ಓದು; ಪ್ರೇರಣೆ – ಪ್ರೋತ್ಸಾಹ; ಹೊಣೆ – ಜವಾಬ್ದಾರಿ; ಮುಕ್ತಾಯ – ಕೊನೆ.



**ಮಾತನಾಡೋಣ ಬನ್ನಿ.**

೧) ನಿಮ್ಮ ಶಾಲೆಯಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಮಾಡುತ್ತೀರಿ?

೨) ನಿಮ್ಮ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮದ ತಯಾರಿ ಹೇಗೆ ಮಾಡುತ್ತೀರಿ?



**'ನಿಮ್ಮ ಶಾಲೆಯಲ್ಲಿ ಯಾವ ಯಾವ ದಿನಾಚರಣೆಗಳನ್ನು ಆಚರಿಸುತ್ತಾರೆ' ಎಂಬುದನ್ನು ದಿನಾಂಕ ಸಹಿತ ಬರೆಯಿರಿ.**

ಉದಾ:– ೧೪ ನವೆಂಬರ್ – ಮಕ್ಕಳ ದಿನಾಚರಣೆ

೧) ..........................................................................

೨) ..........................................................................

೩) ..........................................................................

೪) ..........................................................................



**ನಿಮ್ಮ ಶಾಲೆಯಲ್ಲಿ ಆಚರಿಸಿದ 'ಸ್ವಾತಂತ್ರ್ಯ ದಿನಾಚರಣೆ'ಯ ಕುರಿತು ಬರೆ.**

..........................................................................................................

..........................................................................................................

..........................................................................................................

..........................................................................................................

..........................................................................................................



**ಡಾ|| ಎ.ಪಿ.ಜೆ ಅಬ್ದುಲ್ ಕಲಾಂರ ಬಗ್ಗೆ ಭಾಷಣವನ್ನು ವರ್ಗದಲ್ಲಿ ಸಾದರಪಡಿಸು.**

**ಸೂಚನೆ** – ಶಾಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿ ಮಕ್ಕಳಲ್ಲಿ ಔಪಚಾರಿಕ ನಿರೂಪಣೆಯ ಕೌಶಲ್ಯವನ್ನು ಬೆಳೆಸಿರಿ.

**ಓದು ಬರಹ ಕಲಿಯೋಣ; ಬದುಕಿನ ದಾರಿ ತಿಳಿಯೋಣ**



# ೨೪. ಚೆಲುವಿನ ಮುದ್ದಿನ ಮಕ್ಕಳು





ಚೆಲುವಿನ ಮುದ್ದಿನ ಮಕ್ಕಳೆ

ಚೆಲುವಿನ ಮುದ್ದಿನ ಮಕ್ಕಳೆ

ಮನೆ ಮನೆಯ ಅಂಗಳದಿ ಅರಳಿರುವ ಹೂವುಗಳೆ

ನಾಳೆ ದಿನ ನಾಡಿದನು ನಡೆಸುವವರು ನೀವುಗಳೆ ॥ಪ॥

ತಂದೆ- ತಾಯಿ ಹೇಳಿದ ರೀತಿ ನಡೆಯಲು ಬೇಕು

ಶಾಲೆಯ ಗುರುಗಳು ಕಲಿಸಿದ ಪಾಠ ಕಲಿಯಲು ಬೇಕು

ದೊಡ್ಡವರಲ್ಲಿ ಭಕ್ತಿ ಗೌರವ ತೋರಲು ಬೇಕು

ನಡೆ ನುಡಿಯಲ್ಲಿ ಸತ್ಯವ ಎಂದು ಪಾಲಿಸಬೇಕು ॥೧॥

ಸ್ನೇಹಿತರಲ್ಲಿ ಪ್ರೀತಿಯ ತೋರಿ ಸೋದರ ಭಾವದಿ ನೋಡಿ

ಸೋಮಾರಿಯಾಗದೆ ಕೊಟ್ಟಿಹ ಕೆಲಸವ ತಪ್ಪದೆ ಮಾಡಿ

ಯಾರೇ ಆಗಲಿ ಕಷ್ಟದಲ್ಲಿದ್ದರೆ ಸಹಾಯ ಹಸ್ತವ ನೀಡಿ

ಭೇದವ ತೊರೆದು ಬಾಳಿರಿ ಎಂದು ಎಲ್ಲರು ಒಂದು ಗೂಡಿ. ॥೨॥

– ಆರ್.ಎನ್. ಜಯಗೋಪಾಲ



**ಶಬ್ದಾರ್ಥ :**

ಚೆಲುವು – ಸುಂದರ; ಮುದ್ದಿನ – ಪ್ರೀತಿಯ;

ಸ್ನೇಹಿತ – ಗೆಳೆಯ; ಹಸ್ತ=ಕೈ.



**ಮಾತನಾಡೋಣ ಬನ್ನಿ.**

೧) ಮನೆಯಲ್ಲಿ ನಿಮಗೆ ಯಾರು ಬುದ್ಧಿ ಮಾತು ಹೇಳುವರು?

೨) ನಾವು ಗೆಳೆಯರೊಂದಿಗೆ ಹೇಗೆ ವರ್ತಿಸಬೇಕು?

೩) ನೀವು ಯಾರಿಗಾದರು ಸಹಾಯ ಮಾಡಿದ್ದೀರಾ? ಯಾವ ರೀತಿಯ ಸಹಾಯ ಮಾಡಿದ್ದೀರಿ?

**ಒಂದೇ ವಾಕ್ಯದಲ್ಲಿ ಉತ್ತರಿಸಿ.**

೧. ಮಕ್ಕಳನ್ನು ಇಲ್ಲಿ ಯಾವುದಕ್ಕೆ ಹೋಲಿಸಿದ್ದಾರೆ?

........................................................................................................

೨. ಮಕ್ಕಳು ಯಾರು ಯಾರು ಹೇಳಿದ ರೀತಿಯಲ್ಲಿ ನಡೆಯಬೇಕು?

........................................................................................................

೩. ದೊಡ್ಡವರಲ್ಲಿ ಏನನ್ನು ತೋರಲು ಬೇಕು?

........................................................................................................

೪. ಯಾರನ್ನು ಸೋದರ ಭಾವನೆಯಿಂದ ನೋಡಬೇಕು?

........................................................................................................

೫. ಯಾರಿಗೆ ಸಹಾಯ ಹಸ್ತವ ನೀಡಬೇಕು?

........................................................................................................

**'ಸ್ನೇಹಿತರಲ್ಲಿ ಪ್ರೀತಿಯ ತೋರಿ ಸೋದರ ಭಾವದಿ ನೋಡಿ' ಎಂಬ ಕವಿತೆಯ ಸಾಲಿನ ಅರ್ಥವನ್ನು ಬರೆ.**

........................................................................................................

........................................................................................................

........................................................................................................

**ಹೊಂದಿಸಿ ಬರೆ.**

| (ಅ) | | (ಬ) |
|---|---|---|
| ೧) ದೊಡ್ಡವರಲ್ಲಿ | ........................ | ಅ) ಬಾಳಿರಿ |
| ೨) ನಡೆ ನುಡಿಯಲ್ಲಿ | ........................ | ಬ) ಸಹಾಯ ಹಸ್ತವ ನೀಡಿ |
| ೩) ಕಷ್ಟದಲ್ಲಿದ್ದರೆ | ........................ | ಕ) ಸತ್ಯವ ಪಾಲಿಸು |
| ೪) ಭೇದವ ತೊರೆದು | ........................ | ಡ) ಭಕ್ತಿ ಗೌರವ ತೋರು |

**ಕವಿತೆಯ ಸಾರಾಂಶವನ್ನು ನಾಲ್ಕಾರು ವಾಕ್ಯಗಳಲ್ಲಿ ಬರೆ.**

........................................................................................................

........................................................................................................

........................................................................................................

........................................................................................................



**ಕೊಟ್ಟ ಶಬ್ದಗಳನ್ನು ವಿಂಗಡಿಸಿ ಬರೆ:**

ನಾಡು, ತಂದೆ, ತಾಯಿ, ಹೂವು, ಶಾಲೆ, ಮನೆ, ಸೋದರ, ಸಹೋದರಿ, ರಾಣಿ, ವಿಜಯ, ರಾಜ, ವೀಣಾ.

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| | | |
| | | |
| | | |
| | | |



**ಕೆಳಗಿನ ಪದಗಳನ್ನು ನಿನ್ನ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆ.**

೧) ಗೌರವ : ..............................................................................

೨) ಮುದ್ದಿನ : ..............................................................................

೩) ಸತ್ಯ : ..............................................................................

೪) ಸೋಮಾರಿ : ..............................................................................

**ಕೊಟ್ಟ ಶಬ್ದಗಳನ್ನು ಬಹುವಚನದಲ್ಲಿ ಬರೆ.**



| ಏಕವಚನ | ಬಹುವಚನ |
|---|---|
| ಮಗು | .......................... |
| ಹೂ | .......................... |
| ಸ್ನೇಹಿತ | .......................... |
| ಅಕ್ಕ | .......................... |
| ಸೋಮಾರಿ | .......................... |

ಪರರ ಹಿತ ನಮ್ಮ ಹಿತ

# ಶಬ್ದಕೋಶ

(ಅ)

ಅಪ್ಪ – ತಂದೆ, ಜನಕ, ಜನ್ಮದಾತ, ಪಿತ

ಅಪಾಯ – ಸಂಕಟ, ಕಷ್ಟ ತೊಂದರೆ,ಬಿಕ್ಕಟ್ಟು,

(ಆ)

ಆಭರಣ – ಒಡವೆ

ಆವಿ – ಭಾಷ್ಪ, ಹೊಗೆ, ಅನಿಲ, ಉಗಿ

ಆಲಿಸು – ಕಿವಿಗೊಟ್ಟು ಕೇಳು, ಶ್ರವಣ ಮಾಡು,

ಆಶ್ಚರ್ಯ– ಕುತೂಹಲ.

(ಇ)

ಇಣುಕು – ಬಗ್ಗಿ ನೋಡು, ಕದ್ದು ನೋಡು

ಇರುಳು– ರಾತ್ರಿ, ರಜನಿ, ತಮ

(ಉ)

ಉದ್ಯಾನ – ವನ, ತೋಟ

ಉಡುಗೆ – ಬಟ್ಟೆ, ವಸ್ತ್ರ, ಅರಿವೆ

ಉಯ್ಯಾಲೆ – ಜೋಕಾಲಿ

(ಒ)

ಒಡಕು – ಒಡೆದ, ಸೀಳಿದ, ಬಿರುಕು ಬಿಟ್ಟ

(ಕ)

ಕಲ್ಪಿತ – ಕಲ್ಪನೆಯ

ಕಾಡು– ಅರಣ್ಯ, ಅಡವಿ, ಕಾನನ, ವಿಪಿನ

(ಗ)

ಗಾಬರಿ – ಭಯ, ಹೆದರಿಕೆ, ಅಂಜಿಕೆ

ಗುಟ್ಟು – ಗುಪ್ತ ಸಂಗತಿ, ತಿಳಿಯದ ವಿಷಯ.

(ಘ)

ಘಮಘಮ – ಸುವಾಸನೆ, ಪರಿಮಳ

(ಚ)

ಚತುರ– ಜಾಣ, ಬುದ್ಧಿವಂತ, ಚಾಣಾಕ್ಷ.

ಚಂದಿರ– ಸೋಮ, ಇಂದಿರ, ಶಶಿ, ತಿಂಗಳು.

ಚೀರಾಡು – ಒದರಾಡು, ಕೂಗಾಡು, ಜೋರಾಗಿ ಹೇಳು, ಗಟ್ಟಿಯಾಗಿ ಹೇಳು, ಕಿರುಚು

(ಜ)

ಜೀಕು –ತೂಗು

(ನ)

ನಿಜ – ಸತ್ಯ

ನೀರೂರು – ಇಚ್ಛೆಯಾಗು, ಆಸೆಯಾಗು

ನೀರು– ಜಲ, ಪಯ

ನುಣುಪು – ಹೊಳೆಯುವ, ಮಿನುಗುವ, ಮೆರಗು

ನುಂಗು – ಗಂಟಲಿಗೆ ಇಳಿಸು

ನೆರಳು – ಛಾಯೆ, ಪ್ರತಿಬಿಂಬ

(ಪ)

ಪಠಿಸು – ಹೇಳು, ಓದು, ಜಪಿಸು.

(ಬ)

ಬಹುಮಾನ – ಪಾರಿತೋಷಕ

ಬೀಗ – ಕೀಲಿ.

ಭೂಮಿ– ಧರೆ, ಅವನೀ, ಭೂ, ಇಳೆ, ಧರಣಿ, ಧರಿತ್ರಿ,

ಭೋಜನ – ಊಟ

(ಮ)

ಮಗ–ತನಯ.,ಪುತ್ರ, ಚಿರಂಜೀವಿ

ಮಗ್ನ– ತಲ್ಲೀನ

ಮರ್ಮ – ಅರ್ಥ, ಸಾರ

ಮರ – ತರು, ವೃಕ್ಷ

ಮೂರ್ಖ– ದಡ್ಡ

ಮೂರ್ಛೆ – ಪ್ರಜ್ಞೆ ತಪ್ಪು. ತಲೆ ತಿರುಗು, ಕಣ್ಣಿಗೆ ಕತ್ತಲೆ ಬರು.

ಮೋಡ–ಜಲಧಿ, ಮೇಘ,

ಮೋಸ–ವಂಚನೆ.

(ರ)

ರಕ್ಕಸ– ರಾಕ್ಷಸ.

ರವಿ– ಸೂರ್ಯ. ಭಾಸ್ಕರ, ಆದಿತ್ಯ

(ವ)

ವರ್ಣಮಾಲೆ – ಅಕ್ಷರಮಾಲೆ

ವರ್ತುಳ– ದುಂಡಾದ, ಗೋಲಾಕಾರ

(ಶ)

ಶಾಖ– ಬಿಸಿ, ಉಷ್ಣತೆ, ಕಾವು

(ಸ)

ಸಡಗರ– ಸಂಭ್ರಮ

ಸರ್ವ– ಎಲ್ಲ, ಸಕಲ

ಸನ್ನೆ – ಸಂಕೇತ

ಸಹೋದರ – ಅಣ್ಣ– ತಮ್ಮ

ಸಹೋದರಿ – ಅಕ್ಕ –ತಂಗಿ

ಸಾಗರ – ರತ್ನಾಕರ, ಸಮುದ್ರ

ಸುದ್ದಿ – ಸಮಾಚಾರ, ವಾರ್ತೆ

ಸುಲಭ–ಸರಳ

ಸೊಬಗು– ಸೌಂದರ್ಯ

ಸೋಜಿಗ – ಆಶ್ಚರ್ಯ

ಸಂಗಣಕ – ಕಂಪ್ಯೂಟರ್

ಸಂದೂಕು – ಪೆಟ್ಟಿಗೆ

ಸಂಭವಿಸು– ಘಟಿಸು, ನಡೆದುಹೋಗು

ಸಂಶಯ – ಅಪನಂಬಿಕೆ, ಅನುಮಾನ ಪಡು

(ಹ)

ಹಿತ್ತಲು – ಮನೆಯ ಹಿಂದಿನ ಸ್ಥಳ.

ಹಿರಿಹಿರಿ ಹಿಗ್ಗು – ಸಂತೋಷಪಡು, ಆನಂದ ಪಡು, ಖುಷಿಪಡು, ಸಂಭ್ರಮಿಸು

ಪ್ರಿಯ ಮಕ್ಕಳೇ!

ಯಾರಾದರೂ ನಿಮ್ಮೊಂದಿಗೆ ಅಸಭ್ಯವಾಗಿ ಸ್ಪರ್ಶಿಸುತ್ತಿದ್ದಾರೆ ಎಂಬ ಅನುಭವವಾಗಿದ್ದರೆ, ನೀವೆಂದಿಗೂ ಮೌನವಾಗಿರಬಾರದು. ನೀವು ಈ ಕೆಳಗಿನ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

1. ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ.
2. ನೀವು ನಂಬಿದ ವ್ಯಕ್ತಿಗೆ ತಕ್ಷಣ ಹೇಳಿ.
3. ನೀವು POCSO e-box ಮೂಲಕ ಮಕ್ಕಳ ಹಕ್ಕು ರಕ್ಷಣಾ ರಾಷ್ಟ್ರೀಯ ಆಯೋಗ (NCPCR) ಕ್ಕೆ ಮಾಹಿತಿಯನ್ನು ತಿಳಿಸಬಹುದು.

**ನಿಮ್ಮನ್ನು ಅಸುರಕ್ಷಿತವಾಗಿ ಸ್ಪರ್ಶಿಸಿದಾಗ ನೀವು ಖಿನ್ನತೆ, ಗೊಂದಲ ಮತ್ತು ಸಹಾಯವಿಲ್ಲದಂತೆ ಎಂದು ಭಾವಿಸಬಾರದು. ಆದರೆ ಇದರಲ್ಲಿ ನಿಮ್ಮದೇನು ತಪ್ಪು ಇರುವದಿಲ್ಲ.**




**ಈ ಬಟನನ್ನುಒತ್ತಿರಿ**

POCSO e-box ಅನ್ನು NCPCR@gov.in ನಲ್ಲಿ ಸಂಪರ್ಕಿಸಬಹುದು.

**ನೀವು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೆ ಮತ್ತು ನೀವು ತಪ್ಪು ಗ್ರಹಿಕೆಗಳನ್ನು ಮಾಡಿಕೊಳ್ಳುವವರಾಗಿದ್ದರೆ ಅಥವಾ ತೊಂದರೆ ಅನುಭವಿಸುತ್ತಿದ್ದರೆ ಅಥವಾ ಯಾರಾದರೂ ತೊಂದರೆಯಲ್ಲಿ ಇದ್ದಾರೆಂದು ತಿಳಿದರೆ ತಕ್ಷಣ 1098 ಕ್ಕೆ ಕರೆಮಾಡಿ.... ಏಕೆಂದರೆ ಕೆಲವೊಂದು ಕರೆಗಳು ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಜೀವನವನ್ನೇ ಬದಲಾಯಿಬಹುದು.**

CHILD LINE
1098
NIGHT & DAY

**ಚೈಲ್ಡಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲಫ್ರೀ ರಾಷ್ಟ್ರೀಯ ಅಪತ್ಕಾಲದ ಫೋನ್ ಸೇವೆಯಾಗಿದೆ. ಇಂಡಿಯಾ ಫೌಂಡೇಶನ್‌ನ ಒಂದು ಉಪಕ್ರಮವಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬೆಂಬಲಿತವಾಗಿದೆ.**

नए समाज की ओर
Towards a new dawn

**''ವಿದ್ಯಾರ್ಥಿಗಳಿಗೆ ಯೊಗ್ಯಸ್ಪರ್ಶ - ಅಯೊಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ''**

# राज्यगीत

जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।

काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

बालभारती इयत्ता तिसरी (कन्नड)

₹ 68.00